ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು

ಹೆಚ್.ಜಿ.ಪುಷ್ಪ

ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ

ಕನ್ನಡ ಉಪನ್ಯಾಸಕರು

ಜೆ.ಎಸ್.ಎಸ್. ಸ್ನಾತಕೋತ್ತರ ವಿಭಾಗ

ಚಾಮರಾಜನಗರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮-೦೯

615

ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು

ಹೆಚ್.ಜಿ.ಪುಷ್ಪ

ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ

ಕನ್ನಡ ಉಪನ್ಯಾಸಕರು

ಜೆ.ಎಸ್.ಎಸ್. ಸ್ನಾತಕೋತ್ತರ ವಿಭಾಗ

ಚಾಮರಾಜನಗರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮-೦೯

ದೃಢೀಕರಣಪತ್ರ

೨೦೦೮–೦೯ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTMKS - 00322ರ ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಹೆಚ್.ಜಿ.ಪುಷ್ಪ ಅವರು ನನ್ನ ಮಾರ್ಗದರ್ಶನದಲ್ಲಿ **"ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

(ಸಹಿ)

(ಡಾ. ಎನ್.ಮಹೇಶ್ವರಿ)
ಕನ್ನಡ ಉಪನ್ಯಾಸಕರು
ಜೆ.ಎಸ್.ಎಸ್. ಸ್ನಾತಕೋತ್ತರ ವಿಭಾಗ
ಚಾಮರಾಜನಗರ

ಮೈಸೂರು
ದಿನಾಂಕ: 30-09-09

ಅಭ್ಯರ್ಥಿಯ ಘೋಷಣಾಪತ್ರ

"ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ KVTMKS - 00322ರ ವಿದ್ಯಾರ್ಥಿಯಾದ ನಾನು ೨೦೦೮-೦೯ನೇ ಸಾಲಿನ ಪರೀಕ್ಷೆಗಾಗಿ **ಡಾ. ಎನ್.ಮಹೇಶ್ವರಿ, ಉಪನ್ಯಾಸಕರು, ಜೆ.ಎಸ್.ಎಸ್. ಸ್ನಾತಕೋತ್ತರ ವಿಭಾಗ, ಚಾಮರಾಜನಗರ** ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು

ದಿನಾಂಕ : 30/09/09

(ಹೆಚ್.ಜಿ.ಪುಷ್ಪ)
೨೦೦೮-೦೯ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿನಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪ ರಿ ವಿ ಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

"ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ" ಸಾಹಿತ್ಯ ಅಧ್ಯಯನ ಎಂಬುದು ಸದಾ ಅರಿವಿನ ಎಲ್ಲೆಗಳನ್ನು ವಿಸ್ತರಿಸಬಲ್ಲ ಒಂದು ಕ್ರಿಯೆ, ಅಂದರೆ ಸೃಜನಶೀಲ ಬರೆಹಗಳ ಬಗೆಗಿನ ನಮ್ಮೆಲ್ಲರ ಅಕ್ಕರೆ ತೀರಾ ಹಳೆಯದು. ಆದರೂ ಕನ್ನಡ ಸಾಹಿತ್ಯ ಚರಿತ್ರೆಯನ್ನು ನೋಡಿದಾಗ, ಮಹಿಳೆಯರು ಬರೆದದ್ದು ಕಡಿಮೆ, ಮಾತನಾಡಿದ್ದು ಕಡಿಮೆ, ಹೆಚ್ಚು ವಸ್ತುನಿಷ್ಠವಾಗಿ ಸಾಹಿತ್ಯ ನೀಡಿದ್ದು ಅತ್ಯಲ್ಪ. ಇದು ವೀರಶೈವ ಸಾಹಿತ್ಯದ ವಚನಕಾರ್ತಿಯರು, ಆಧುನಿಕ ಸಾಹಿತ್ಯದಲ್ಲಿ ಸ್ತ್ರೀವಾದಿ ಸಾಹಿತ್ಯವನ್ನು ಹೊರತಾಗಿ ಗುರುತಿಸಬಹುದು. ಈ ನೆಲೆಯಿಂದ ವಿಜಯಾದಬ್ಬೆ ಸಾಹಿತ್ಯ ಅಧ್ಯಯನವು, ಬದುಕಿನ ಚೋದ್ಯಕ್ಕೆ ಜನಮಾನಸದ ಒಳಗಿನ ಸೂಕ್ಷ್ಮಾತಿ ಸೂಕ್ಷ್ಮಸಂಗತಿಗಳನ್ನು ತಿಳಿಸುತ್ತ ವೈಚಾರಿಕತೆಯ ಮೂಲಕ ವ್ಯಕ್ತಿತ್ವದ ಒಳಗಿರುವ ಕುಬ್ಜತೆ, ನೀಚತನ, ವಿಕಾರ ಮತ್ತು ಕ್ರೌರ್ಯದ ಅಂಶಗಳನ್ನು ತೊಡೆದುಹಾಕಲು ಮಾರ್ಗವಾಗುತ್ತದೆ. ಮತ್ತು ಸ್ತ್ರೀವಾದಿ ಸಾಹಿತ್ಯದ ಒಂದು ವಿಕಸನದ ಹಾದಿಯನ್ನು ನೋಡಲು ಈ ಅಧ್ಯಯನವು ಅವಕಾಶ ಒದಗಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಹರವು ಹತ್ತೊಂಬತ್ತನೆ ಶತಮಾನದ ಕೊನೆ ಇಪ್ಪತ್ತನೆ ಶತಮಾನದ ಮೊದಲಲ್ಲಿ ಆರಂಭವನ್ನು ಗುರುತಿಸಿಕೊಂಡಿರುವುದು ತಿಳಿದ ಸಂಗತಿ. ಆದರೂ, ಈ ಆಧುನಿಕ ಸಾಹಿತ್ಯದ ಕೆಲವು ಮಜಲುಗಳನ್ನು ಮಾಡಿಕೊಳ್ಳಲಾಗಿದ್ದು, ಈ ವಿಭಜನೆಯು ಸಾಹಿತ್ಯ ರಚನೆಯ ಹಿಂದಿನ ಸಂದರ್ಭ, ಪರಿಸರ ಪ್ರೇರಣೆ, ಸಾಹಿತ್ಯವಸ್ತುವಿನ ಧೋರಣೆಯನ್ನು ಆಧರಿಸಿ ಮಾಡಲಾಗಿದೆ. ಅವುಗಳನ್ನು ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬುದಾಗಿ ಆಧುನಿಕ ಕನ್ನಡದ ಹಂತಗಳನ್ನು ಅಭ್ಯಾಸಿಸುತ್ತ ಬಂದಿದ್ದೇವೆ. ಆದರೂ ಬಹುಮುಖ್ಯ ಅಂಶವೆಂದರೆ ಸ್ತ್ರೀವಾದಿ ಸಾಹಿತ್ಯ, ಮುಸ್ಲಿಂ ಬರೆಹಗಳನ್ನು ಪ್ರತ್ಯೇಕ ಹಂತಗಳಾಗಿ ಗುರುತಿಸಿಕೊಳ್ಳುವುದು ಕಂಡುಬರುವುದಿಲ್ಲ. ಕಾರಣ ಸ್ತ್ರೀವಾದಿ ಸಂವೇದನೆಯ ಸಾಹಿತ್ಯ ಕೂಡ ಶೋಷಿತ, ಸಮಾಜದ ಎರಡನೇ ದರ್ಜೆಯ, ಸಮಾಜಕ್ಕೆ ನೇರವಾಗಿ ಅಂದರೆ ವಸ್ತುನಿಷ್ಠವಾಗಿ ಬರೆಯದ, ಪುರುಷ ಪ್ರಧಾನ ಸಿದ್ಧನೆಲೆಯಲ್ಲಿ ರಚನೆ ಕಂಡುಬರುತ್ತದೆ ಎಂದು. ಹಾಗೂ ಅಡುಗೆ ಮನೆ ಸಾಹಿತ್ಯ ಎಂದು ಗುರುತಿಸುತ್ತಿದ್ದು ಮತ್ತು ಮನರಂಜನೆ ಮತ್ತು ಜನಪ್ರಿಯ ಸಾಹಿತ್ಯ ರಚನೆಗೆ ಒತ್ತುಕೊಟ್ಟು ಬಂದಿವೆ ಎಂಬ ಅನಿಸಿಕೆಗಳು ಮೂಡಿದ್ದ ಸಂದರ್ಭದಲ್ಲಿ ಸ್ತ್ರೀ ವಾದಿ ಸಾಹಿತ್ಯದ ಬೆಳಕು ಮೂಡಿತು.

ಸಮಾಜಮುಖಿಯಾದ, ವಿಚಾರಪರತೆಯ ಕೊರತೆ ಮಹಿಳಾ ಸಾಹಿತ್ಯದಲ್ಲಿ ಇದೆ ಎಂದು ಗುರುತಿಸುತ್ತಿದ್ದ ಸಂದರ್ಭದಲ್ಲಿ. ಸ್ತ್ರೀವಾದಿ ವಿಮರ್ಶಾ ಬರೆಹಗಳ ಮೂಲಕ, ವೈಚಾರಿಕ ವಿಚಾರಗಳು, ಸಂಶೋಧನೆಗಳು ಆಧುನಿಕ ಸಾಹಿತ್ಯದಲ್ಲಿ ಎಂಬತ್ತರ ದಶಕದಲ್ಲಿ ಕಾಣಿಸಿಕೊಂಡಿತು. ಇದು ಉಜ್ವಲವಾಗಿ ಕೆಲವು ಬರೆಹಗಾರ್ತಿಯರ ಮೂಲಕ ಸಮಾಜಮುಖಿಯಾಗಿ ತೆರೆದುಕೊಂಡಿರುವುದನ್ನು ಗುರುತಿಸಬಹುದಾಗಿದೆ.

ಸಮಾಜದಲ್ಲಿ ಪರಸ್ಪರ ಸಂಘಜೀವಿಯಾದ ವ್ಯಕ್ತಿಯಲ್ಲಿ ಯಾವುದೇ ಬಗೆಯ ತಾರತಮ್ಯವಾಗಲಿ, ಶೋಷಣೆಯಾಗಲಿ ಸಲ್ಲದು. ನಿಜಕ್ಕೂ ಇದು ಮನುಕುಲವೇ ತಲೆತಗ್ಗಿಸಬೇಕಾದ ಹೀನಾಯ ವರ್ತನೆ. ಇದಕ್ಕೆ ತಕ್ಕ ಪರಿಣಾಮವು ಇರುವುದು ಖಚಿತ, ಅದು ಎತ್ತುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಅನಿವಾರ್ಯವೂ ಎದುರಾಗುತ್ತದೆ. ನಮ್ಮ ಸಂಸ್ಕೃತಿಯೂ ತಲೆತಗ್ಗಿಸಿ ನಿಲ್ಲಬೇಕಾದ ಕೆಲವು ವೇಳೆ, ಅದು ಸ್ತ್ರೀಯನ್ನು ಕಂಡುಕೊಂಡ ರೀತಿ–ನೀತಿಗೆ ಸಂಬಂಧಿಸಿದ ಒಂದು ಸಂದರ್ಭವಿದೆ. ಎಷ್ಟೇ ಗೌರವದ ಸ್ಥಾನಮಾನವನ್ನು ನೀಡಿದ್ದೇವೆಂದು ವಾದ ಮಾಡಿದರೂ, ತಾರತಮ್ಯ ಮಾಡಿದ್ದಾಗಲಿ, ಶೋಷಣೆಗೆ ಗುರಿಪಡಿಸಿದ್ದಾಗಲಿ ಮುಚ್ಚಿಹೋಗುವುದಿಲ್ಲ. ವಾದದಲ್ಲಿ ಹುರುಳಿದಿದ್ದರೆ ಪ್ರತಿಭಟನೆಯ ಪ್ರತಿಕ್ರಿಯೆಯ ಅವಶ್ಯಕತೆಯೂ ಇರುತ್ತಿರಲಿಲ್ಲ. ಪುರುಷಕೇಂದ್ರಿತ ಸಮಾಜದಲ್ಲಿ ಸ್ತ್ರೀ ಸಮುದಾಯ ಉಸಿರು ಬಿಗಿ ಹಿಡಿದದ್ದೇನು ಸುಳ್ಳಲ್ಲ, ಇದನ್ನು ನೋಡಿದಾಗ ಪುರುಷನಿಗೆ ಸಮಾನವಾದ ಸ್ಥಾನಮಾನಕ್ಕೆ ತಾನು ಅರ್ಹಳು ಎಂಬುದನ್ನು ಸ್ತ್ರೀ ವೇದೋಪನಿಷತ್ತುಗಳ ಕಾಲದಿಂದಲೂ ಸಾಬೀತು ಮಾಡುತ್ತ ಬಂದಿದ್ದಾಳೆ. ಪ್ರತಿಭೆಯ ಪ್ರಕಟಣೆಯಾಗಲಿ ಶೋಷಣೆಗೆ ಪ್ರತಿಭಟನೆಯಾಗಲಿ ನಿರಂತರವಾಗಿ ನಡೆಯುತ್ತ ಬಂದರೂ ಅದರ ಪ್ರಮಾಣ ಕಡಿಮೆಯೆ. ಈ ಎಚ್ಚರ ಈ ಕ್ರಿಯಾಶೀಲತೆ ಗಣನೀಯ ಪ್ರಮಾಣದಲ್ಲಿ 'ಸಾಹಿತ್ಯಕ್ಷೇತ್ರ'ದಲ್ಲಿ ಕಾಣಿಸಿಕೊಂಡದ್ದು ಕಳೆದ ಶತಮಾನದಿಂದ ಎಂದು ಗುರುತಿಸಬಹುದು.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅಕ್ಕಮಹಾದೇವಿ ಮುಖ್ಯಳಾಗಿ ಕೆಲವು ವಚನಕಾರ್ತಿಯರು ಹನ್ನೆರಡನೆಯ ಶತಮಾನದಲ್ಲಿಯೇ ದನಿಯೆತ್ತಿದ್ದಾರೆ. ಈ ದನಿ ಮತ್ತೆ ಪ್ರಖರವಾಗಿ ಕಾಣಿಸಿಕೊಳ್ಳತೊಡಗಿದ್ದು ಇಪ್ಪತ್ತನೆಯ ಶತಮಾನದಲ್ಲಿ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಚಲಿತವಿರುವ ಬಹುತೇಕ ಎಲ್ಲಾ ಸೃಜನಶೀಲ ಪ್ರಕಾರಗಳಲ್ಲಿ ಮಹಿಳೆಯರು ಸಾಹಿತ್ಯಸೃಷ್ಟಿ ಮಾಡಿದ್ದಾರೆ. ಸಂಶೋಧನೆ, ವಿಮರ್ಶೆಯಂಥ ಪ್ರಕಾರಗಳಲ್ಲೂ ಸಮರ್ಥವಾಗಿ ನಿರ್ವಹಿಸುತ್ತ ಬಂದಿರುವುದು ತಿಳಿಯುತ್ತದೆ. ಅದರಲ್ಲೂ ಸ್ತ್ರೀವಾದಿ ವಿಮರ್ಶೆಯು ಬೆಳೆದದ್ದು ಈ ಅವಧಿಯ ಮುಖ್ಯ ಬೆಳವಣಿಗೆಗಳಲ್ಲಿ ಒಂದು ಹಾಗೂ ಮಹಿಳೆಯರು ಸಂಶೋಧನೆ, ವಿಮರ್ಶಾ ಕ್ಷೇತ್ರದಲ್ಲಿ

ತಮ್ಮನ್ನು ತೊಡಗಿಸಿಕೊಂಡಿರುವುದು ಗಮನಾರ್ಹ ಅಂಶ. ಈ ರೀತಿಯ ವೈಚಾರಿಕ, ಸೃಜನಶೀಲ, ಸಂಶೋಧನ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಕೆಲವೇ ವಿಶಿಷ್ಟ ಬರಹಗಾರ್ತಿಯರ ಸಾಲಿನಲ್ಲಿ. ಡಾ. ವಿಜಯಾದಬ್ಬೆ, ಡಾ. ಬಿ.ಎನ್.ಸುಮಿತ್ರಾಬಾಯಿ, ಡಾ. ಸಂಧ್ಯಾರೆಡ್ಡಿ, ಸ.ಉಷಾ, ಚ.ಸರ್ವಮಂಗಳ, ನೇಮಿಚಂದ್ರ, ವೈದೇಹಿ, ಗಾಯಿತ್ರಿನಾವಡ ಹೀಗೆ ಹಲವಾರು ಪ್ರಮುಖ ಬರಹಗಾರ್ತಿಯರನ್ನು ಗುರುತಿಸಬಹುದು. ಇವರ ನಡುವೆ ತಮ್ಮದೆ ಒಂದು ವಿಶಿಷ್ಟ ಸಾಹಿತ್ಯ ಕೃಷಿಯ ಮೂಲಕ ಗುರುತಿಸಿಕೊಂಡಿರುವುದು ವಿಜಯಾದಬ್ಬೆ.

ಈ ಕಾಲಘಟ್ಟದ ಮುಖ್ಯ ಸಾಹಿತ್ಯಕ್ಷೇತ್ರದ ಚಟುವಟಿಕೆಯಾದ ಸ್ತ್ರೀವಾದಿವಿಮರ್ಶೆ, ವಿಚಾರಲೇಖನ, ಸೃಜನಶೀಲವಾದ ಕಾವ್ಯರಚನೆಯಲ್ಲಿ ಹಾಗೂ ಸಂಶೋಧನೆ, ಸಂಪಾದನೆಯನ್ನು ಮಾಡುವ ಮೂಲಕ ಕವಿಯಾಗಿ ಮಾತ್ರವಲ್ಲದೆ, ಬರಹಗಾರ್ತಿಯಾಗಿ ವಿಜಯಾದಬ್ಬೆ ಸ್ಥಾನ ಹೊಂದಿರುವುದು ಕಾಣಬಹುದು. ಇಂತಹ ಅನನ್ಯ ಚೇತನಗಳು ಕನ್ನಡ ಸಾರಸ್ವತ ಲೋಕದಲ್ಲಿ ಶಾಶ್ವತ ನೆಲೆ ಕಂಡುಕೊಂಡ ಬಗೆ ದೊಡ್ಡದು. ಹಾಗೂ ಸಾಧಕಿಯಾಗಿ ತಮ್ಮ ಕ್ಷೇತ್ರದಲ್ಲಿ ಗಲಿಗೆ ಗಳಿಗೆಗೂ ಅಡ್ಡಿ ಆತಂಕಗಳನ್ನು ಎದುರಿಸಿ ನಿಸ್ವಾರ್ಥ ಸೇವೆ ಸಲ್ಲಿಸಿದ ಅದಮ್ಯ ಚೇತನಗಳ ಬದುಕು-ಬರಹ ಕುರಿತ ಅಧ್ಯಯನ ಮಹತ್ವದ್ದಾಗಿದೆ.

ಈ ಅಂಶಗಳಿಂದ ಆಧುನಿಕ ಕನ್ನಡ ಸಾಹಿತ್ಯ ಕಂಡ ಅಪರೂಪದ ಲೇಖಕಿ ಡಾ. ವಿಜಯಾದಬ್ಬೆ, ಲೇಖಕಿಯಾಗಿ, ವಿಮರ್ಶಕಿಯಾಗಿ, ಸಂಶೋಧಕಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ, ಮಹಿಳಾ ಚಳುವಳಿಯ ಸಕ್ರಿಯ ಹೋರಾಟಗಾರ್ತಿಯಾಗಿ ಪ್ರಗತಿಪರ ಚಿಂತನೆಯ ವ್ಯಕ್ತಿಯಾಗ ವಿಜಯಾದಬ್ಬೆ ಅವರು ವಹಿಸಿದ ಪಾತ್ರ, ಮಾಡಿದ ಸಾಧನೆ ಬಹುದೊಡ್ಡದು. ಪ್ರಸ್ತುತ ಸ್ತ್ರೀವಿಮರ್ಶೆ ಸಾಹಿತ್ಯಕ್ಕೆ ಕೊಂಡಿ, ದಾರಿದೀಪವಾಗುವ ಇಂತಹ ಸೃಜನಾತ್ಮಕ ಸ್ತ್ರೀವಾದಿ ಲೇಖಕಿಯರ ಅಭ್ಯಾಸದ ಆಸಕ್ತಿ, ಈ ಅಧ್ಯಯನದ ಉದ್ದೇಶವಾಗಿದೆ.

ಈ ಅಧ್ಯಯನದ ವ್ಯಾಪ್ತಿಯನ್ನು ಗುರುತಿಸುವಾಗ ಅದು ಬಹಳ ವಿಶಾಲವಾದ ತೆಕ್ಕೆಯನ್ನು ಒಳಗೊಂಡಿದೆ. ಕಾರಣ 'ಸಾಹಿತ್ಯ ಅಧ್ಯಯನ' ಎಂಬುದು, ಎಂದಿಗೂ ಹೊಸ ಹೊಸ ಅರಿವಿನ ಎಲ್ಲೆಗಳನ್ನು, ದೃಷ್ಟಿಯಂತೆ ಹೊಸ ಸೃಷ್ಟಿಯನ್ನು ಕಂಡುಕೊಳ್ಳುವ ಒಂದು ಅಗಾಧ ಪರಿಧಿಯಲ್ಲಿ. ಸಾಹಿತ್ಯದ ವಸ್ತು, ಧೋರಣೆಯಲ್ಲಿ ಮಿತಿಯನ್ನು ವ್ಯಾಪ್ತಿಯಲ್ಲಿ ಗುರುತಿಸುವುದು ಕಷ್ಟ. ಆದ್ದರಿಂದ ಸಾಹಿತ್ಯ ಅಧ್ಯಯನ ಎಂದಿಗೂ ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಿ ಇಷ್ಟೇ ಇದರ ಧೋರಣೆ, ವಸ್ತುಪ್ರೇರಣೆ, ವಿಚಾರ

ಎಂದು ಆಕೃತಿಯಲ್ಲಿ ಬಂಧಿಸುವುದು ಕಷ್ಟದ ಸಂಗತಿ. ನಮಗೆ ಗೋಚರಿಸಿದಂತೆ ರೂಪವನ್ನು ಕಂಡುಕೊಳ್ಳುವುದು ಸೃಜನಾತ್ಮಕ ಸಾಹಿತ್ಯದಲ್ಲಿ ಅನಿಸುತ್ತದೆ. ಉಳಿದಂತೆ ಸಂಶೋಧನೆ, ಸಂಪಾದನೆ, ಸೈದ್ಧಾಂತಿಕ ವಿಮರ್ಶಾ ಸಾಹಿತ್ಯಿಕ ಬರೆಹಗಳ ವಸ್ತುವಿನ ವ್ಯಾಪಕತೆಯನ್ನು ಗಮನಿಸುವಾಗ. ಅವುಗಳ ಹಿಂದಿನ ಸಾರ್ಥಕಶ್ರಮ, ವಿಚಾರಪರತೆ ಅವುಗಳ ಪ್ರಸ್ತುತತೆ ಸ್ಥಾನವನ್ನು ನೋಡುವಾಗ ಬಹಳ ವಿಶಾಲವಾದ ಬೆಲೆ ಅವು ಪಡೆದಿರುವುದನ್ನು ಸಾಹಿತ್ಯ ಅಧ್ಯಯನದಿಂದ ನೋಡಬಹುದು.

ವಿಜಯಾದಬ್ಬೆ ಅವರ ಸಾಹಿತ್ಯವನ್ನು ಸ್ಥೂಲವಾಗಿ ನೋಡಿದಾಗ ಕವನಸಂಕಲನ, ಸಂಪಾದನೆ, ಸಂಶೋಧನೆ, ಸ್ತ್ರೀವಾದಿ ವಿಮರ್ಶೆ, ಅನುವಾದ, ವ್ಯಕ್ತಿಚಿತ್ರಣ, ಪ್ರವಾಸಸಾಹಿತ್ಯ, ಬಿಡಿಲೇಖನಗಳು ಇಂತಹ ವ್ಯಾಪಕವಾದ ಅವರ ಸಾಹಿತ್ಯವನ್ನು ಸೀಮಿತವಾದ ಈ ನಿಬಂಧದ ಮಿತಿಗ ಒಳಪಟ್ಟಂತೆ ಅಳವಡಿಸುತ, ವಿಸ್ತಾರವಸ್ತುವನ್ನು ಅಧ್ಯಾಯಗಳಾಗಿ ವಿಂಗಡಿಸಿ ಅಭ್ಯಾಸಿಸಲಾಗಿದೆ.

ಈ ಕೆಳಕಂಡಂತೆ ಅಧ್ಯಾಯನವಾರು ವಿಂಗಡನೆಯ ಮೂಲಕ 'ಕನ್ನಡಿಯಲ್ಲಿ ಕರಿಯನ್ನು ಹಿಡಿದಂತೆ' ಒಟ್ಟು ಐದು ಅಧ್ಯಾಯವಾಗಿ ವಿಂಗಡಿಸಿ ಮೊದಲನೆ ಅಧ್ಯಾಯವು ಪ್ರಬಂಧದ ಸಂಪ್ರದಾಯದಂತೆ 'ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ'ಯಾಗಿದ್ದು ಎರಡನೇ ಅಧ್ಯಾಯವು 'ವ್ಯಕ್ತಿಯಾಗಿ ವಿಜಯಾದಬ್ಬೆ' ಎಂದು ವೈಯಕ್ತಿಕ ನೆಲೆಯಿಂದ ಸಾಧಕಿಯಾಗಿ ಸಾಹಿತ್ಯಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ನಡೆದು ಬಂದದಾರಿಯನ್ನು ಸ್ಥೂಲವಾಗಿ ಅಭ್ಯಾಸಿಸಲಾಗಿದೆ. ಮೂರನೇ ಅಧ್ಯಾಯವು ಸಾಹಿತ್ಯ ಅಧ್ಯಯನವನ್ನು ಕುರಿತಂತೆ 'ಬರಹಗಾರ್ತಿಯಾಗಿ ವಿಜಯಾದಬ್ಬೆ' ಎಂಬ ಉಪಶೀರ್ಷಿಕೆಯಡಿಯಲ್ಲಿ ಅವರ ಸಮಗ್ರ ಸೃಜನ ಸೃಷ್ಟಿಕ್ರಿಯೆಯಲ್ಲಿ ಗುರುತಿಸುವಂತೆ ಕವಿಯತ್ರಿಯಾಗಿ, ವಿಮರ್ಶಕಿಯಾಗಿ, ಸಂಶೋಧಕಿಯಾಗ, ಸಂಪಾದಕಿಯಾಗಿ ಹಾಗೂ ಸಾಹಿತ್ಯದ ಇತರ ಮಗ್ಗಲುಗಳಾದ ಅನುವಾದ, ಪ್ರವಾಸ ಸಾಹಿತ್ಯ, ವ್ಯಕ್ತಿಚರಿತ್ರೆಗಳ ಕುರಿತಂತೆ ಸ್ಥೂಲವಾದ ಅಧ್ಯಯನವನ್ನು ಮಾಡಲಾಗಿದೆ. ನಾಲ್ಕನೆಯ ಅಧ್ಯಾಯವು 'ಕಲಾಭಿವ್ಯಕ್ತಿ' ಭಾಗದಲ್ಲಿ ಸಾಹಿತ್ಯ ರಚನೆಯ ಹೊಳವು ತೆರೆದುಕೊಂಡ ಭಾಷೆ, ಶೈಲಿಸ್ವರೂಪ, ತಂತ್ರಗಾರಿಕೆ, ವಸ್ತುಧೋರಣೆಯನ್ನು ಒಳಗೊಂಡಿದೆ. ಕೊನೆಯದಾಗಿ ಐದನೇ ಅಧ್ಯಾಯವು ಔಪಚಾರಿಕ ಪೂರ್ವನಿರ್ಧರಿತ ಪ್ರಬಂಧದ ಸಿದ್ಧನೆಲೆಯಾದ 'ಉಪಸಂಹಾರ' ಇದು ಒಟ್ಟು ವಿಷಯದ ಅಧ್ಯಯನ, ಆಸಕ್ತಿ ಒಳಗೊಂಡಿರುವ ವಿಚಾರ ವಿಶೇಷತೆಯ ಅನಿಸಿಕೆಯನ್ನು ಹೊಂದಿರುತ್ತದೆ.

"ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ" ಎಂಬ ವ್ಯಾಪಕ ವಿಷಯವನ್ನು ಹೀಗೆ ಅಧ್ಯಯನ ಮಾಡುತ್ತಿದ್ದು. ಇವರ ಸಾಹಿತ್ಯ ಎಂಬ ಅದಮ್ಯ ಆಕಾಶದ ಆಗದತೆಯ ರಚನೆಯ ಹಲವು ಮಗ್ಗಲುಗಳನ್ನು ನೋಡಿದಾಗ, ವ್ಯಾಪಕ ನೆಲೆಯು ಸ್ತ್ರೀವಾದಿ ಸಾಹಿತ್ಯ ರಚನೆಯಲ್ಲಿ ವಿಶೇಷವಾಗಿ ವಿಮರ್ಶಾ ಬರಹಗಳು ಸಾಹಿತ್ಯ ಅಧ್ಯಯನದ ಒಟ್ಟಂದದ ಆಯಾಮದಲ್ಲಿ ಸಂಶೋಧನೆ, ಸಂಪಾದನೆಗಳು ಸಹ ಆಧುನಿಕ ಮಹಿಳಾ ಸಾಹಿತ್ಯದಲ್ಲಿ, ಸ್ತ್ರೀಸಂವೇದನೆಯ ವಿಶಿಷ್ಟ ವೈಚಾರಿಕ ರಚನೆಗಳಾಗಿದ್ದು. ಇಂದಿಗೂ ಪ್ರಮುಖ ನೆಲೆ-ಬೆಲೆಯ ಛಾಪನ್ನು ಹೊಂದಿರುವುದು ಈ ವಿಷಯದ ಅಧ್ಯಯನದಿಂದ ಸಾಕ್ಷ್ಯವಾಗಿ ಕಾಣಬಹುದಾಗಿದೆ.

ಅಧ್ಯಾಯ ೨

ವ್ಯಕ್ತಿಯಾಗಿ ವಿಜಯಾದಬ್ಬೆ

ಇಡೀಯಾಗಿ ಯಾವುದೇ ದೇಶ-ಭಾಷೆಯ ಸಾಹಿತ್ಯ ಚರಿತ್ರೆಯನ್ನು ನಾವು ನೋಡಿದರು. ಕವಿ-ಲೇಖಕರ ಅಂದರೆ ವ್ಯಕ್ತಿ ಪರಿಚಯವಿಲ್ಲದೆ ಆ ಒಂದು ಸಾಹಿತ್ಯ ರಚನೆಯ ಅಭ್ಯಾಸ ಆಗಿಲ್ಲವೆಂದು ಹೇಳಬೇಕು. ಇದಕ್ಕೆ ಕೆಲವು ಅಪವಾದಗಳಿವೆ, ಅದು ಕಾಲದ ಸನ್ನಿವೇಶದಿಂದ, ಅಂದರೇ ಇತಿಹಾಸ ಪರಂಪರೆಯಿಂದ ನಡೆದು ಹೋದ, ಕಣ್ಮರೆಯಾದ ಕವಿಗಳ ಕೆಲವು ಕೃತಿಗಳಿಗೆ ಸರಿಯಾದ ಮಾಹಿತಿ ದೊರಕದಿರುವುದರಿಂದ ಎನ್ನಬಹುದು. ಆದರೂ ಸ್ಥೂಲವಾಗಿ ಸಾಹಿತ್ಯ ಅಭ್ಯಾಸಿಸಿದ ಸಮೀಕ್ಷೆಯನ್ನು ನೋಡಿದಾಗ ವ್ಯಕ್ತಿಪರಿಚಯ ಅದನ್ನು ಕವಿ, ಕಾಲ, ದೇಶ ಪರಿಚಯವೆಂಬುದರ ಮೂಲಕ ಅಭ್ಯಾಸಿಸಿಕೊಂಡು ಬಂದಿರುವುದು ತಿಳಿಯುತ್ತದೆ.

ಸಾಹಿತ್ಯ ರಚನೆಯ ಅಂದರೆ ಕೃತಿಯ ವಸ್ತು, ಪ್ರೇರಣೆ, ಧೋರಣೆಗಳ ಬಗ್ಗೆ, ರಸಾನುಭವನೆಲೆಗೆ ಹಿನ್ನೆಲಯನ್ನು ಕೊಡುವುದು ಕವಿ ಅಥವಾ ಬರಹಗಾರರ ವೈಯಕ್ತಿಕ ಪ್ರಚೋದನೆಗಳು ಎಂಬುದನ್ನು ಗುರುತಿಸಿರುವುದರಿಂದ ಇಂತಹ ಬರಹಗಾರರ ಸಾಮಾಜಿಕ, ಕೌಟುಂಬಿಕ, ವಿಚಾರಾತ್ಮಕ ಹೋರಾಟಗಳ ಬೆಳವಣಿಗೆ ಅರಿಯುವುದು ಮುಖ್ಯ ಅಂಶವಾಗಿದೆ.

ಯಾವುದೇ ಸಾಹಿತ್ಯ ಅಧ್ಯಯನವನ್ನು ತೆಗೆದುಕೊಂಡರು ಆ ಕೃತಿಗಳ ರಚನೆಯ ನಿರ್ಮಾತೃಗಳ ವ್ಯಕ್ತಿಪರಿಚಯ ಅಗತ್ಯ. ಅದು ಜೈವಿಕ ನೆಲೆಯಿಂದಲೂ ಬೇರೆ-ಬೇರೆ ಸಂವೇದನೆಯನ್ನು ಹೊಂದಿರುವುದರಿಂದ ಕೃತಿಗಳ ಅಧ್ಯಯನಕ್ಕೆ ಮುನ್ನ ಅವರ ಒಂದು ಸೌಜನ್ಯಯುತವಾದ ಪರಿಚಯ ಅರಿಯುವುದು ಮುಖ್ಯವಾಗಿರುತ್ತದೆ.

ಡಾ. ವಿಜಯಾದಬ್ಬೆಯವರ ಜನನ ಕ್ರಿ.ಶ. ೧೯೫೧, ಜೂನ್ ೧ ಎಂದು. ಆದರೆ ಇವರು ೧೯೫೧, ಮಾರ್ಚ ೩ರಂದು ಎಂಬುದಾಗಿ ಇವರ ವಿದ್ಯಾಭ್ಯಾಸ ಸಾಗಿದಂತೆ ಅಂಕಪಟ್ಟಿಗಳಲ್ಲಿ ಬಳಕೆಯಾಗಿರುವುದು. ಇದೆ ಅವರ ಅಧಿಕೃತವಾದ ಜನ್ಮದಿನಾಂಕವಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ನಮ್ಮ ಹಿಂದಿನ ಕವಿಗಳ ಕಾಲವನ್ನು ಗುರುತಿಸುವಾಗ ಹಲವಾರು ಗೊಂದಲಗಳು ಆಗಿರುವುದು ಕಂಡುಬರುತ್ತದೆ. ಹೊಸಗನ್ನಡ ಸಾಹಿತ್ಯದಲ್ಲೂ ಕೆಲವು ಇಂತಹ ವ್ಯತ್ಯಾಸಗಳು ಕಂಡುಬಂದರೂ ಹೆಚ್ಚಾಗಿಲ್ಲ. ಅದು ಆಧುನಿಕ ಶಿಕ್ಷಣಕ್ರಮ, ವೈದ್ಯಕೀಯ ದಾಖಲುಗಳಿಂದ ಎನ್ನಬಹುದು. ವಿಜಯಾ ಅವರು 'ದಬ್ಬೆ' ಗ್ರಾಮದಲ್ಲಿ ಜನಿಸಿದರು, ಇದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿದೆ. ತಂದೆ-ತಾಯಿ ಕೃಷ್ಣಮೂರ್ತಿ ಮತ್ತು ಸೀತಾಲಕ್ಷ್ಮಿ. ಇವರ ಮೊದಲ

ಮಗಳು ವಿಜಯಾದಬ್ಬೆ, ಇವರು, ಒಟ್ಟು ಒಂಬತ್ತು ಮಕ್ಕಳು ಇವರುಗಳಲ್ಲಿ ವಿಜಯಾರಿಂದ ಮೊದಲಾಗಿ ಕ್ರಮವಾಗಿ ಪ್ರೇಮಾ, ನಾಗರಾಜ, ಛಾಯಾ, ವಿಮಲ ಶ್ರೀದೇವಿ, ಸೋಮಶೇಖರ, ವೀಣಾ ಮತ್ತು ಲಕ್ಷ್ಮೀ. ಇಂತಹ ತುಂಬು ಕುಟುಂಬವಾದರು ಅದರಲ್ಲೂ, ಮೊದಲ ಮಗಳಾದರೂ ಶಿಕ್ಷಣವನ್ನು ಕೊಡಿಸುವುದರ ಮೂಲಕ ಹೆಣ್ಣುಮಕ್ಕಳ ಬಗ್ಗೆ ಇದ್ದ ವಿಶಾಲ-ವೈಚಾರಿಕ ಮನೋಭಾವವನ್ನು ಅವರ ಹಿರಿಯರಲ್ಲಿ ಕಂಡುಕೊಳ್ಳುವುದು ತುಂಬ ಮಹತ್ತರವಾದ ಸಂಗತಿ.

ವಿಜಯಾ ಅವರು ಹಿರಿಯ ಪ್ರಾಥಮಿಕ ಅಂದರೆ ಏಳನೇ ತರಗತಿಯವರೆಗೆ ಕಳಾಸಪುರದಲ್ಲಿ. ಪ್ರೌಢಶಿಕ್ಷಣವನ್ನು ಜಾವಗಲ್‌ನಲ್ಲಿ, ಬಿ.ಎ. ಪದವಿಯನ್ನು ಹಾಸನದಲ್ಲಿ ಮುಂದೆ ಸ್ನಾತಕೋತ್ತರ, ಪಿಹೆಚ್.ಡಿ., ಪದವಿಗಳನ್ನು ಮೈಸೂರುನಲ್ಲಿ ಓದಿ, ವಿದ್ಯಾಭ್ಯಾಸ ಮಾಡಿರುವುದು ತಿಳಿಯುತ್ತದೆ.

'ಬೆಳೆಯುವ ಸಿರಿ ಮೊಳಕೆಯಲ್ಲೆ' ಎಂಬಂತೆ, ಅವರ ವಿಶೇಷ ಆಸಕ್ತಿ ಕನ್ನಡ ಸಾಹಿತ್ಯದ ಕಡೆಗೆ ಹೇಗಿದ್ದಿತು ಎಂಬುದನ್ನು "ಅಕ್ಕ ಹೈಯ್ಯರ್ ಪ್ರೈಮರಿ ಅಂದ್ರೆ ೬-೭ನೇ ಕ್ಲಾಸ್ನಲ್ಲೇ ನಾಟ್ಕ ಬರ್ದು ಆಡಿಸ್ತಿದ್ರು, ಸೋದರ ಮಾವ್ನ ಪ್ರೋತ್ಸಾಹ ಇರ್ತಿತ್ತು. ಯಾರ್ದಾದ್ರೂ ಮನೆ ಜಗ್ಲಿ ಮೇಲೆ ವೇದ್ಕೆ ಮಾಡಿ Dress ತಗೊಂಡು ಅಭಿನಯಿಸ್ತಿದ್ರು. ರಜಾದಿನಗಳಲ್ಲಿ ದಬ್ಬೆಗೆ ಬರ್ತಿದ್ರು ಹರಿಯೋ ನದಿ – ಎಗಚಿನದಿ ಹತ್ತಿರದ ಹಸಿರು ಸಾಲು ಮರಗಳು, ನೀರ್ನಲ್ಲಿ ಆಟ ಆಡ್ಕೊಂಡು ಇರ್ತಿದ್ರು ಧೈರ್ಯಾನು ಅಕ್ಕನ್ಗೆ ಇತ್ತು"[೧] ಹಾಗೆ ಮತ್ತೊಂದು ಅಂಶವನ್ನು ಗುರುತಿಸಬೇಕಾಗುತ್ತದೆ. "First ಬಿ.ಎ. ಸೇರ್ದಾಗ ಕನ್ನಡ ಮೇಜರ್ ಬೇಕೂಂತ Principal ಹೇಳಿ ಎ.ವಿ.ಕೆ ಕಾಲೇಜಿಗೆ ಬರೋ ಹಾಗೆ ಮಾಡಿ ತರ್ಸಿದ್ರು, ಪ್ರಬಂಧ ಚರ್ಚಾ ಸ್ಪರ್ಧೆಗಳಲ್ಲಿ Prize ತಗೋಳ್ತಾ ಇದ್ರು"[೨] ಎಂಬ ಮಾತುಗಳನ್ನು ಕೇಳಿದಾಗ ಅವರಿಗೆ ಚಿಕ್ಕ ವಯಸ್ಸಿನಿಂದಲೆ ಸಾಹಿತ್ಯದಲ್ಲಿ ಅಭಿರುಚಿ ವಿಶೇಷವಾಗಿ ಇತ್ತು ಎಂಬುದನ್ನು ಕಾಣಬಹುದು. ಹೀಗೆ ಮೈಸೂರುನಲ್ಲಿ ಸ್ನಾತಕ ಪದವಿಯನ್ನು ಪಡೆದು, ೧೯೭೩ರಲ್ಲಿ ತುಮಕೂರಿನಲ್ಲಿ ಆರು ತಿಂಗಳು ಅಧ್ಯಾಪಕ ವೃತ್ತಿ, ಅನಂತರ ಆನಂದಪುರದಲ್ಲಿ ಆರು ತಿಂಗಳು ಕಾರ್ಯನಿರ್ವಹಿಸಿ ಮುಂದೆ ಪಿಹೆಚ್.ಡಿ., ಮಾಡುವ ಉದ್ದೇಶದಂದ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬಂದು ಡಾ. ಹಾ.ಮಾ.ನಾಯಕರ ಮಾರ್ಗದರ್ಶನದಲ್ಲಿ 'ನಾಗಚಂದ್ರ ಒಂದು ಅಧ್ಯಯನ' ಎಂಬ ವಿಷಯವನ್ನು ಆಯ್ದುಕೊಂಡು ಸಂಶೋಧಕರಾಗಿ, ಜೊತೆಗೆ ಮೂರನೇ ರ್‍ಯಾಂಕ್

---

೧. ವಿಜಯಾನ್ವೇಷಣೆ, ಸಂ. ಡಾ. ಎಸ್.ಡಿ.ಶಶಿಕಲಾ ಇತ್ಯಾದಿ, ಪ್ರ. ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ಮು. ೨೦೦೪, ಪು. ೨೯-೩೦.

೨. ಅದೇ, ಪು. ೩೦.

ಇದ್ದರಿಂದ ಅಧ್ಯಾಪಕಿ ಪಟ್ಟವನ್ನು ಪಡೆದು ಸಾಗಿದ್ದು ಒಂದು ವಿಶೇಷ ಸಂಗತಿ. ಇದನ್ನು ಅವರ ಹಿರಿಯ ಸಹಪಾಠಿಯಾದ ಪ್ರೊ. ಕಾಳೇಗೌಡ ನಾಗವಾರರ ಮಾತುಗಳ ಸ್ಮರಣೆಯಲ್ಲಿ ಕಾಣಬೇಕಾಗುತ್ತದೆ. "ಹೀಗೆ ಎರಡು ಮೂರು ವರ್ಷಗಳು ಕಳೆಯುತ್ತಿದ್ದಂತೆಯೇ ವಿಜಯಾದಬ್ಬೆ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪನ್ಯಾಸಕಿಯಾಗಿ ನೇಮಕಗೊಂಡ ಸುದ್ದಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿದ್ದ ನನಗೆ ತಿಳಿಯಿತು ಈ ಸಂಸ್ಥೆಯ ಇತಿಹಾಸದಲ್ಲಿ ಬೋಧನೆಗೆ ತೊಡಗಿದ ಮೊದಲ ಮಹಿಳೆ ಇವರಾಗಿದ್ದರು"[೧] ಎಂದು ಹೇಳಿರುವುದನ್ನು ನೋಡಿದಾಗ, ವಿಜಯಾದಬ್ಬೆ ಅವರು ಅಧ್ಯಯನ ಸಂಸ್ಥೆಯಲ್ಲಿ ಉಪನ್ಯಾಸಕಿಯಾಗಿ ಬಂದದ್ದು ಮಹಿಳಾ ಅಧ್ಯಾಪಕ ವರ್ಗದಲ್ಲಿ ಒಂದು ಮೈಲಿಗಲ್ಲು ಎಂದು ಪುರಸ್ಕರಿಸುವುದು ಉಚಿತವೆನಿಸುತ್ತದೆ.

ವಿಜಯಾದಬ್ಬೆ ಅವರು ೧೯೮೩ರಲ್ಲಿ ನೆದರ್‌ಲ್ಯಾಂಡ್ ಮೂಲದ 'ರೊಬೆರ್ತ್ ಜಿಯ್ಡನ್ ಬೋಸ್' ಎಂಬುವರನ್ನು ವಿವಾಹವಾಗಿದ್ದು. 'ಚಾರುಮತಿ' ಎಂಬ ಒಬ್ಬ ಮಗಳು ಇದ್ದಾರೆ. ಆದರೆ ಇಂದು ಲೇಖಕಿಯವರು ಸ್ವಗ್ರಾಮವಾದ ದಬ್ಬೆಯಲ್ಲಿ ನೆಲೆಸಿದ್ದಾರೆ.

ಅಧ್ಯಾಪಕಿಯಾಗಿದ್ದ ವಿಜಯಾದಬ್ಬೆ ಗುರುವಾಗಿ ಅನೇಕ ಪ್ರಿಯ ಶಿಷ್ಯರ ಗೌರವ ಹಾಗೂ ಲೇಖಕಿಯಾಗಿ ಅನೇಕ ಆತ್ಮೀಯ ಸ್ನೇಹಿತರನ್ನು ಹೊಂದಿದ್ದಾರೆ. ಇಂತಹ ಅವರುಗಳ ಮಾತುಗಳಿಂದ ಇವರ ವ್ಯಕ್ತಿತ್ವದ ಮೇರು ಸದೃಶ ಗುಣವನ್ನು ಕಾಣಬಹುದು. ಸ್ವಭಾವತಃ ವಿಜಯಾ ಅವರು ಗ್ರಾಮೀಣ ಮೂಲದಿಂದ ಬಂದವರಾಗಿದ್ದೂ ಧೈರ್ಯವಂತೆ, ತನಗೆ ಒಪ್ಪಿದ ಮಾರ್ಗದಲ್ಲಿ ನಡೆಯುವ ಎದೆಗಾರಿಕೆ ಹಾಗೂ ನೇರ ನಡೆ–ನುಡಿಯು, ಅತ್ಯಂತ ಸೌಮ್ಯಶಿಸ್ತಿನ ವ್ಯಕ್ತಿಯಾಗಿದ್ದು ಸರಳ ಗುಣದಿಂದ ವಿನಯವಂತರು ಆಗಿದ್ದರು.

ಇದನ್ನು ಅವರ ಆಪ್ತವರ್ಗದವರ ಮೇಲೆ ಹೇಗೆ ಕಾಳಜಿ ಪ್ರೀತಿ ವಿಶ್ವಾಸವನ್ನು ಹೊಂದಿದ್ದರು ಹಾಗೂ ಅವರ ವಿಶ್ವಾಸಕ್ಕೆ ಪಾತ್ರರಾಗಿದ್ದರು ಎಂದರೇ 'ಸುನಂದಾ ಬೆಳಗಾಂವಕರ್' ಅವರು ತಮ್ಮ ಕಾದಂಬರಿಗೆ ವಿಮರ್ಶೆಯನ್ನು ಬರೆದಿದ್ದ ವಿಜಯಾದಬ್ಬೆ ವಿಚಾರವಂತಿಕೆಯಿಂದ, ಒಂದು ಉತ್ತಮ ಸ್ಥಾನವನ್ನು ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಳ್ಳಲು ಅತ್ಯಂತ ಗಮ್ಯನೆಲೆ ನೀಡಿತು ಎಂದು ಸ್ಮರಿಸುತ್ತ ಅವರ ಅಭಿಮಾನವನ್ನು "ಹೃದಯದ ಸತ್ಯ ಮಾತುಗಳನ್ನು ದೇವರು ಮಾನ್ಯ ಮಾಡುತ್ತಾನಂತೆ

---

೧. ವಿಜಯಾನ್ವೇಷಣೆ, ಸಂ. ಡಾ. ಎಸ್.ಡಿ.ಶಶಿಕಲಾ ಮತ್ತು ಇತರರು, ಪ್ರ. ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ಮು, ೨೦೦೪, ಪು. ೧೪.

ನನ್ನ ಮಾತುಗಳನ್ನು ಆತ ಡಾ. ವಿಜಯಾ ಅವರಿಗೆ ಮುಟ್ಟಿಸಿ ನನ್ನನ್ನೂ ಧನ್ಯ ಮಾಡುತ್ತಾನೆಯೇ? ಪಶ್ಚಾತ್ತಾಪವೇ ಪ್ರಾಯಶ್ಚಿತ".

"ಕ್ಷಮಿಸು ಅಕ್ಷರಾದಬ್ಬೆ

ವಿದ್ಯೆ, ವಿನಯಗಳ ವಿಭೆ ನೀನು

ಜಸ, ಜಯಗಳ ಜವಾದಿ ನೀನು

ಯಾಗವಿದು, ಯಾನವಿದು ಜೀವನ

ಪವನ ಕೊಡ್ಡಿದ ನೀಲಾಂಜನ

ಭಯದಲಿ ಬೆಳಕ ಬೀರದಿರುವುದೇನು?

ಅಬ್ಬೆ ಹಿಡಿದ ಅಕ್ಷರಾದಬ್ಬೆ ನೀನು

ಅಬ್ಬೆಯಾವರಿಸಿದ ಅಬುದಿಯಲ್ಲಿ

ಮುಳುಗದೇ ತೇಲುತಿರುವ

ದಬ್ಬೆ ನೀನು"[೧]

ಇದನ್ನು ಗಮನಿಸಿದಾಗ ವಿಜಾ ಅವರ ವ್ಯಕ್ತಿ ಪ್ರಭಾವವನ್ನು ಕಾಣಬಹುದು. ಹಾಗೇ ಅವರು ಹಲವಾರು ಉತ್ತಮ ಶಿಷ್ಯರ ಬೆಳವಣಿಗೆಗೆ ಪಾತ್ರರು. ಆದರೆ ಶೈಕ್ಷಣಿಕ ದೃಷ್ಟಿಯಿಂದ ಮಾತ್ರ ಇವರು ಮೇರು ಗುಣವನ್ನು ಹೊಂದಿರದೆ ತಮ್ಮ ವೈಯಕ್ತಿಕ ನೆಲೆಯಿಂದಲೂ ವಿದ್ಯಾರ್ಥಿ ಅಂದರೇ ಶಿಷ್ಯರ ಮೇಲೆ ವಿಶೇಷ ಕಾಳಜಿ – ಪ್ರೀತಿಯನ್ನು ಹೊಂದಿದ್ದರು. ಇದಕ್ಕೆ ಆಧಾರವೆಂಬಂತೆ ಒಂದು ಸನ್ನವೇಶ ಘಟನೆಯನ್ನು ಇಲ್ಲಿ ಕಾಣಬಹುದು. ಅದು ಡಾ. ಶ್ರೀಧರ್.ಎಚ್.ಜಿ ಎಂಬ ಶಿಷ್ಯರು ಅಪಘಾತಕ್ಕೆ ಈಡಾಗಿ ಸತ್ತಿದ್ದಾರೆ ಎಂದು. ಪತ್ರಿಕೆಯಲ್ಲಿ ಇದೆ ಹೆಸರಿದ್ದರಿಂದ ತಪ್ಪಾಗಿ ಭಾವಿಸಿ, ಅವರ ಮನೆಗೆ ದೂರವಾಣಿಯ ಮೂಲಕ ಸಂಪರ್ಕಿಸಿ ವಿಚಾರಿಸಿ ಯಾವುದೇ ಅಪಾಯವಾಗಿಲ್ಲ ಎಂದು ತಿಳಿದು ನಿರಾಳರಾದ ವಿಜಯಾದಬ್ಬೆಯ ಗುಣ, ಅವರ ವಿನಯವಂತ ಸೌಜನ್ಯ ಕಾಳಜಿಗೆ ಹಿಡಿದ ಕನ್ನಡಿಯೆನ್ನಬಹುದು. ಹೀಗೆ ಹಲವಾರು, ಅದು ಮನೆಯ ಕೆಲಸದವರನ್ನು ನಡೆಸಿಕೊಳ್ಳುವ ರೀತಿಯಿಂದ ಹಿಡಿದು ತರಕಾರಿ ಮಾರುವ ಹೆಂಗಸನ್ನೂ ಉಪಚರಿಸುವವರೆಗೂ ಗುರುತಿಸಬಹುದು. ಒಮ್ಮೆ ಅವರ ನಾಯಿ 'ಜಾನು'

೧. ವಿಜಯಾನ್ವೇಷಣೆ, ಸಂ. ಡಾ. ಎಸ್.ಡಿ.ಶಶಿಕಲಾ ಇತ್ಯಾದಿ, ಪ್ರ. ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ಮು, ೨೦೦೪, ಪು. ೨೯–೩೦.

ನೆರೆಮನೆಯ ಕೆಲಸದವರನ್ನು ಕಚ್ಚಿದಾಗ ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ದುಬಾರಿ ಚಿಕಿತ್ಸೆ ಕೊಡಿಸಿ, ಮೆರೆದ ಮಾನವತೆಯನ್ನು, ಇಂತಹವೆ ಸನ್ನಿವೇಶದಿಂದ ವ್ಯಕ್ತಿಯಾಗಿ ವಿಜಯಾದಬ್ಬೆ ಅವರು ತುಂಬು ಮನಸ್ಸಿನ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಯಾಗಿದ್ದರು ಎಂಬುದನ್ನು ಕಾಣಬಹುದು. ಅಂತಃಕರಣ ಮಿಡಿವತಾಯಿ, ಸಹೋದರಿ, ಗೃಹಿಣಿಯಾಗಿ ಜೀವನ ನಡೆಸಿರುವ ವಿಜಯಾದಬ್ಬೆ ಅಷ್ಟೇ ಪ್ರಖರವಾಗಿ ಹಲವಾರು ಸಾಧನೆಯ ಹಾದಿಯನ್ನು ದಾಟಿ ಬಂದಿರುವುದ ಅವರ ಜೀವನ ಚಿತ್ರಣದಲ್ಲಿ ಗುರುತಿಸಬಹುದು. ಸಾಧಕಿಯಾಗಿ, ಮಹಿಳಾ ಹೋರಾಟಗಾರ್ತಿಯಾದ ಸಾಹಸಿಯಾಗಿ, ವಿಚಾರ ಪರತೆಯ ಲೇಖಿಯಾಗಿ ಅವರ ವ್ಯಕ್ತಿತ್ವದ ಕುರುಹುಗಳು ಉಳಿದಿರುವುದರಲ್ಲಿ ಲಕ್ಷಿಸಬೇಕಾದ ಸಂಗತಿ.

ವಿಜಯಾದಬ್ಬೆ ಒಳ್ಳೆ ವಿಚಾರವಂತಿಕೆಯ ಅಧ್ಯಾಪಕಿಯಾಗಿದ್ದು ಮಾತ್ರವಲ್ಲ. ಅವರು ಅಷ್ಟೇ ಸಾಹಸಿ ಗುಣವನ್ನು ಮೈಗೂಡಿಸಿಕೊಂಡಿದ್ದರು. ಇದನ್ನು ೧೯೬೩ರ ಸಂದರ್ಭದಲ್ಲಿ ಸ್ಥಳೀಯ ಶಿಬಿರಾರ್ಥಿಗಳೊಂದಿಗೆ ಹಿಮಾಲಯದ ಚಾರಣವನ್ನು ನಡೆಸಿರುವುದಕ್ಕೆ ಸಾಕ್ಷಿಯಾಗಿ ನೋಡಬಹುದು ಮತ್ತು ಮಹಿಳಾಪರ ಕಾಳಜಿಯ ಅವರ ಬದುಕಿನ ಮುಖ್ಯ ಸಾಧನೆ, ಸೇವೆ ಎನ್ನಬಹುದು. ಮಹಿಳೆಯರ ಬಗ್ಗೆ ಕಾಳಜಿ, ಚಿಂತನೆ ವಿಜಯಾದಬ್ಬೆಯವರು ಮುಖ್ಯವಾಗಿ ಹೊಂದಿದ್ದರು. ಒಮ್ಮೆ ತಮಿಳುನಾಡಿನ ದೇವಾಲಯವೊಂದನ್ನು ಸಹವರ್ತಿಗಳೊಂದಿಗೆ ಪ್ರವೇಶಿಸಿದ್ದು. ಅವರ ಮಹಿಳಾ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಇದ್ದ ಆಲೋಚನೆ ಹಾಗೇ ೧೯೭೮ರ ಸುಮಾರಿನಲ್ಲಿ ಆರಂಭವಾದ ಸಮತಾ ವೇದಿಕೆಯ ಸಕ್ರಿಯ ಸದಸ್ಯೆಯಾಗಿ ದುಡಿದು, ಸಮತಾ ವೇದಿಕೆಯಿಂದ ರಾಜ್ಯಮಟ್ಟದ ಮಹಿಳಾ ಸಮಾವೇಶವನ್ನು ನಡೆಸಿದ ಸಂದರ್ಭದಲ್ಲಿ, ವ್ಯಕ್ತವಾದ ವಿಜಯಾ ಅವರ ಕಳಕಳಿ ಅನೇಕ ಮಹಿಳೆಯರನ್ನು ಸಂಘಟಿತ ಕ್ಷೇತ್ರಕ್ಕೆ ಒಗ್ಗೂಡಿಸುವಲ್ಲಿ ಯಶಸ್ವಿಯಾಗಿರುವುದು ಬಹುಮುಖ್ಯ ಅಂಶವಾಗಿದೆ.

'ಸಮತಾ ಅಧ್ಯಯನ ಕೇಂದ್ರ'ದ ರುವಾರಿಯಾಗಿ ಹಲವು ಬಗೆಯ ಚಿಂತನ ಮಂಥನಗಳಿಗೆ ವೇದಿಕೆಗೆ ಭದ್ರತೆ ನೀಡಿದರು. ಇದರ ಬಗ್ಗೆ ಇವರಿಗಿದ್ದ ಆಸಕ್ತಿ ಎಷ್ಟೇಂದರೆ ಬೆಂಗಳೂರಿನ ಲೇಖಕಯರ ಸಂಘ ನೀಡಿದ ಅನುಪಮಾ ಪ್ರಶಸ್ತಿಯ ೧೦,೦೦೦ ರೂಪಾಯ ಮೊತ್ತವನ್ನು ಸಮತಾ ಕೇಂದ್ರಕ್ಕೆ ಜಾಗ ತೆಗೆಯಲು ಬಳಸಿದ್ದಾರೆ.

ವಿಜಯಾದಬ್ಬೆ ವೃತ್ತ ಜೀವನದಲ್ಲಿ ಅಧ್ಯಾಪಕಿ ಮಾತ್ರವಲ್ಲ, ಉತ್ತಮ ನಿಲಯಪಾಲಕರಾಗಿ ಸಹ ಕಾರ್ಯನಿರ್ವಹಿಸಿದ ವಿಜಯಾ ಅವರ ಧೀಶಕ್ತಿಗೆ ಮತ್ತೊಂದು ಗರಿ. ಹಾಸ್ಟೆಲ್ ಡೇಗೆ ಖ್ಯಾತ ಲೇಖಕಿ ಸಾರಾ ಅಬೂಬಕರ್‌ರವರನ್ನು ಕರೆಸಿದ್ದರೆಂದು

ತಿಳಿಯುತ್ತದೆ. ಇಂತಹ ವಿಚಾರವಂತಿಕೆಯಿಂದ ಕಾರ್ಯನಿರ್ವಹಿಸುವ ಇವರ ಈ ಸಾಧನೆಯ ಹಾದಿಯಲ್ಲಿ ಮಹಿಳಾ ಮತ್ತು ಮಹಿಳಾ ಸಾಹಿತ್ಯಪರ ಹೊಂದಿದ್ದ ಕಾಳಜಿ ಹಾಗೂ ಸಹಜವಾಗಿ ಅಧ್ಯಾಪಕಿಯಾಗಿದ್ದ ಇವರು ಬರೆವಣಗೆಯಲ್ಲಿ ತೊಡಗಿದರು. ಬಹುಮುಖ್ಯವಾಗಿ ಇವರು ಮಹಿಳಾ ಪ್ರಗತಿ, ಸಾಹಿತ್ಯದ ಬಗ್ಗೆ ವಸ್ತುನಿಷ್ಠವಾಗಿ ಚಿಂತಿಸಲು. ಆ ಸಮಯದಲ್ಲಿ ಪಾಶ್ಚಾತ್ಯ ವಿಚಾರಧಾರೆಯಾದ ಸ್ತ್ರೀವಾದಿ ಸಾಹಿತ್ಯವು ಬಂದಿದ್ದರಿಂದ ಮತ್ತು ಅಂದಿನವರೆಗೆ ಬಂದಿದ್ದ ಮಹಿಳಾ ಸಾಹಿತ್ಯವು ನೇರವಾಗಿ ಮಾತನಾಡಿದ್ದು, ಬರೆದದ್ದು ಕಡಿಮೆ ಎಂಬ ಈ ಎಲ್ಲಾ ಅಂಶಗಳು ವಿಜಯಾದಬ್ಬೆ 'ಸ್ತ್ರೀವಾದಿ ವಿಮರ್ಶೆ, ಸ್ತ್ರೀವಾದಿ ಸಾಹಿತ್ಯ ರಚನೆಯ ಮೂಲಕ ಸಹಜವಾಗಿ ಬರಹಗಾರ್ತಿಯಾಗಿ ಬರಲು ಪ್ರೇರಣೆಯಾದವು. ಈ ಮೂಲಕ ಉತ್ತಮ ಸಾಧಕಿಯಾಗಿ ಸ್ತ್ರೀವಾದಿ ಧೋರಣೆ, ವಿಮೋಚನಪರ ಚಿಂತಕಯಾಗಿ. ಹಲವಾರು ಲೇಖಕ ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಧಾರವಾಡದ ಮಹಿಳಾ ಅಧ್ಯಯನ ಕೇಂದ್ರ ನಡೆಸಿದ 'ಸಾಹಿತ್ಯದಲ್ಲಿ ಹೆಣ್ಣು ಮತ್ತು ಹೆಣ್ಣು ಮಗು' ಎಂಬ ವಿಚಾರಸಂಕಿರಣ, ಬಿ.ಆರ್.ಪ್ರಾಜೆಕ್ಟ್‌ನ ಕುವೆಂಪು ವಿಶ್ವವಿದ್ಯಾನಿಲಯದ 'ಸ್ತ್ರೀವಾದ ಮಹಿಳಾ ಸಾಹಿತ್ಯ' ಗೋಷ್ಠಿ. ರಾಜ್ಯಮಟ್ಟದ ಮೂರನೇ ಬಂಡಾಯ ಸಾಹಿತ್ಯ ಸಮ್ಮೇಳನ ೧೯೮೮ರಲ್ಲಿ ರಾಯಚೂರಿನಲ್ಲಿ ನಡೆದಾಗ ಭಾಗವಹಿಸಿರುವುದು. ಈ ಎಲ್ಲವೂ ಅವರ ಸಂಘಟನ ಶಕ್ತಿಯನ್ನು ತೋರಿಸುತ್ತವೆ. ಹಾಗೆಯೇ ಸಂಸ್ಕೃತಿಯ ಬಗ್ಗೆ ವಿಶೇಷ ಬಲವನ್ನು ಹೊಂದಿದ್ದ ವಿಜಯಾ ಅವರು ಯಾವುದೋ ಒಂದು ಸಿದ್ಧಾಂತಕ್ಕೆ ಕಟ್ಟುಬಿದ್ದವರಲ್ಲ. ೧೯೯೦ರಲ್ಲಿ ಮೈಸೂರು ದಸರಾ ವೀಕ್ಷಕ ವಿವರಣೆಯನ್ನು ಆಕಾಶವಾಣಿ ಮುಖಾಂತರ ನೀಡಿದ್ದರು. ಹಾಗೂ ಸ್ವತಃ ಹಾಡನ್ನು ಹೇಳುತ್ತಿದ್ದ ಇವರು ಸಮತಾ ಅಧ್ಯಯನ ಕೇಂದ್ರ ಹೊರತಂದ 'ಸಮತಾ ಗೀತೆಗಳ' ಗಾಯಕರಾಗಿದ್ದಾರೆ. ಮತ್ತು ನೀಲಗಿರಿ ಬುಡಕಟ್ಟಿನ ಜನಾಂಗದ ಹಾಡಿಗೆ ತೆರಳಿ ಅವರ ಸಾಂಸ್ಕೃತಿಕ ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಒರಿಸ್ಸಾ ಪ್ರವಾಸಕ್ಕೆ ತೆರಳಿದ್ದು ವಿಜಯಾದಬ್ಬೆಯವರು ಪ್ರವಾಸ ಕಥನ ರಚಿಸಿದ್ದು, ಸಾಂಸ್ಕೃತಿಕವಾದ ವಾತಾವರಣಕ್ಕೆ ತೆರೆದುಕೊಂಡ ಅವರ ಮನಸ್ಸನ್ನು ಅನಾವರಣಗೊಳಸುತ್ತದೆ ಮತ್ತು ಸಾಮಸ್ಕೃತಿಕವಾಗಿ ೧೯೯೭-೯೮ನೇ ಸಾಲಿನ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯ ಆಯ್ಕೆಯ ಸಮಿತಿಯಲ್ಲಿ ಇರುವುದನ್ನು ಸ್ಮರಿಸಬಹುದು. ಇಂತಹ ಹಲವಾರು ಧೀಮಂತ ಪ್ರವೃತ್ತಿಗಳನ್ನು ಹೊಂದಿ, ಬೆಳೆದ ಲೇಖಕಿ ವಿಜಯಾದಬ್ಬೆ ಅವರು ಹಲವು ಗೌರವ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಮೊದಲನೆಯದಾಗಿ 'ವರ್ಧಮಾನ' ಸಾಹಿತ್ಯ ಪ್ರಶಸ್ತಿ

೧೯೭೯ರಲ್ಲಿ 'ಇರುತ್ತವೆ' ಕವನ ಸಂಕಲನಕ್ಕೆ ದೊರಕಿದೆ. ಅನಂತರ '೧೯೯೩ರಲ್ಲಿ ಅನುಪಮಾ ಪ್ರಶಸ್ತಿ', ೧೯೯೫ರಲ್ಲಿ 'ಸಮೋದಿತಾ ಪ್ರಶಸ್ತಿ' ೧೯೯೮ರಲ್ಲಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ೨೦೦೧ರಲ್ಲಿ 'ಸಂದೇಶ ಪ್ರಶಸ್ತಿ' ಪಡೆದಿರುತ್ತಾರೆ.

ವಿಜಯಾದಬ್ಬೆ ಹೀಗೆ ವಿಚಾರವಂತಿಕೆ, ಸಕ್ರಿಯ ಹೋರಾಟಗಾರ್ತಿಯಾಗಿ ಬೆಳೆಯುತ್ತ ಬರುವಾಗಲೆ ಇದು ಕನ್ನಡ ಸ್ತ್ರೀವಾದಿ ಸಾಹಿತ್ಯದ ಕುಂಟಿತವೆಂಬಂತೆ ಒಬ್ಬ ಉತ್ತಮ ಲೇಖಕಿಯನ್ನು ಸಾಹಿತ್ಯ ಕೃಷಿಯಿಂದ ಕಳೆದುಕೊಳ್ಳುವಂತಾಯಿತು. ೧೯೯೯ರಲ್ಲಿ ಅಪಘಾತಕ್ಕೆ ಒಳಗಾದ ಡಾ. ವಿಜಯಾದಬ್ಬೆ ಅವರು. ಆದರೂ ಆಪ್ತರ ಸಾಹಿತ್ಯಾಸಕ್ತರ ಪ್ರಾರ್ಥನೆ ಮೂಲಕ ಆರೋಗ್ಯದಲ್ಲಿ ಸುಧಾರಣೆಯನ್ನು ಕಂಡುಕೊಂಡರು. ಆದರೆ ಪೂರ್ಣವಾಗಿ ಅವರನ್ನು ಮತ್ತೆ ಸಾಹತ್ಯಲೋಕಕ್ಕೆ ತೆರೆದುಕೊಳ್ಳಲು ಆಗದಿರುವುದು ವಿಷಾದನೀಯ ಸಂಗತಿ. ಅಂದು ಹಲವಾರು ಪತ್ರಿಕೆಗಳಲ್ಲಿ ಸುದ್ದಿಯನ್ನು ಪ್ರಕಟಿಸಿ ಅದರ ಜೊತೆಗೆ ಅವರು ಗುಣಮುಖರಾಗಿ ಬರಲೆಂದು ಹಲವಾರು ಆಪ್ತರು, ಶಿಷ್ಯರು, ಸಹೃದಯ ಬಳಗ ಹಾರೈಸಿದನ್ನು ಪತ್ರಿಕೆಗಳಲ್ಲಿ ಕಾಣಬಹುದು. 'The Times of India News Service' ಪತ್ರಿಕೆ, ಪ್ರಜಾವಾಣಿ, ಸ್ಥಳೀಯ ಹಲವಾರು ಪತ್ರಿಕೆಗಳಲ್ಲಿ ವಿಜಯಾದಬ್ಬೆಯವರು ಮತ್ತೆ ಮೊದಲಿನಂತೆ ಚೇತರಿಸಿಕೊಂಡು ಬರಲಿ ಎಂಬ ಹಾರೈಕೆಯ ಆಶಯಗಳಲ್ಲಿ, ಇಲ್ಲಿ ಒಂದನ್ನು ಸ್ಮರಿಸಬಹುದು. ಡಾ. ಸಿ.ನಾಗಣ್ಣ ಅವರು ಪತ್ರಿಕೆಯಲ್ಲಿ ಅವರನ್ನು ಕುರಿತು ಸ್ಪಂದಿಸಿದ ರೀತಿಗೆ ಸಾಕ್ಷಿ ಈ ಪದ್ಯ.

"ಫಲ ಬಿಡುವ ಮರದ ಹಾಗೆ
ಹಲವು ಸಂಗತಿಗಳನ್ನು ತಲೆಯಲ್ಲಿ
ಹೊತ್ತು
ಹೊತ್ತಗೆಗಳನ್ನೊದಿ ಬೋಧಿಸಿ
ಬಲಹೀನರ ಹಾದಿಯ ಕಲ್ಲು ಮುಳ್ಳು
ತೆಗೆದು
ಹದ ಮಾಡುವ ಕಾಯಕ ಕೈಗೊಂಡ
ಸೋದರಿ
ಮಲಗಿದಿರಿ ಹೀಗೆ ಮೌನವಾಗಿ

ಮಾತಾಡಿ ಎಂದಿನಂತೆ

ತಿರುಗಾಡಿ ಎಂದಿನಂತೆ

ಕುಂದದ ಹುರುಪಿನ ಒರತೆಯಾಗಿ

ಬಂದ ಕಾರ್ಯ ಮುಗಿದಿಲ್ಲ

ಬಿದ್ದಿದೆ ಬ್ರಹ್ಮಾಂಡ

ಕತ್ತಲೆ ಎಷ್ಟಿದೆ ನೋಡಿ

ಸದೃಢ ಸಂಕಲ್ಪ ಬಿತ್ತುವಷ್ಟು!

ಹೊತ್ತಾಯಿತು ಎದ್ದೇಳಿ

ಓದಿಗೆ ಬೋಧನೆಗೆ

ಬರವಣಿಗೆಗೆ ಉಪನ್ಯಾಸಕ್ಕೆ

ಹತ್ತೆಂಟು ಹೊಣೆಗಾರಿಕೆಗೆ ಇಂಬಾದ ಚಿತ್ತ

ದಿಂಬಿಗೆ ಒರಗುವುದೆಂದರೇನು!

ನಿಮಗೆ ಸೋಲಿಲ್ಲ

ನಿಮ್ಮ ಹೆಸರಲ್ಲೆ ಇರಲಾಗಿ ಗೆಲವು"

ಇಂತಹ ಹಲವಾರು ಅನಿಸಿಕೆಗಳು, ವಿಜಯಾದಬ್ಬೆಯ ವ್ಯಕ್ತಿಗೌರವದ ಮಹತ್‌ನ್ನು ತೋರಿಸುವಂತಹ ಕುರುಹುಗಳು. ಇಷ್ಟೊಂದು ಪ್ರೀತ್ಯಾಧಾರಗಳನ್ನು ಹೊಂದಿದ್ದರು ಎಂಬುದನ್ನು ಗುರುತಿಸಬಹುದು.

ವಿಜಯಾ ಅವರು ಮತ್ತೆ ಚೇತರಿಸಿಕೊಂಡು ಸಂಪೂರ್ಣವಾಗಿ, ಇಂದಿನ ಸಾಹಿತ್ಯ ಕ್ಷೇತ್ರಕ್ಕೆ ಮತ್ತೆ ವಿಜಯ ಪಡೆದು ತಮ್ಮ ವಿಚಾರಧಾರೆಗಳನ್ನು ಬರೆವಣಿಗೆಯ ಮೂಲಕ ಹರಿಯಬಿಡುವರೇ ಎಂಬುದಾಗಿ ಕಾದು, ಮತ್ತೆ ಸಿಗಲಿ ಆ ಭಾಗ್ಯ ಇಂದಿನ ಸಹೃದಯ ಬಳಗಕ್ಕೆ ಎಂದು ಈ ಮೂಲಕ ಶುಭ ಹಾರೈಸುವ ಅವರ ಮುಂದಿನ ಹಾದಿಗೆ.

ಯಾವುದೇ ವೈಚಾರಿಕ, ಉತ್ತಮ ಸಾಹಿತ್ಯ ಕೃತಿಗಳ ಮೂಲಕದರ ನಿರ್ಮಾತೃಗಳ ನೆಲೆಯು ಎಂದಿಗೂ ಅಮರವಾಗಿರುತ್ತದೆ ಎಂಬುದನ್ನು ಅರಿಯಬಹುದಾಗಿದೆ ಈ ಮೂಲಕ.

ಅಧ್ಯಾಯ ೩

ಬರಹಗಾರ್ತಿಯಾಗಿ ವಿಜಯಾದಬ್ಬೆ

ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಬೆಳವಣಿಗೆಯಲ್ಲಿ ವಿಜಯಾದಬ್ಬೆಯವರದು ಪ್ರಮುಖ ಹೆಸರು. ಕನ್ನಡದಲ್ಲಿ ಸ್ತ್ರೀವಾದಿ ಚಿಂತನೆಯನ್ನು ಬೆಳೆಸುವಲ್ಲಿ ಇವರ ಪಾತ್ರವು ದೊಡ್ಡದು. ಮಹಿಳಾ ಬರವಣಿಗೆಯ ಘನತೆ, ಮಹಿಳಾ ಬರವಣಿಗೆಯಲ್ಲಿ ಸೂಕ್ಷ್ಮ ಎಚ್ಚರ ಲಿಂಗ ತಾರತಮ್ಯ ನೀತಿಯ ವಿರೋಧ, ಮಹಿಳೆಯರಲ್ಲಿ ಹುಟ್ಟಬೇಕಾದ ಅರಿವು ಮುಂತಾದವುಗಳನ್ನು ತಮ್ಮ ಬರಹ ಮತ್ತು ಚಳುವಳಿಗಳಲ್ಲಿ ತೋರಿಸಿಕೊಟ್ಟ ವಿಜಯಾದಬ್ಬೆ ಪ್ರಗತಿಪರ ಚಿಂತಕಿಯೂ ಹೌದು. "ಮಹಿಳೆಯರ ಸಾಹಿತ್ಯವೆಂದರೆ ಅಡುಗೆ ಮನೆ ಸಾಹಿತ್ಯ", "ಮಹಿಳೆಯರು ಜನಪ್ರಿಯ ಕಾದಂಬರಿಗಳನ್ನು ಮಾತ್ರ ಬರೆಯಬಲ್ಲರು" ಇತ್ಯಾದಿ ಹೀಗಳಿಕೆಯ ಮಾತು ಕನ್ನಡ ಸಾಹಿತ್ಯದಲ್ಲಿ ಪ್ರಬಲವಾಗಿ ಕೇಳಿಬರುತ್ತಿದ್ದ ಹೊತ್ತಿನಲ್ಲಿ, ವಿಜಯಾದಬ್ಬೆಯವರು ಬರವಣಿಗೆಯ ಕಾಯಕಕ್ಕೆ ಇಳಿದರು. ಮಹಿಳಾ ಸಾಹಿತ್ಯದ ಸೃಜನೇತರ ಪ್ರಕಾರಗಳಾದ ಸಾಹಿತ್ಯ ವಿಮರ್ಶೆ ಗ್ರಂಥಸಂಪಾದನೆ ಜೀವನ ಚರಿತ್ರೆ ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕಿಯರ ಜೀವನ ಮತ್ತು ಸಾಹಿತ್ಯದ ಮೌಲ್ಯಮಾಪನ, ಅನುವಾದ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ವಿಜಯಾದಬ್ಬೆಯವರು ದುಡಿದರು. ಜೊತೆಗೆ ಇವರು ಪ್ರವಾಸಸಾಹಿತ್ಯವನ್ನು ಕೂಡ ಬರೆದಿದ್ದಾರೆ. ಸಾಂಪ್ರದಾಯಕವಾಗಿ ಮಹಿಳಾ ಸಾಹಿತ್ಯದ ಬಗ್ಗೆ ಬಂದಿರುವ ಅನೇಕ ಕಲ್ಪನೆಗಳನ್ನು ಹೋಗಲಾಡಿಸುವಲ್ಲಿ ವಿಜಯಾದಬ್ಬೆಯವರು ಯಶಸ್ವಿಯಾದರು. ಈ ದೃಷ್ಟಿಯಿಂದಲೇ ಮಹಿಳಾಪರ ಚಿಂತಕಿಯಾಗಿ ಕನ್ನಡ ಸಾಹಿತ್ಯದಲ್ಲಿ ಅನನ್ಯವಾದ ಸ್ಥಾನವೊಂದನ್ನು ಪಡೆದಿದ್ದಾರೆ. ಬಹುಮುಖ್ಯವಾಗಿ ಆ ಸಮಯದಲ್ಲಿ ಲೇಖಕಿಯರು ಸಾಮಾನ್ಯವಾಗಿ ಹೆಚ್ಚಾಗಿ ಕೈಹಾಕದ ಸಂಶೋಧನೆ; ವಿಮರ್ಶೆಯಂತಹ ಪ್ರಕಾರಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃಷಿಯಾಯಿತು. ಹಾಗೇ ಲೇಖಕಿಯು ಸಹೃದಯತೆ, ಮಾನವೀಯ ಅನುಕಂಪ, ಅನ್ಯಾಯದ ವಿರುದ್ಧದ ಪ್ರತಿಭಟನೆ, ಲಿಂಗ ತಾರತಮ್ಯ ನೀತಿಯ ವಿರೋಧದಂತಹ ಸಾಮಾಜಿಕ ಅಸಮಾನತೆಯ ಗುಣಗಳು ಬರಹಗಳ ಮೇಲೂ ಪ್ರಭಾವ ಬೀರಿರುವುದನ್ನು ಅರಿಯಬಹುದು.

ವಿಜಯಾದಬ್ಬೆಯವರ ಬರಹದ ಬಹುಮುಖ್ಯ ಕಾಳಜಿ, ದನಿಯೆಂದರೆ ಸ್ತ್ರೀಪರ ಚಿಂತನೆಯು ಇದು ಆಧುನಿಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಮುಖ್ಯವಾದುದು. ಇಂತಹ ಹಲವಾರು ಅಂಶಗಳು, ವಿಜಯಾದಬ್ಬೆ ಅವರ ಬರಹಗಳಲ್ಲಿ ಖಚಿತತೆ, ಅವರ

ವೈಜ್ಞಾನಿಕ ದೃಷ್ಟಿಕೋನ, ಪ್ರಗತಿಯ ಕುರಿತ ಎಚ್ಚರಗಳು ಅವರಿಗೆ ಸಾಹಿತ್ಯದಲ್ಲಿ ಹೆಸರನ್ನು ತಂದುಕೊಟ್ಟಿವೆ. ಆದ್ದರಿಂದ ವಿಜಯಾದಬ್ಬೆಯವರನ್ನು ಬರಿಯ ಕವಿಯತ್ರಿಯೆಂದೋ, ವಿಮರ್ಶಕಿಯೆಂದೋ, ಸಂಶೋಧಕಿಯೆಂದೋ ಗುರುತಿಸುವುದು ಕಷ್ಟ ಇವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೆಲಸ ಮಾಡಿರುವುದರಿಂದಲೂ ವರನ್ನು ಅನನ್ಯವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬರಹಗಾರ್ತಿಯಾಗಿ ಗುರುತಿಸಲು ಸಾಧ್ಯವಾಗಿದೆ.

ಅ) ಕವಿಯತ್ರಿಯಾಗಿ:

ಕಾವ್ಯ ಕವಿಯ ಅನುಭವದ ಮೂಸೆಯಿಂದ ಹೊರಹೊಮ್ಮುವ ಗೇಯತೆಯ ಅನನ್ಯತೆಯೊಂದಿಗೆ ವೈಯಕ್ತಿಕ ಭಾವಗಳು ಕವಿತೆಯಲ್ಲಿ ಪಡಿಮೂಡಿರುತ್ತದೆ. ಕವಿ ಎಂಬ ವ್ಯಕ್ತಿಯ ಅನ್ವರ್ಥನಾಮ ಸಾರ್ಥಕಗೊಳ್ಳುವುದು ಸೃಜನಶೀಲ ಸೃಷ್ಟಿಯಾದ ಕವಿತೆ, ಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಇಂತಹ ಸಾಹಿತ್ಯದ ಸೃಜನ ಸೃಷ್ಟಿಕ್ರಿಯೆಯಾದ ಕಾವ್ಯ ಅಂದರೆ ಕವನಗಳ ರಚನೆಯಲ್ಲಿ ವಿಜಯಾದಬ್ಬೆ ಅವರು ಒಂದು ವಿಶಿಷ್ಟ ಅಭಿವ್ಯಕ್ತಿ ಧಾಟಿಯನ್ನು ಅವರ ಅಮೂಲ್ಯ ನಾಲ್ಕು ಕವನ ಸಂಕಲನಗಳಲ್ಲಿ ಕಾಣಬಹುದು. ಕವಿಯತ್ರಿ ವಿಜಯಾದಬ್ಬೆ ಮೊದಲ ಕವನ ಸಂಲನ ೧೯೭೫ರಲ್ಲಿ 'ಇರುತ್ತವೆ' ನಂತರ ೧೯೮೫ರಲ್ಲಿ 'ನೀರುಲೋಹದ ಚಿಂತೆ', ೧೯೯೫ರಲ್ಲಿ 'ತಿರುಗಿನಿಂತ ಪ್ರಶ್ನೆ', ಕೊನೆಯದಾಗಿ 'ಇತಿಗೀತಿಕೆ' ೧೯೯೬ ನಾಲ್ಕು ಕವನ ಸಂಕಲನ ಎಂದು ಭಾವಿಸಿದರು ಕೊನೆಯ 'ಇತಿಗೀತಿಕೆ' ಕವನಸಂಕಲನವು ಮೊದಲ ಮೂರು ಕವನಸಂಕಲನಗಳ ಸಂಗ್ರಹವಾಗಿದೆ.

"ಕಾವ್ಯದ ಸ್ವಾತಂತ್ರ್ಯವನ್ನು ಆದರಿಸುವ ನಾನು ಅದರ ಪರವಾಗಿ ಏನನ್ನು ಹೇಳುವುದಿಲ್ಲ. ಏನನ್ನಾದರೂ ಹೇಳುವ ಹೇಳದಿರುವ ಹಕ್ಕು ಗುಣ-ಮಿತಿ ಅದರದ್ದೇ ಆಗಿದೆ. ಏನನ್ನಾದರೂ ಕೇಳುವ ಕೇಳದಿರುವ ಹಕ್ಕು, ಗುಣ-ಮತಿ ಓದುಗರದೇ ಆಗಿದೆ"[೧] ಎಂದು ಲೇಖಕಿಯು ನೆನೆಯುವ ಹಿಗ್ಗು ಎಂದು 'ಇತಿಗೀತಿಕೆ'ಯ ಸಂಗ್ರಹವು ಪ್ರಕಟವಾದಾಗ ಲೇಖಕಿಯ ಮಾತುಗಳಲ್ಲಿ ಕಾಣಬಹುದು. ಇಲ್ಲಿ ಕಾವ್ಯವು ಅದರದೆ ಅಸ್ಮಿತೆಯನ್ನು ಹೊಂದಿರುತ್ತದೆ ಎಂದೂ ಎಲ್ಲರಿಗೂ ಅದರ ಭಾವವನ್ನು ಸಮಗ್ರವಾಗಿ ಅರಿಯುವುದು ಅವರವರ ಮಿತಿಗೆ ಒಳಪಟ್ಟಂತೆ ಎಂಬ ಮಾತು ಕಾವ್ಯದಲಿ ಮಾತ್ರ, ಇದು ಸುಪ್ತಪ್ರಜ್ಞೆಯ ವ್ಯಕ್ತರೂಪವಾಗಿರುವುದರಿಂದ ಆದರೂ ಕೆಲವೊಂದು ಮಾದರಿ ರೂಪಗಳಿಂದ ಭಾವದ ಹಿನ್ನೆಲೆಯ ಶೋಧ ಸಾಹಿತ್ಯ ಅಧ್ಯಯನ ಎಂದು ಅಭ್ಯಸಿಸುವಾಗ ಅನಿವಾರ್ಯ.

---

೧. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.

'ಇತಿಗೀತಿಕೆ'ಯ ಕವನ ಸಂಕಲನವು ಒಟ್ಟು ನಾಲ್ಕು ಸಂಕಲನದ ಕವಿತೆಗಳನ್ನು ಒಳಗೊಂಡಿದೆ. ಇರುತ್ತವೆ' ಯು ಕನ್ನಡಿಯಲಿ, ಕಿಟಕಿಗಳಲ್ಲಿ, ಫರೀದಾಬೇಗಂ, ಜೋ ಜೋ, ಸಂಭವಾಮಿ ಕ್ಷಣೇಕ್ಷಣೇ, ಅದೃಷ್ಟ, ಬೆಳ್ಳಿಕೋಲು, ಅದೇವೃತ್ತ, ಹೂತಹೆಣ, 'ಪಾಪ, ನೀವು ಹೋಣೆಯಲ್ಲ', ಇರುತ್ತವೆ, ಧನ್ಯೆ, ನಾರೀಮಣಿಗಳಿಗೊಂದು ಕಿವಿಮಾತು, ಹೀಗೆ ಒಟ್ಟು ಮೂವತ್ತಮೂರು ಕವಿತೆಗಳನ್ನು ಹೊಂದಿದೆ. 'ನೀರುಲೋಹದ ಚಿಂತೆ' – ಸಂಕಲನವು ಇಪ್ಪತ್ತೈದು ಕವಿತೆಗಳನ್ನು ಒಳಗೊಂಡಿದೆ. 'ತಿರುಗಿನಿಂತ ಪ್ರಶ್ನೆ' – ಕವನಸಂಕಲನವು ಕೊನೆಯ ಹಾಗೂ ದೀರ್ಘವಾದದ್ದು ಒಟ್ಟು ನಲವತ್ತೇಳು ಕವಿತೆಗಳಿವೆ. ಒಟ್ಟಾರೆ ನೂರಕ್ಕೂ ಹೆಚ್ಚು ಕವಿತೆಗಳನ್ನು 'ಇತಿಗೀತಿಕೆ' ಒಳಗೊಂಡಿದೆ.

"ವಿಜಯಾದಬ್ಬೆಯವರ ಸೂಕ್ಷ್ಮ ಕೆಳದನಿಯ ಕಾವ್ಯ ತನ್ನ ವೈಶಿಷ್ಟ್ಯಪೂರ್ಣತೆ-ಯಿಂದ ಕಣ್ಣು ಸೆಳೆಯುತ್ತದೆ. ಅವರಲ್ಲಿಯ ಜೀವಂತ ಸಂವೇದನಾಕ್ರಮವು ನಮ್ಮ ಮನಸ್ಸಿಗೆ ಅನಪೇಕ್ಷಿತ ಮೂಲೆಗಳಲ್ಲಿ ತಟ್ಟಿ ಖುಷಿಕೊಟ್ಟು ಪ್ರಚೋದಿಸುತ್ತದೆ. ಅನುಭವದ ಅಸ್ತಿತ್ವವಾದಿ ದ್ವಂದ್ವವನ್ನೂ ಅದರ ಹಿಂದಿನ ಶೂನ್ಯತೆಯ ಅರಿವನ್ನೂ ಕೂಡಿಯೇ ಅಭಿವ್ಯಕ್ತಿಗೊಳಿಸುವ ಕಾವ್ಯ ಧ್ವನಿಪೂರ್ಣವಾಗಿದೆ."[೧]

ವಿಜಯಾದಬ್ಬೆಯ ಕಾವ್ಯ ಕುರಿತು ನವ್ಯದ ಪ್ರಮುಖ ಪ್ರವರ್ತಕರಾದ ಶಾಂತಿನಾಥ ದೇಸಾಯಿ ಅವರು 'ಇತಿಗೀತಿಕೆ'ಯ ಬೆನ್ನುಡಿಯಲ್ಲಿ ಹೇಳಿರುವ ಮಾತುಗಳು. ಕಾವ್ಯ ವಸ್ತುಸ್ಥಿತಿಯನ್ನು ಅವಲೋಕಿಸುವಲ್ಲಿ ನವ್ಯನೆಲೆಯಿಂದಾಗಿಯೇ ಹೆಚ್ಚಾಂಶ ಎಂದು ಕವಿತೆಗಳ ಮುಂದಿನ ಅಭ್ಯಾಸದಿಂದ ಕಂಡುಕೊಳ್ಳುವ ಹಾಗೇ ಇವರ ಮಾತುಗಳು ಸಹ ಅದನ್ನೇ ಬಿಂಬಿಸುತ್ತದೆ.

ಕಾವ್ಯಮಾರ್ಗದಲ್ಲಿ ವಿಜಯಾರವರದು ಸಾವಧಾನನಡಿಗೆ, ಇವರ ಮೊದಲ ಕವನಸಂಕಲನ 'ಇರುತ್ತವೆ' ಎನ್ನುವ ಹೆಸರೇ ವಿಶಿಷ್ಟಪೂರ್ಣ ಹಾಗೂ ಧ್ವನಿಪೂರ್ಣವಾಗಿದೆ ಹಾಗೇ 'ನೀರುಲೋಹದ ಚಿಂತೆ', 'ತಿರುಗಿನಿಂತಪ್ರಶ್ನೆ' ಹೆಸರಲ್ಲೆ ತಾತ್ವಿಕ ಚಿಂತನೆಗೆ ಕವಿತೆಗಳು ಓದುಗನನ್ನು ಅಂತರ್ಮುಖಿಯಾಗಿಸುತ್ತವೆ. ವಿಜಯಾದಬ್ಬೆ ಅವರು ಕವಿಯತ್ರಿಯಾಗಿ ಬರವಣಿಗೆಗೆ ತೊಡಗಿಸಿಕೊಂಡ ಕಾಲ ಕನ್ನಡಸಾಹಿತ್ಯ ಅದರಲ್ಲೂ ಆಧುನಿಕ ಸಂದರ್ಭದಲ್ಲಿ ದಲಿತ-ಬಂಡಾಯದ ಹೊಳವು ಹೆಚ್ಚಾಗಿ ಪ್ರಕಟಗೊಂಡ ಸಂಧಿಸಮಯ ಹಾಗೇ ಸ್ತ್ರೀಸಂವೇದನೆಯ ಸ್ತ್ರೀವಾದಿ ಎಂಬ ಸಾಹಿತ್ಯ ಹಬ್ಬಿಕೆಯ ಸಂದರ್ಭ ಎಂಬುದು ತಿಳಿದರು. ಕವಿತೆಗಳ ಸುವರ್ಣ ಸಮಯ ಸೌಂದರ್ಯೋಪಸಾನೆಯ ನವೋದಯ ಹಾಗೂ ಮಾನವೀಯ ಅಂತರ್‍ಯದ,

೧. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.

ಸಾಮಾಜಿಕ ಸ್ಥಿತ್ಯಂತರದ ಅವಸ್ಥೆಯಲ್ಲಿ ಮನೋಭೂಮಿಕೆಯಲ್ಲಿ ಏಳುವ ಪ್ರಶ್ನೆಗೆ ಉತ್ತರಿಸಿದಂತೆ, ಕವಿತೆಯಾದ ನವ್ಯಕಾಲದ ವಸ್ತುಧೋರಣೆಯನ್ನು ವಿಜಯಾದಬ್ಬೆಯ ಕವನಗಳು ಹೊಂದಿವೆ. "ನವ್ಯತೆಯು ಒದಗಿಸಿಕೊಟ್ಟ ಉಪಕರಣಗಳ ಸಹಾಯದಿಂದ ಇವರು ಸುಲಭವಾಗಿಯೇ ಎಂಬಂತೆ ಕವಿತೆಗಳನ್ನು ಬರೆಯಬಲ್ಲರು. ಸಂಕಲನದ ಯಾವುದೇ ಕವಿತೆಯನ್ನು ಎತ್ತಿಕೊಂಡರೂ ಅಂಶವು ನಮಗೆ ಸ್ಪಷ್ಟವಾಗುತ್ತದೆ. ಭಾವವು ಸಮಾನಾಂತರವಾಗಿ ಚಲಿಸುತ್ತಾ ಎಲ್ಲಿಯೂ ಸ್ಫೋಟಗೊಳ್ಳದೇ ವಿರಮಿಸುವುದೇ ಈ ಕವಿತೆಗಳ ಮುಖ್ಯ ತೊಂದರೆ ಎಂದು ನನಗನ್ನಿಸುತ್ತದೆ. ನಿರ್ಲಿಪ್ತವಾಗಿ ನೋಡುವ ಕಣ್ಣುಬೇಕು. ಆದರೆ ನಿರ್ಜೀವವಾಗಿ ನೋಡುವ ಕಣ್ಣು ಕವಿತೆಯ ಜೀವ ಧ್ವನಿಯನ್ನು ನಂದಿಸಿಬಿಡುತ್ತದೆ..."[೧] ಎಂಬುದನ್ನು ದಟ್ಟ ಜೀವನ ಪ್ರೀತಿಯ ಕಾವ್ಯವಾಗಿದೆ. ವಿಜಯಾ ಅವರ ಕಾವ್ಯರಚನೆ ಕುರಿತು ಸುಬ್ರಾಯ ಚೊಕ್ಕಾಡಿ ಅವರ ಮಾತುಗಳು ಕವಿತೆಯು ಹೆಚ್ಚಾಗಿ ಬದುಕಿನ ಸಾವಿನ ಎಲ್ಲೆಯಲ್ಲೇ ಸಾಗುವುದರಿಂದ ಅನಿಸುತ್ತದೆ. ಆದರೂ ವಿಜಯಾ ಅವರ ಕವಿತೆಗಳನ್ನು ನವ್ಯದ ಛಾಯೆ ಎಂಬುದೊಂದರಿಂದ ಮಾತ್ರ ಅರಗಿಸಿಕೊಂಡರು, ಸುಲಭ ತರದಲ್ಲಿ ಇಷ್ಟಕ್ಕೆ ಕಾವ್ಯ ಧೋರಣೆಯ ಹೊಳವು ನಿಲ್ಲುತ್ತದೆ ಅನಿಸುವುದಿಲ್ಲ. ಪೂರ್ಣವಾಗಿ ಕವಿತೆಗಳನ್ನು ಆಸ್ವಾದಿಸುವಾಗ ಅಂದರೆ ಲೇಖಕಿಯೆ ಕಾವ್ಯದ ಸ್ವಾತಂತ್ರ್ಯವೇನಿದ್ದರೂ ಓದುಗ ವರ್ಗದೆ ವಿಸ್ತಾರದಂತೆ ಎಂದಾಗ, ಕವಿತೆಗಳು ಹೆಚ್ಚಾಗಿ ಸ್ತ್ರೀವಾದಿ ನೆಲೆಯಲ್ಲೆ ಗುರುತಿಸಿಕೊಂಡರು. ನವೋದಯದ ಸೌಂದರ್ಯ, ಆದರ್ಶಪ್ರೇಮದ, ದಾಂಪತ್ಯದ ಹೊಳವು, ನವ್ಯದ ಆಂತರೀಕ ಶೋಧ, ಸಾವಿನತ್ತ ಮುಖಮಾಡುವ – ಬದುಕಿನ ಸ್ಥಿತ್ಯಂತರಗಳು ಹಾಗೂ ಸ್ತ್ರೀವಾದಿ ಸರಿಧಿಯಿಂದ, ಪೌರಾಣಿಕ ಪಾತ್ರಗಳು ಅಭಿನ್ನತೆಯಾಗಿ ಬಂದರು ವಿಚಾರದೃಷ್ಟಿಯಿಂದ ಭಿನ್ನ, ಹನಿಗವನಗಳಂತೆ ಬಂದರೂ ಸಹ ವಿಚಾರಪರತೆಯನ್ನು ಬಹಳ ಸೂಕ್ಷ್ಮವಾಗಿ ಶುಷ್ಕ ಬೋಧನೆಯಾಗದಂತೆ ಅತೀ ಸರಳವಾಗಿ ಅರಿವಿನ ಎಲ್ಲೆಯನ್ನು ವ್ಯಾಪಕವಾಗಿ ಕವಿತೆಯಲ್ಲಿ ತೊಡಗಿಸಿರುವ ನೈಪುಣ್ಯತೆ ಹೊಸದು, ಭಾವತೀವ್ರತೆಯ, ಕೋಮಲ, ಮೃದು ಭಾಷಿಕ ರಚನೆ ಅತಿಯಾಗದಂತೆ, ಬುದ್ಧಿಗಿತ್ತ ಪ್ರಾದಾನ್ಯ ಎಲ್ಲಾ ಅಂಶಗಳು ವಿಜಯಾ ಅವರ ಕವಿತೆಗಳು ಸ್ವಲ್ಪದಲ್ಲೇ ಮಹತ್ ಅನ್ನು ಅಡಗಿಸಿಕೊಂಡಿದ್ದೇವೇನೋ ಎಂಬಂತೆ ಭಾಸವಾಗುತ್ತವೆ. ವಸ್ತು ಸ್ವರೂಪವನ್ನು ಆಸ್ವಾದಿಸುತ್ತ ಸಾಗಿದಂತೆ.

---

೧. ವಿಜಯಾನ್ವೇಷಣೆ, ಸಂ. ಡಾ. ಎಸ್.ಡಿ.ಶಶಿಕಲಾ ಮತ್ತು ಇತರರು, ಪ್ರ. ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ಮು, ೨೦೦೪, ಪು. ೫೩.

ಅಂದರೆ ನವೋದಯದ ಹೊಳವು ಕೆಲವು ಕವಿತೆಗಳಲ್ಲಿ ಕಾಣಬಹುದು. ನವೋದಯದ ಪ್ರಧಾನ ಅಂಶವಾದ, ಮನುಷ್ಯನನ್ನು ಕೇಂದ್ರಿಕರಿಸಿಕೊಂಡ ಕಾವ್ಯ. ಆ ಮೂಲಕ ಸಾಮಾನ್ಯನಿಗೆ ಅವನ ಭಾವನೆಗಳಿಗೆ ಮಹತ್ವವನ್ನು ನೀಡಿತು, ನಿಸರ್ಗ ವಿಚಾರ ಮುಖ್ಯ ಸಂಗತಿಯಾಯ್ತು, ಮನುಷ್ಯ ಮತ್ತು ಪ್ರಕೃತಿ ಮನುಷ್ಯ ಮತ್ತು ಆಧ್ಯಾತ್ಮ, ಮನುಷ್ಯ ಮತ್ತು ಮಾನವೀಯ ಸಂಬಂಧಗಳು ಎನ್ನುವ ನೆಲೆಯಲ್ಲಿ ಕಾವ್ಯ ಗಂಭೀರವಾಗಿ ಚಿಂತಿಸಲು ಪ್ರಯತ್ನಿಸಿತು. ಬದುಕಿನೊಂದಿಗಿನ ಒಡನಾಟ ಮತ್ತು ಹೋರಾಟಗಳನ್ನು ಈ ಕಾವ್ಯ ಶೋಧಿಸಲು ಯತ್ನಿಸಿತು. ದೇಶ ಕುರಿತ ಅಭಿಮಾನವನ್ನು ಇಂತಹ ಹಲವು ರೂಪಗಳು ಗೋಚರಿಸುತ್ತವೆ.

'ಇರುತ್ತವೆ'ಯ ಬೆಳ್ಳಿಕೋಲು ಕವಿತೆಯ ಈ ಸಾಲುಗಳು

"ಬಿಸಿಲ ಕೋಲ ಬೆಳ್ಳಿ ಮಾಡಿ

ಓಡೋ ಕನಸು

ಬೆಳ್ಳಿ ಕೋಲ

ಬೆಳ್ಳಿ ಬರೆ"[೧]

ಸೌಂದರ್ಯ ಆರಾಧನೆ, ಕನಸಿನ ರಮ್ಯತೆಯಂತಹ ಅಂಶ ಹೇಗೆ ವಾಸ್ತವದೊಂದಿಗೆ ಸೆಣಸುವ ದಾಟಿ ತಿಳಿಸುತ್ತದೆ. 'ಓಯಸಿಸ್'ನಂತ ಭಾವತೀವ್ರತೆಯ ಬದುಕ ಬದುಕಬೇಕು ಎಂಬಂತಹ ಕವಿತೆ.

"ಪ್ರೀತಿ ಪ್ರೇತವಾಗಿ

ನೇಹ ಸಿಡಿದು

ದೋಣಿ ಬಿರಿಯುತ್ತದೆ"[೨]

'ಕಾಗುಣಿತ' ಈ ಕವಿತೆಯು ಆದರ್ಶಯುತವಾದ ಬದುಕ ಸಾಗಿಸಬೇಕು. ಅಕ್ಷರದಂತೆ ಬಾಳು ಒಂದನೊಂದು ಕ್ರಮವಾಗಿ ಬೆಸೆದುಕೊಂಡು ಅಂದರೆ ತಪ್ಪಿಲ್ಲದೆ ಹೋದರೆ ಬಾಳು ಸುಂದರ ಸಹ್ಯ ಎಂದು ಬಿಂಬಿಸುವ. 'ಮಹೋದರೇ' ಪ್ರಕೃತಿ ಚಿತ್ರಣ ನಿಡುವ ಭೂಮಿಯ ನಿನ್ನ ಸೆರಗ ವಿಸ್ತಾರಕ್ಕೆ ಬೆಚ್ಚಿ ಬಿದ್ದೆನೆಂಬ ಇಂತಹ ಭೂಮತೆ ರೂಪಗಳು. 'ದಿನಗಳು' ಕವಿತೆಯ ಸೌಂದರ್ಯಭಾವ ಚೆಲವು ಪ್ರೇಮ ನವೋದಯದ ದಾಟಿ

೧. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.
೨. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.

ಬಿಂಬಿಸುತ್ತದೆ. 'ಖಾಳಿಸಂಜೆಗಳು ನೀರವ ರಾತ್ರಿಗಳು' ಮನುಷ್ಯ ಭಾವ ಮಾನಸಿಕ ಸ್ಥಿತ್ಯಂತರ, ಪ್ರೀತಿ ಸೆಲೆ ಆಧಾರವೆಂಬುದನ್ನು ವಾಸ್ತವ ದಿನಚರಿಯೊಂದಿಗೆ ಮನುಷ್ಯ ಗತಿಯನ್ನು ತಿಳಿಸುತ್ತದೆ.

"ಇದ್ದಕ್ಕಿದ್ದಂತೆ
ಸಂಜೆ ಖಾಲಯಾದರೆ
ಮನಸ್ಸಿನ ಭಣಭಣಕ್ಕೆ
ಏನು ಹೇಳುತ್ತೀರಿ?[೧]

ಕರ್ಫ್ಯೂ ಕವಿತೆ ಸಮಾಜಿಕ ಕಳಕಳಿಯನ್ನು ಬಿಂಬಿಸುತ್ತದೆ, ಆದರ್ಶಮಾನವತೆಯನ್ನು

"ತಲೆಹಾಕಿ, ಭುಗಿಲೆನ್ನುವ ಬೆಂಕಿಗೆ
ಚೆಲ್ಲೆನ್ನುವ ರಕ್ತಕ್ಕೆ ಆಹ್ವಾನ ನೀಡಿದರೆ
ಜೀವ ಇಟ್ಟಾಡಿದರೆ
ನಿವು ದೇವರೆ? ನಾವು ಭಕ್ತರೆ"[೨]

ಎನ್ನುವ ಪ್ರಶ್ನೆಯ ಮೂಲಕ ಮತೀಯ ಕೋಮು ಗಲಭೆಗೆ ಧರ್ಮ ದೇವರು ಕಾರಣವಾಗಬಾರದು ಭಿನ್ನತೆಗೆ ಭಕ್ತಿ ತೊಡಕಾಗದಿರಲಿ ಅನ್ನುವುದನ್ನು ಕವಿತೆ ಸೊಗಸಿನೊಂದಿಗೆ ಸಾಮಾಜಿಕ ವಿಷಮತೆಯ ಒಂದಂಶವನ್ನು ನೀಡುತ್ತದೆ.

'ವಿರಹಷಟ್ಕಂಡ' ಇಂತಹ ಹಲವಾರು, ನವೋದಯದ ಕವಿತ ರೂಪವನ್ನು ವಿಜಯಾದಬ್ಬೆಯವರ ಕಾವ್ಯಗಳಲ್ಲಿ ಕನಿಷ್ಠಮಟ್ಟಿಗೆ, ಇಡೀಯಾಗಿ ನೋಡಿದಾಗ ಬಿಂಬಿಸುತ್ತವೆ.

ಮುಂದುವರಿದಂತೆ ವಿಜಯಾದಬ್ಬೆ ಅವರ ಕಾವ್ಯದಲ್ಲಿ ನವ್ಯದ, ಮನಸ್ಸಿಗೆ ಚುರುಕು ಮುಟ್ಟಿಸುವ ವಾಸ್ತವತೆಯನ್ನು ನೇರದೃಷ್ಟಿಯಿಂದ ನೋಡುವ ದಾರ್ಷ್ಟ್ಯ, ಅನುಭವವನ್ನು ಕೆದಕಿ, ಕೆದಕಿನೋಡುವ ವಿಪರೀತ ಕುತೂಹಲ, ವೈಯಕ್ತಿಕ ಮೌಲ್ಯಗಳ ಅವಿರತ ಶೋಧನೆ, ವಿಷಾದ ಮತ್ತು ಭ್ರಮನಿರಸನ, ವ್ಯಕ್ತಿನಿಷ್ಠತೆ ಅಥವಾ ವೈಯಕ್ತಿಕತೆಯಂತಹ ಭಾವಗಳನ್ನು 'ಕನ್ನಡಿಯಲ್ಲಿ' ಕವಿತೆಯ 'ವಂಚನೆಯ ಅಂಚಿಗೆ ಸೆಂಟು ಸಿಂಥಾಲು' ಎಂದು ಸಾಗುವ ಪುಟ್ಟ ಕವಿತೆ, ಒಳಗಿನ ಸತ್ಯ ಅರಿಯದ,

---

೧. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.
೨. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.

ಕನ್ನಡಿಯ ಸುಂದರ ರೂಪ ವಾಸ್ತವವಾದರು. ಮಾನಸಿಕ ಒಳತೋಟಿಯ ಅರತರು ಜಗತ್ತಿನೆದುರಿಗೆ ಮೋಸ ಮಾಡಿಕೊಳ್ಳುವ ಪರಿ ಮನಶೋಧದ ಛಾಯೆಯಾಗಿದೆ. 'ಕಿಟಕಿಗಳಲ್ಲಿ'

"ಗೋಡೆಯಗಲದ ಕಿಟಕಿ ಬದಿಯಲ್ಲೀಗ ಕುಳಿತು

ಕಣ್ಣು ಕಾರಿದ ನೀರು ಕೆಂಡದೊಡನೆ"[೧]

ಸತ್ತಿದ್ದು, ಅರಿತೋಯುವ ಸತ್ಯಗಳು, ಕವಿತೆಯಲ್ಲಿ ತನ್ನ ಅಸ್ತಿತ್ವದ ನೆಲೆ ಕಂಡುಕೊಳ್ಳಲು ಮಾಡುವ ಯತ್ನ (ಮಾಢುವ ಯತ್ನ) ನೋವು ಏಕಾಕಿತನ, ಹತಾಶೆ ಇವೆ

"ಬೇಸರವಿಲ್ಲದೆ ಸುತ್ತುವ ಸೂರ್ಯನೂ

ಹೆಜ್ಜೆ ಗುರುತ ಹಂಬಲ ತಗ್ಗಿಸಲಿಲ್ಲ

ಆದರೆ

ಗುರುತ ಮೂಡಿಸಿದ ಹೆಜ್ಜೆಯ ಹುಳುಕೆಷ್ಟು?

ಹುಳುಕಿಗೆ ಬಳಿದ ಬಣ್ಣವೆಷ್ಟು?

ಹುಳುಕಿನ ಹೆಜ್ಜೆಯ

ಪರಾಕಿಸಿಕೊಳ್ಳುವ ಆಸೆಗಳೆಷ್ಟೆಂದು

ಯೋಚಿಸುತ್ತಿದ್ದೇನೆ"[೨]

ಸನಿಹದ ಬದುಕು, ಬೆಂಕಿಬೀಜ, ಏಕೆ, ಕವಿತೆಯು ಸಾವು, ರೋಗದ ವಾಸ್ತವದ ಶೋಧವಾಗಿದೆ.

"ಮುಂದನು ನೋಡಲು

ಅಂಜುವ ಮನಸೇ

ಒರಟಿದು ವಾಸ್ತವ ನೀನಂಬು

ಬರಡಿದು ವಾಸ್ತವ ನೀನೊಪ್ಪು"

ಆರಿದಾಗ, ಗೆರೆಗಳು, ಬಿಕ್ಕಿನ ಸುಕ್ಕು, ಭಾವಶೋಧಕ್ಕೊಳ್ಳಪಡಿಸುತ್ತದೆ. 'ನನಸಲ್ಲಿ ಕನಸು ಬಿಕ್ಕುತ್ತಲೆ ಇದೆ ಈ ಶಾಪಗ್ರಸ್ತ ಬದುಕಿನಲ್ಲಿ' ಎಂಬುದು ವಿಷಾದ ಮತ್ತು ಭ್ರಮನಿರಸನದ

೧. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.
೨. 'ಇತಿಗೀತಿಕೆ', ವಿಜಯಾದಬ್ಬೆ, ರಚನಾಪ್ರಕಾಶನ, ಮೈಸೂರು, ೧೯೯೬.

ವ್ಯಕ್ತಿನಿಷ್ಠತೆಯನ್ನು ಬಿಂಬಿಸುತ್ತದೆ. 'ಅವನಿಲ್ಲದ ಮೇಲೆ' – ಹೀಗೆ ಹತ್ತು ಹಲವು ಸಾವು, ಏಕಾಕಿತನ, ಅಸ್ತಿತ್ವದ ಹುಡುಕಾಟದಂತಹ ಅಂಶಗಳನ್ನು ಲೇಖಕಿಯ ಕವಿತೆಯ ವಸ್ತುವಿಶೇಷವು ಭಾಷ ಸಂದಿಗ್ಧತೆಯಲ್ಲಿ ಬರುತ್ತವೆ.

ಆದರೂ ವಿಜಯಾದಬ್ಬೆಯ ವೈಚಾರಿಕ ದೃಷ್ಟಿಕೋನವನ್ನು ಅವರ ಸ್ತ್ರೀಪರ, ಸ್ತ್ರೀವಾದಿ ಬಂಡಾಯದ ನೆಲೆಯಲ್ಲಿ ಹಾಗೂ ಪೌರಾಣಿಕ–ಪರಂಪರೆಯ ಪಾತ್ರಗಳನ್ನು ಅಭಿನ್ನವಾಗಿ ತೆಗೆದುಕೊಂಡರು, ವಿಚಾರದ ಹೊಳವನ್ನು ಭಿನ್ನವಾಗಿ ಸಾದರಪಡಿಸುತ್ತಾರೆ. ಇದು ಇವರ ವಿಶಿಷ್ಟ ವಸ್ತು ಸ್ವರೂಪದ ನೆಲೆಯಾಗಿದೆ ಹಾಗೂ ಅತ್ಯಂತ ಸರಳ ಭಾಷೆ ಬಳಸುತ್ತ ಹನಿಗವಿತೆ ಎಂದು ಹೆಸರಿಟ್ಟರು. ವಿಚಾರ, ವಸ್ತು ಹೊಳಹಿಸುವ ಧಾಟಿ ಇವರ ಕವಿತಾ ಶಕ್ತಿಯ ಅನನ್ಯತೆಗೆ ಒಂದು ಮೆರಗು.

ವಿಜಯಾದಬ್ಬೆಯು ಪೌರಾಣಿಕ ವಸ್ತು ವ್ಯಕ್ತಿಯನ್ನು ಹೇಗೆ ವಿಚಾರ ಚಿಂತನಶೀಲ ಪ್ರವೃತ್ತಿಯಿಂದ, ಭಿನ್ನವಾಗಿ ಭಾವ ತಳೆಯುತ್ತವೆ ಎಂಬುದು ಅವರ 'ಅಭಿಮನ್ಯು : ಒಂದು ಹಿನ್ನೋಟ', 'ಕುಂತಿಯ ಬೆಳಗು', 'ಸಂಜೀವಿನಿ'ಯಂತ ಕವಿತೆಗಳು, ಅಂದಿನ ಶೋಚನೀಯ ಅಸಹಾಯಕತೆಯ ಸೀತೆಯ ಸ್ಥಿತಿ ಇಂದು ವಾಸ್ತವದ ದಿನಚರಿಯಾಗಿದೆ ಎಂಬಂತೆ.

"ಪರೀಕ್ಷೆ ಬೆಂಕಿಯಿಂದೆದ್ದು ಬಂದ ಸೀತೆಗೆ

ತಾಯ ಮಡಿಲಿನ ಜೋಗುಳ"ದಂತಹ ರೂಪಕಗಳು. ವಜ್ರಯಾನದ ಕಡೆಗೆ, ಕುರುಕ್ಷೇತ್ರದಂಚಿನಲ್ಲಿ ಕವಿತೆಗಳು ಅಂದಿನ ಪೌರಾಣಿಕ ಬಿಕ್ಕಟ್ಟನ್ನು ಇಂದು ಆಧರಿಸಿ ಸಾಗಿರುವ ಸ್ಥಿತಿ. ತುಂಬ ಸೊಗಸಾಗಿ ವಿಡಂಬನೆಯೊಂದಿಗೆ ನಾವು ಅನುಭವಿಸುತ್ತಿರುವ ಅಂದರೆ ಸ್ತ್ರೀ ಸಮಾಜದ ಕೊಂಕನ್ನು ವಿಜಯಾರವರು 'ತಿರುಗಿ ನಿಂತ ಪ್ರಶ್ನೆ' ಕವಿತೆ ಅಂದಿನ ಸ್ಥಿತಿಗೆ ಇಂದು ಪ್ರಶ್ನೆಯಾಗೆ ಉಳಿದಿರುವ ಅಧಿಕಾರ ಹೀನ ಪರಿಸ್ಥಿತಿಯನ್ನು

"ಅಪ್ಪಜನಕ ಕಲಿಸಿದ್ದ ಅಕ್ಷರವಿತ್ತು
ಸಾಕವ್ವೆಯರು ಹೇಳಿಕೊಟ್ಟ ಹಾಡ ಮಟ್ಟಿತ್ತು
ಸುತ್ತ ಮುತ್ತ ತಾಡಪತ್ರ ಚೆಲ್ಲಿತ್ತು
ಯಾಕೆ ಸುಮ್ಮನೆ ಕುಳಿತೆ ಸೀತೆ ನೀನು?"

ತಿರುಗಿನಿಲ್ಲುತ್ತವೆ. ಅವೇ ಅಂದಿನ ಸಂಪ್ರದಾಯ ಮೌನಗಳು ಇಂದಿಗೂ ಬೇರಾಗ ಬೇಕಿದೆ ಅನ್ನುವುದು ಕವಿತೆಯ ಆಶಯ. ಮತ್ತೆ 'ಶಂಬುಕ' ಕವತೆ ವಸ್ತು ಭಿನ್ನ ಆಶಯದ ಮೂಲಕ ಸಿದ್ಧಮಾದರಿಯಿಂದ ಬಂಡಾಯದ ನೆಲೆಗೆ ಸಾಗುತ್ತಿದ್ದರು.

ಒಂದು ರೀತಿಯ ದ್ವಂದ್ವಕ್ಕೆ ಶಂಬುಕ ಸ್ಥಿತಿಯನ್ನು ಕಾವ್ಯ 'ನಿನ್ನ ತಲೆ ನಿನ್ನ ನೆತ್ತರನ್ನೇ ನೆಕ್ಕಿ ನೆಲಕ್ಕೊರಗಿ ಕೊಂಡರೆ?' ಪ್ರಶ್ನೆಯೊಂದಿಗೆ ನೇರವಾಗಿ ಸಿಡಿದೇಳುವುದಿಲ್ಲ. ಪರಂಪರೆ, ಕವಿತೆಯು ಸಹ "ನಿನ್ನ ಮಡಿಲಲ್ಲಿ ಮಲಗಿ ಮತ್ತೆ ಕೇಳುತ್ತೇನೆ ಈ ಎಲ್ಲ ಶಿಕ್ಷೆ ಯಾಕಾಗಿ?" ಎಂದು ಪರಂಪರೆಯ ಅಸಹಾಯಕತೆಗೆ ಮೂಕಸಾಕ್ಷಿಗೆ ಅರಿವಿನ, ಧೈರ್ಯದ ಲೇಪವನ್ನು ಹೊದಿಸುತ್ತದೆ. 'ಹೇಗಾದರೂ ಕರೆಯಿರಿ' ಇದು ಸಹ ಮಾದರಿ ವಸ್ತುವಿಚಾರದಲ್ಲಿ ಒಂದೇಯಾಗಿದೆ.

ವಿಜಯಾದಬ್ಬೆ ಅವರ ಕವಿತೆಯ ಹೆಚ್ಚಂಶ ಹಾಗೂ ಮೇಲ್ನೋಟಕ್ಕೆ ಗ್ರಹಿಕೆಗೆ ಸಿಗುವ ರೂಪಗಳೆಂದರೆ ಸ್ತ್ರೀವಾದಿ ಬಂಡಾಯನೆಲೆ, ಸ್ತ್ರೀಶೋಷಣೆಯ ವಿವಿಧ ರೂಪಗಳ ಅನಾವರಣದೊಂದಿಗೆ ಅದನ್ನು ವಿರೋಧದ ಮೂಲಕ ತಿರಸ್ಕರಿಸುವ ಕವಿತೆಯ ಹೊಳವುಗಳು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಕಾಣಸಿಗುತ್ತದೆ. ಇದು ಸ್ತ್ರೀವಾದಿ ಸಾಹಿತ್ಯದ ಕಾಲಘಟ್ಟದ ಪ್ರಮುಖ ಧೋರಣೆ ಆಗಿರುವುದು ಕಾರಣ. ನವಿರಾದ ಭಾಷೆಯ ಮೂಲಕ ಆಕ್ರೋಶದ, ಸಿಡಿದೇಳುವ ಛಾಪು ಅನನ್ಯ.

"ಅಪ್ಪಿ ಮುತ್ತಿಟ್ಟು ನಕ್ಕು
ಜರತಾರಿಯ ಭಾರ
ಮಲ್ಲಿಗೆಯ ಘಮ ಘಮದ ನಡುವೆ
ಜೀಕಾಡಿ
ಛಿಲಕ್, ಛಿಲಕ್ ಎಂದು
ಅಳತೆ ಮೀರಿದ ಸೊಂಟಕ್ಕೆ
ಬೀಗದ ಕೈ ಸಿಕ್ಕಿಸಿ
ಸ್ಪೆಷಲ್ ವಾರ್ಡಿನಲ್ಲೊಂದು ದಿನ
ವಿಜೃಂಭಣೆಯಿಂದ
ನೆಗೆದು ಬೀಳು"

ಇಲ್ಲಿನ ವರ್ಣನಾ ವಿಧಾನ ಹಾಗೂ ಅದರ ಅಂತರ್ಯದಲ್ಲೇ ಹರಿಯುತ್ತಾ 'ನೆಗೆದುಬೀಳು' ಎನ್ನುವಲ್ಲಿ ಸಿಡಿಯುವ ಅಸಹನೆ ಹಾಗೂ ವ್ಯಂಗ್ಯವು ಸರಳ ಸಾಂಪ್ರದಾಯಕ ಹಾದಿಯು ತನಗೆ ವಾಕರಿಕೆ ಬರಿಸುವಂಥದ್ದು ಎಂದು ಸೂಚಿಸುತ್ತಾ, ಹಾರೈಕೆಯ ಇನ್ನೊಂದು ಮೈಯನ್ನು ಪ್ರದರ್ಶಿಸುತ್ತದೆ. ಇದೇ ಬಗೆಯಲ್ಲಿ

'ಮಜಬೂತಾದ ಬೆಳ್ಳಿ ಕಟ್ಟನ್ನು ಹಾಕಿದ ಅಮ್ಮನ ಪಟ'ದ ಮೂಲಕ ಸೂಚಿಸುವ ಅಸ್ಪೃಶ್ಯತೆಯ, ನೋವಿನಲ್ಲಿ ದುಡಿತದಲ್ಲಿ ನವೆಯುವ ಆರು ಮಕ್ಕಳ ತಾಯಿಗೆ ಕವನ ಸಂಕಲನವನ್ನು ಅರ್ಪಿಸುವ ಸೋಸಿಯಲಿಸ್ಟ್ ಕಾರ್ಯದರ್ಶಿಯೂ ಆದ ಆಕೆಯ ಪತಿಯನ್ನು ಕುರತ ಕಟು ವ್ಯಂಗ್ಯದಲ್ಲಿ 'ಪ್ರಗತಿ', ಧನ್ಯೆ ಬಿಂಬಿಸುತ್ತವೆ. 'ಪಾಪ, ನೀವು ಹೊಣೆಯಲ್ಲ', ಮನೆಯ ಒಡತಿಯ ಪಟ್ಟಕೊಟ್ಟು ಸಂಬಳವಿಲ್ಲದೆ, ವಿರಾಮವಿಲ್ಲದ ಅವಿರತ ಕೆಲಸದಾಕೆ, ಈಕೆ ಎಂಬುದನ್ನು "ತೊತ್ತಿಗೆ ಸಹಧರ್ಮಿತ್ವದ ಹಣೆಬರಹ ಮುದ್ದಾಗಿದೆ" ಕಂದರದ ಆಳಕ್ಕೆ ದೂಕುವ ಸೋಗುಗಳು ಸೊಗಸಾಗಿವೆ, ಎಂಬ ಕಟುವ್ಯಂಗ್ಯದ ಬಂಡಾಯದ ದನಿಬಿರುಸಾಗಿ ಅಡರುತ್ತದೆ.

'ನಾರೀಮಣಿಗಳಿಗೊಂದು ಕಿವಿ ಮಾತು', 'ನಿಮ್ಮ ವಸ್ತ್ರ ಅಕ್ಷಯವಾಗಿಸಿ ಅಗ್ನಿಪರೀಕ್ಷೆ ಮಾಡಿ ಮೀಸೆ ತಿರುವಿಕೊಳ್ಳುವ ಭೂಪರು' ಎಂದು ಪುರುಷಾಧಿಕಾರದ ಕ್ರೌರ್ಯವನ್ನು ಇನಿಯಾದ ಧಿಕ್ಕಾರ ದನಿಯಿಂದ ವಿವಸ್ತ್ರಗೊಳಿಸುವ ನಿರೂಪಣೆ. 'ಸಿದ್ದಶಿಲೆ'ಯ ಮಾದರಿ ಬದುಕಿಗೆ ಒಡ್ಡುವ ಪ್ರಶ್ನೇ, 'ಶೇಷಶಾಹಿಯ ಕಾಲಬುಡದಲ್ಲಿ ಕೂರಲಿಕಷ್ಟೇ ಹುಟ್ಟಿದವೆ?' ಸ್ತ್ರೀ ಅಸ್ತಿತ್ವವನ್ನು ಬಹಳ ಎಚ್ಚರದಿಂದ ಪ್ರಶ್ನಿಸಿ, ಪ್ರತಿಭಟನೆಯಂತ ಇಷ್ಟಕ್ಕೆಹುಟ್ಟೆ?ಯಂತ ಬಲಿಶ ಕವಿತೆಗಳು, ದಾರಿ ಯಾವುದಯ್ಯ, ಹೌದು ದಾರಿ ಯಾವುದು? ಮದುವೆ ಹೀಗೇಕೆ ಸುತ್ತಿಕೊಲ್ಲಬೇಕೋ ಎಂಬ ಸಂಸಾರಿಕ ನಗ್ನ ಸತ್ಯದ, ಸ್ತ್ರೀ ಸಂವೇದನೆಯೊಂದಿಗೆ, ಸ್ತ್ರೀಶೋಷಣೆಯ ಪರಿಯ ವ್ಯಂಗ್ಯವನ್ನು 'ಹಾಡುತ್ತಲೇ ಇರಬೇಕು ದಾರಿ ಯಾವುದೆಂದು ಆಮೇಲೆ ಹೇಗೋ ಕಾಣುತ್ತದೆ. ವೈಕುಂಠದ ದಾರಿ' ಅನ್ನುವುದರೊಂದಿಗೆ ಸ್ತ್ರೀ ಸ್ವಾತಂತ್ರ್ಯ ಎಂಬುದು ಕೇವಲ ಹೆಸರಿಗೆ ಅಂಟುವ ಒಂದು ಮಾದರಿಯನ್ನು ಹೆಣ್ಣಿಗೆ ವಾಸ್ತವ ಬದುಕಿನಲ್ಲಿ ಹೇಗೆ ವಂಚಿತಳಾಗುತ್ತಾಳೆ. ಸ್ವಂತ ಭಾವಗಳು ಆಸೆ, ಕನಸುಗಳಿಂದ ವ್ಯವಸ್ಥಿತವಾಗಿ ಅಡಿಯಾಳಾಗುವುದನ್ನು ಕವಿತೆ ಶೋಧಿಸುತ್ತದೆ. 'ಮಿರುಗುವ ಗೋರಿಗಳು' ಸ್ತ್ರೀ ನೆಲೆ-ಬೆಲೆ ವಾಸ್ತವದಲ್ಲಿ ಹೇಗೆ ಹುಟ್ಟುವ ಮೊದಲೆ ಅವಳ ಸ್ವಾತಂತ್ರ್ಯಕ್ಕೆ ಕಟ್ಟುವ ಗೋರಿ, ಮಾತೆ ಇಲ್ಲದ ಬದುಕೆ ಬದುಕಬೇಕಾದ ಸ್ಥಿತಿಯು. 'ಈ ಅರೆ ಮುದುಕಿಯ ಮುಂದೆ ಮಿರುಗುವ ಗೋರಿ ಕಣ್ಣು ಹೊಡೆಯುತ್ತಿದೆ'. 'ಭೂಮಿತಿರುಗುತ್ತಿದೆ' ಕವಿತೆಯ ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಕಾಲಂತರದಲ್ಲೂ ಯಾವ ಬದಲಾವಣೆ ಕಾಣದಕ್ಕೆ ವ್ಯಂಗ್ಯದ ಮೂಲಕ ಸ್ತ್ರೀಪರ ಚಿಂತನೆ, ಧೋರಣೆ ಎರಡನ್ನು ಏಕಕಾಲಕ್ಕೆ ಕವಿತೆಯಲ್ಲಿ ಬಿಂಬಿಸುತ್ತಾರೆ.

"ಈ ಮಧ್ಯೆ
ಕುಡಿತದ ಮಲಿನ ಹೊಡೆತ ತಿಂದ

ರಾಶಿರಾಶಿ ಮಕ್ಕಳ ಹೆತ್ತ
ಆ
ಅಸ್ಥಿಪಂಜರದ, ಸತ್ತ ಮೋರೆಯವಳ
ಹಸಿ ನೆನಪು
ಇಲ್ಲ ಇಲ್ಲ
ಈಗವಳು
ದೊಡ್ಡ ಸಾಹೇಬರ
ಹೊರಗೆಬಾರದ ಅವ್ವ"

ಇಲ್ಲಿ ವ್ಯವಸ್ಥೆಯ ಸ್ತ್ರೀ ಪರಿಸ್ಥಿತಿಯ ಶೋಚನೀಯತೆಯ ಅನಾವರಣ. ಅಂತದ್ದೆ 'ರಾಣಿ ತಿಮ್ಮಿಯ ಸಿಂಹಾಸನ' ಕವಿತೆ ಸಾಮಾಜಿಕ ವಿಡಂಬನೆ. ಸ್ತ್ರೀ ಸ್ವಾತಂತ್ರ್ಯದ ವಸ್ತುಸ್ಥಿತಿಯನ್ನು ಸುಡುಕ್ರೌರ್ಯವನ್ನು ಲೇಖಕಿ ನಾಟಕರೂಪಕದೊಂದಿಗೆ ವಾಚ್ಯವಾಗಿ ಇಡೀ ಸಾಮಾಜಿಕ ನೆಲೆಯಲ್ಲಿ ಸ್ತ್ರೀ ಶೋಷಣೆಯ ಬಿಂಬದಂತೆ ಕವಿತೆಯಾಗಿಸಿರುವುದು ಚಿಂತನ ಮಂಥನದ ಸೊಗಸು.

ಲೇಖಕಿಯ ಕವಿತೆಗಳು ಮತ್ತೊಂದು ಹೆಜ್ಜೆ ಅಂದರೇ ಸರಳ ವಿನ್ಯಾಸದಲ್ಲಿ ವಿಚಾರ ಪರತೆಯ, ಸಾವು, ಚಿಂತನೆ, ಪ್ರೀತಿಯ ನೆಲೆ-ಬೆಲೆ ಮುಂತಾದ ಬದುಕಿನ ಗಹನ ವಿಚಾರಗಳನ್ನು ಹನಿಗವಿತೆ ಎಂಬ ಕವಿತೆಗಳಲ್ಲೂ ಅಡಗಿಸುವ ಬುದ್ದಿಗಮ್ಯ ನೆಲೆ ವಿಜಯಾದಬ್ಬೆ ಅವರ ಒಂದು ವಿಶಿಷ್ಟತೆ. ಇದು 'ನೀರು ಲೋಹದ ಚಿಂತೆ' ಬದುಕು ಅಂತಿಮ ಹಾಗೆ ಕಡುಸತ್ಯವಾದ ಸಾವಿನ ನಿಷ್ಠುರತೆಯನ್ನು

"ಮುಂದೂಡುವುದು ಕಷ್ಟ
ಆದರೆ ದೂಡಬಹುದು;
ಬೆಳಗಿನ ಕಾಫಿಯನ್ನು
ಮಗಳ ಮದುವೆಯನ್ನು
ಸಾಲ ತೀರಿಸುವುದನ್ನು
ಆದರೆ....... ಸಾವನ್ನು?
ಕರಗುವ ಚಿಂತೆ ಲೋಹಕ್ಕೆ
ಆವಿಯ ಚಿಂತೆ ನೀರಿಗೆ"

ಬದುಕಿನ ಜೀವಗೌಣದ ನಿಶ್ಚಿತತೆಯನ್ನು ಅತ್ಯಂತ ಸೌಮ್ಯ ಸಂಭಾಷಣೆಯೊಂದಿಗೆ ಸಾವನ್ನು ಮುಂದೂಡಲಾಗದು, ಆದರೆ ದೂಡಬಹುದು. ಜೀವನದ ಸಾಮಾನ್ಯ ಸಂಗತಿಗಳನ್ನು ಸಾವು ಒಂದು ದಿವ್ಯಾನುಭವ ಬಾಳಿನ ಅಂತಿಮ ಚರಣ, ಸಾವು ಸಹಜ, ಲೋಹ ಕರಗಲೇಬೇಕು, ನೀರು ಆವಿಯಾಗಲೇಬೇಕು ಎಂಬ ಸತ್ಯವನ್ನು. ಕಪೋಲಮಣ್ಯದಂತ ಕವಿತೆ 'ಬಿಡಿ, ಉರಿವ್ಯರ್ಥವಾಗಲಿಲ್ಲ ಕಣ್ಣಬಟ್ಟಲ ನೀರ ಕುದಿಸಿದೆಯಲ್ಲ' ಎಂದು ಹೆಣ್ಣಿನ ಶೋಚಕ ಪರಿಸ್ಥಿತಿಯಂತಹ ಗಂಭೀರ ಜೀವನ ರೀತಿಯನ್ನು. ಮತ್ತೆ ಸ್ಥಿತ್ಯಂತರ ನಿಸಿದಿನಾಡಿನ ಹಾಡು, ನೀಡುವ ಸಲ್ಲೇಖನ; ನಿತ್ಯನೇಮ ಇಷ್ಟೇ ವ್ಯತ್ಯಾಸ ಆಯ್ಕೆ ನಮ್ಮದಲ್ಲ; ಯಾವ ಯಶೋದೆ, 'ಕೊಂಕು' ಕವಿತೆಯು ಸಹಜ ಪ್ರೀತಿ, ಸ್ನೇಹಗಳಂತ ಭಾವಗಳು ನಂಬಿಕೆಯ ರೂಪಗಳು ಇದು 'ತುಟಿಯೊಂದು ಕೊಂಕು ಎಷ್ಟು ಹರಿತ!' ಎಂಬ ವಿಚಾರವನ್ನು ಅತ್ಯಂತ ಸೂಚ್ಯವಾಗಿ ಲೇಖಕಿಯು ಕವಿತೆಗಳಲ್ಲಿ ನೈದಹಂದರ ಸೊಗಸು, 'ಅದರರ್ಥ' ನೀಡುವ ಹೊಳವು ಗಹನ ಅಸಹಾಯಕ ಪರಿಸ್ಥಿತಿ ಒದಗಿಸುವ ಅವಕಾಶಗಳು ವಿಜಯದ ರೂಪಗಳ ಎಂದು ಅದೇ ಗೆಲುವಾಗಲಾರದೆಂದು. ಹೆಣ್ಣಸ್ಥಿತಿಯ ಸೂಕ್ಷ್ಮಸ್ತರವನ್ನು 'ಅನ್ನಪೂರ್ಣೆ' ದೊಡ್ಡವ್ವ ಕವಿತೆಗಳಲ್ಲಿ ನೆಲೆಗೊಂಡಿವೆ.

"ಸಂಯಮವೆ ಉರುಳಿಸಿತೆ ಸುಖದ ಬಟ್ಟಲ?
ತಾಳುವಿಕೆಯೆ ಕೊಂದಿತೆ ಕನಸುಗಳ?
ಮೌನವೆ ಮುರಿಯಿತೆ ಜೀವ ಸೇತುವ
ಪ್ರಶ್ನೆಗಳ ಪ್ರತಿಧ್ವನಿಯ ಒಂಟಿ ಅಲೆತ"

ಬದುಕಿನ ಹಲವು ಮಗ್ಗಲುಗಳನ್ನು ಸರಳ ರೂಪದಲ್ಲಿ ತೆರೆದಿಡುತ್ತದೆ.

ಹೀಗೆ ವಿಜಯಾದಬ್ಬೆಯ ಒಟ್ಟು ಕವಿತೆಗಳ ವಸ್ತು ಒಳಗೊಂಡಿರುವುದನ್ನು ಅವಲೋಕಿಸಿದಾಗ ಭಾವತೀವ್ರತೆಯ ನವೋದಯದ ಹೊಳವು, ನವ್ಯದವ್ಯಕ್ತಿ ನಿಷ್ಠತೆಯ ನಿಲುವು, ಪೌರಾಣಿಕ ಪರಂಪರೆಯ ಪ್ರತೀಕಗಳ ಅಭಿನ್ನತೆಯಲ್ಲಿ ವಿಚಾರ ಭಿನ್ನತೆಯ ಸೆಳೆವು, ಸರಳತೆಯೊಂದಿಗಿನ ವಿಚಾರಪರತೆಯ ಬುದ್ಧಿಗಾಮ್ಯದ ಚಮತ್ಕಾರ, ಒಟ್ಟಾಗಿ ಸ್ತ್ರೀಸಂವೇದನೆಯನ್ನು ಒಳಗೊಂಡ ಸ್ತ್ರೀವಾದಿ-ಬಂಡಾಯದ ನೆಲೆ, ಸಾಮಾಜಿಕತೆಯ, ಅನನ್ಯವಾದ ಪ್ರೀತಿ, ವಾಸ್ತವದ ಅರಿವಿರುವ ಹಿಂಸೆಯಿಲ್ಲದ ಪ್ರೀತಿ ಎಲ್ಲಿದ್ದರೂ ಸರಿ. ಅದ ಹುಡುಕಬೇಕು, ಸಿಗಲಿ, ಸಿಗದಿರಲಿ ಶುಭವೆನ್ನಿ ಶುಭವೆನ್ನಿ ಎನ್ನುವ ಗುಣಾತ್ಮಕ ದೃಷ್ಟಿಕೋನ. ಕಲೆ ಮತ್ತು ಸೌಂದರ್ಯವನ್ನು ವಾಸ್ತವ ಅರಿವಿನಿಂದ ಉಂಟಾಗಿಸಿರುವ ಅಸ್ಮಿತೆಯ ಧ್ವನಿಯನ್ನು ವಿಜಯಾದಬ್ಬೆ ಕಾವ್ಯ, ಆಧುನಿಕ ಕಾವ್ಯದ ಭೂಮಿಕೆಯಲ್ಲಿ

ವಿಶಿಷ್ಟವಾಗಿ ನೆಲೆ ಕಂಡಿದೆ. ಆದರೆ ಆಧ್ಯಾತ್ಮದ ಒಂದು ವಿಚಾರದಲ್ಲಿ ಕವಿತೆಗಳ ಒಳಗೆ ನೆಲೆಯನ್ನು ಹೊಂದದಿರುವುದು ಒಂದು ವಿಶಿಷ್ಟ, ಗಮನಿಸಬೇಕಾದ ವಿಚಾರ.

ಒಟ್ಟಾರೆ ಇಂತಹ ಕಾವ್ಯ ಕನ್ನಿಕೆಯನ್ನು ನೀಡಿದ ಹೆಮ್ಮೆ ವಿಜಯಾದಬ್ಬೆಯ ಸೃಜನಶೀಲ ಶ್ರಮದ ಸೊಗಡು ಕವನ ಸಂಕಲನಗಳು.

ಆ) ವಿಚಾರಾತ್ಮಕ – ವಿಮರ್ಶಾತ್ಮಕ ಲೇಖಕಿ:

ಸಾಹಿತ್ಯದ ಸೃಜನೇತರ ಪ್ರಕಾರಗಳಾದ ವಿಮರ್ಶಾ ಸಾಹಿತ್ಯವು ಆಧುನಿಕ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕ್ರಿಯೆ, ಅದರಲ್ಲೂ ಮಹಿಳಾ ವಿಮರ್ಶಾ ಲೇಖಕಿಯರು ಸ್ತ್ರೀವಾದಿ ಸಾಹಿತ್ಯ ಧೋರಣೆಯಲ್ಲಿ ತೊಡಗಿಸಿಕೊಂಡದ್ದು, ಅವರ ವಿಚಾರ ಸೈದ್ಧಾಂತಿಕತೆಯ ಮಂಥನವಾಗಿದೆ. ಇಂತಹ ಒಂದು ಬೌದ್ಧಿಕ ಶ್ರಮದ ನೆಲೆಯಲ್ಲಿ ಸ್ತ್ರೀವಾದಿ ಚಿಂತಕಿಯಾಗಿ ವಿಜಯಾರವರು ತಮ್ಮ ಬರಹಗಳಲ್ಲಿ ಮಹಿಳೆಯ ಬದುಕಿನ ಚಿಂತನೆಯನ್ನು ಮಾಡುತ್ತಾ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯಕ್ಕೆ ಮಹತ್ವದ ಸ್ಥಾನವನ್ನು ಒದಗಿಸಿದ್ದಾರೆ. ಅವರ ವೈವಿಧ್ಯಪೂರ್ಣ ಬರಹಗಳ ಹಿಂದೆ ಸ್ತ್ರೀಪರ ಕಾಳಜಿಯೇ ಪ್ರಧಾನವಾಗಿದೆ. ವಿಜಯಾ ಅವರು ತಮ್ಮ ಬರಹಗಳಲ್ಲಿ ಕಳೆದುಹೋಗಿರುವ ಮಹಿಳಾ ದನಿಯನ್ನು, ಅದುಮಿಟ್ಟ ಹೆಂಗಸನ ಚೈತನ್ಯವನ್ನು, ಸಮಾಜದ ವ್ಯವಸ್ಥಿತ ಸಂಚಿನಲ್ಲಿ ಅಗೋಚರಳಾಗಯೆ ಉಳಿದ ಮಹಿಳೆಯನ್ನು ಚಾರಿತ್ರಿಕ, ಸಾಹಿತ್ಯಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಶೋಧಿಸಿ ವಿಮರ್ಶೆಗೆ ಒಳಪಡಿಸಿರುವ, ಸ್ತ್ರೀವಾದಿ ನೆಲೆಯನ್ನು ಕಾಣುವ ಮುನ್ನ ಸ್ತ್ರೀವಾದಿ ಚಿಂತನೆಯ ಅರಿವಿರುವುದು ಉಚಿತ.

ಸ್ತ್ರೀವಾದಿ ತಾತ್ವಿಕತೆಯ ಆನ್ವಯಿಕ ಬಳಕೆಯನ್ನು ಸಾಹಿತ್ಯ ಅಧ್ಯಯನಕ್ಕೆ ಕನ್ನಡದ ಸಂದರ್ಭದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಆದರೆ ಸ್ತ್ರೀವಾದಿ ಅಧ್ಯಯನವು ಈ ಹೊತ್ತು ಸಾಹಿತ್ಯಕ್ಕೆ ಮಾತ್ರ ಮಿತಗೊಳ್ಳದೆ ಅನ್ಯ ಅನುಭವ ಜ್ಞಾನವಲಯಗಳನ್ನು ವಿಸ್ತರಿಸಿದ ವ್ಯಾಪಕತೆಯುಳ್ಳದ್ದು. ಕರ್ನಾಟಕದಲ್ಲಿ ಮಹಿಳಾ ಅಧ್ಯಯನವು ನೆಲೆಗೊಳ್ಳುತ್ತಿರುವ ಸಂದರ್ಭದಲ್ಲಿ, ಮಹಿಳಾ ಅಧ್ಯಯನದ ತಾತ್ವಿಕತೆಯನ್ನು ಮಹಿಳಾ ಚಳುವಳಿಗಳ ಹಿನ್ನೆಲೆಯೊಂದಿಗೆ ಸ್ಪಷ್ಟಪಡಿಸುವ ಯತ್ನ ವ್ಯವಸ್ಥಿತವಾಗಿ ನಡೆಯತೊಡಗಿದೆ.

ಸ್ತ್ರೀವಾದಿ ದೃಷ್ಟಿಕೋನವನ್ನು ತಾತ್ವಿಕವಾಗ ವಿವರಿಸುತ್ತಲೇ ಕನ್ನಡ ಮಹಿಳಾ ಸಾಹಿತ್ಯವನ್ನು ಸ್ತ್ರೀವಾದಿ ತಾತ್ವಿಕತೆಯ ಚೌಕಟ್ಟಿನಲ್ಲಿ ಮೌಲ್ಯಮಾಪನ ಮಾಡುವ ಯತ್ನವನ್ನು ಹಲವಾರು ಗ್ರಂಥಗಳು ಮಾಡಿವೆ. ಅಂದರೆ ಸಾಹಿತ್ಯದ ಈಗಿನ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆ ಎನ್ನುವುದು ಕೇವಲ ಕೃತಿ ನಿಷ್ಠೆ ವಿಮರ್ಶೆ ಎಂಬ

ನೆಲೆಯನ್ನು ದಾಟಿ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ವಿಸ್ತರಿಸುತ್ತಿದೆ. ಹೀಗಾಗಿ ಸಾಹಿತ್ಯ ಅಧ್ಯಯನ ಚಟುವಟಿಕೆಗಳೆಲ್ಲವನ್ನು ವಿಮರ್ಶೆ ಎಂಬ ಹೆಸರಿನ ವ್ಯಾಪಕತೆಯಲ್ಲಿ ಪರಿಗಣಿಸಲಾಗುತ್ತಿದೆ. ಹೀಗಾಗಿ ಕಾವ್ಯಮೀಮಾಂಸೆ, ಸಂಶೋಧನೆ, ಸಂಗ್ರಹ ಸಂಪಾದನೆ, ಅಭಿನಂದನಾ ಹಾಗೂ ಸಂಸ್ಮರಣ ಗ್ರಂಥ ಸಂಪಾದನೆ, ಸಾಹಿತ್ಯವಿಮರ್ಶೆ, ಪ್ರಾತಿನಿಧಿಕ ಸಾಹಿತ್ಯ ರೂಪಗಳ ಸಂಪಾದನೆ ತಾತ್ವಿಕ ಚರ್ಚೆ ಶಿಬಿರ, ವಿಚಾರಸಂಕರಣ, ಪತ್ರಿಕಾ ಸಂಪಾದಕತ್ವ, ಪತ್ರಿಕಾ ಪರಾಮರ್ಶೆ ಮಹಿಳಾ ಚಳುವಳಿಯ ಸಕ್ರಮ ಸಹಭಾಗಿತ್ವ ಹೀಗೆ ಏಕಕಾಲಕ್ಕೆ ಹಲವಾರು ಸಾಹಿತ್ಯಕ ಸಾಮಾಜಿಕ ಚಟುವಟಿಕೆಗಲಲ್ಲಿ ಕನ್ನಡದ ಲೇಖಕಿಯರು ಸೃಜನಶೀಲ ಸಾಹಿತ್ಯ ರಚನೆಯೊಂದಿಗೆ ಪಾಲ್ಗೊಂಡಿದ್ದಾರೆ. ಸ್ವಾತಂತ್ರ್ಯೋತ್ತರ ಮಹಿಳಾವಿಮರ್ಶೆಯ ಪ್ರತಿಫಲವನ್ನು ನಾವು ಸೃಜನಶೀಲ ಮಹಿಳಾ ಸಾಹಿತ್ಯ ಸೃಷ್ಟಿಯಲ್ಲಿ ಕಾಣಬಹುದಾಗಿದೆ. ಹಾಗಾಗಿ ಇವೆರಡೂ ಚಟುವಟಿಕೆಗಳ ಹಿಂದಿನ ಪ್ರಭಾವ ಪ್ರೇರಣೆಗಳ ಮೂಲನೆಲೆ ಒಂದೇ ಎನ್ನಬಹುದಾಗಿದೆ. ಸ್ತ್ರೀವಾದಿ ವಿಮರ್ಶಾ ತಾತ್ವಿಕತೆಯ ವಿಮರ್ಶಾ ಚಟುವಟಿಕೆಯನ್ನು ನಿಯಂತ್ರಿಸಿದಷ್ಟೇ ಸೃಜನಶೀಲ ಬರವಣಿಗೆಯನ್ನು ಪ್ರಭಾವಗೊಳಿಸಿದೆ. ಪುರುಷ ಪ್ರಧಾನ ಸಂಸ್ಕೃತಿಯ ಸಿದ್ಧ ಮೌಲ್ಯಗಳಾಚೆ ನಿಂತು ಪ್ರಗತಿಪರ ದೃಷ್ಟಿಕೋನದಿಂದ ಬದುಕನ್ನು ಶೋಧಿಸುವ ಸೃಜನಶೀಲ ಕಾವ್ಯಕ್ಕೆ ಇಂಬಾಗಿ ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ ಮಹತ್ತರ ಕಾಣಿಕೆಯನ್ನಿತ್ತಿದೆ.

ವಿಜಯಾದಬ್ಬೆ ಸ್ತ್ರೀಯರ ಬಗ್ಗೆ ಯಾವುದೇ ಕಾರಣಕ್ಕೂ ಪೊಳ್ಳು ಬೇಜವಾಬ್ದರಿಯುತ ಹೇಳಿಕೆ ಕೊಡುವುದಿಲ್ಲ. ಆಡಂಬರ, ಬೂಟಾಟಿಕೆ, ಕಪಟ ಇವರ ಬಳಿ ಸುಳಿಯುವುದಿಲ್ಲ. ದೃಢತೆ, ಖಚಿತತೆ – ಅನನ್ಯತೆ ಪ್ರಬುದ್ಧತೆಗಳ ಸಂಗಮವಾಗಿ ಸ್ತ್ರೀವಾದಿ ಸಾಹಿತ್ಯದ ಆಳ ವಿಸ್ತಾರವನ್ನು ಗೌರವವನ್ನು ಹೆಚ್ಚಿಸಿದರೆಂದರೇ ಅಪವಾದವಿಲ್ಲ. ವಿಜಯಾ ಅವರ ಸ್ತ್ರೀವಾದಿ ವಿಮರ್ಶೆಯ ವಿಚಾರಧಾರೆಯನ್ನು ಸ್ಥೂಲವಾಗಿ ಈ ಕೆಳಕಂಡಂತೆ ಗುರುತಿಸಿಕೊಳ್ಳಬಹುದು.

- ಸ್ತ್ರೀವಾದಿ ಪ್ರಜ್ಞೆಯ ಅರಳುವಿಕೆ ಪುರುಷಕೇಂದ್ರಿತ ಗ್ರಹಿಕೆಯ ಮಿತಿ ಮತ್ತು ಅಪಾಯಗಳನ್ನು ತೆರೆದುತೋರುತ್ತದೆ. ಜೀವನ ಸ್ಥಿತಿ ಮತ್ತು ಜೀವನಕ್ಕೆ ವಿರುದ್ಧವಾಗಿ ಹರಿಯುವ ಮೌಲ್ಯ ಪ್ರವಾಹ ಇತಿಹಾಸದ ಘಟ್ಟದಲ್ಲಿ ಅವಕ್ಕೆ ಬೆಲೆ ತೆರಲೇಬೇಕು.
- ಪುರುಷ ಕೇಂದ್ರಿತ ಪ್ರಜ್ಞೆ. ಸ್ತ್ರೀಯರ ಸ್ವಭಾವ, ಶಕ್ತಿಮತ್ತು ಪಾತ್ರಗಳನ್ನು ನಿರ್ಣಯಿಸಿ. ಆ ನಿರ್ಣಯಕ್ಕೆ ಹೊಂದುವ ಅಥವಾ ನಿರ್ಣಯದ ಅಚ್ಚಿನಲ್ಲಿ

ಎರಕಹೊಯ್ದ ಮಾದರಿಗಲನ್ನು ಚಾಲ್ತಿಗೆ ಬಿಟ್ಟಿತು. ಆ ಮಾದರಿಗಳಾದರೂ ಯಾವುವು? ಗಮಡಸಿನ ಮಾನಸಿಕ ಭೌತಿಕ, ಜೈವಿಕ ಅಗತ್ಯಗಳಿಗೆ ಹೊಂದುವಂಥವು. ದಮಯಂತಿ, ಸಾವಿತ್ರಿ, ಸೀತೆಯಂಥ ಮಾದರಿಗಳು ಇಂಥ ಮಾದರಿಗಳ ಪಾತಿವ್ರತ್ಯ, ಸೌಂದರ್ಯ, ಶೃಂಗಾರ ಮಾತೃತ್ವಕ್ಕೆ ಒತ್ತು ಕೊಡಲಾಯಿತು. ಒಟ್ಟಾರೆ ವಿಧೇಯವಾದ – ಪುರುಷನ ಒಲುಮೆ ಹಿರಿಮೆಯನ್ನು ಒಪ್ಪಿಕೊಳ್ಳುವಂಥ ಪಾತ್ರಗಳನ್ನು ಮಾದರಿಗಳು ಎನ್ನಲಾಯಿತು.

- ಪುರುಷ ಕೇಂದ್ರಿತ ಆಲೋಚನೆಯ ಕ್ರಮಚಾಲ್ತಿಗೆ ಬಿಡುವ ಮೌಲ್ಯಮಹಿಳೆಯರನ್ನು ಯಾವ ರೀತಿಯಲ್ಲಿ ಒಡೆಯುತ್ತದೆ ಎಂಬುದಕ್ಕೆ ಪಾವಿತ್ರ್ಯದ ಪರಿಕಲ್ಪನೆಯನ್ನು ಗಮನಿಸಬಹುದು.

- ಸಮಾನತೆಯ ದೃಷ್ಟಿಕೋನ, ಎಚ್ಚರಗಳು ಅಂಚಿಗೆ ದೂಡಲ್ಪಟ್ಟ ಸಂಸ್ಕೃತಿಗಳ ಅರಿವನ್ನೂ ದನಿಯನ್ನು ಬಲಪಡಿಸಿದ ಸಂದರ್ಭದಲ್ಲಿ ಸಹಜ ಚಾರಿತ್ರಿಕ ಬೆಳವಣಿಗೆಯಾಗಿ ಸ್ತ್ರೀವಾದಿ ವಿಮರ್ಶೆ ರೂಪುಗೊಂಡಿದೆ.

- ಪಿತೃಸಂಸ್ಕೃತಿಯ ಪರಾಮರ್ಶನ ಮತ್ತು ವಿರೋಧವು ಸ್ತ್ರೀವಾದಿ ವಿಮರ್ಶೆಯ ಪ್ರಮುಖ ಗುರಿಯಾಗಿದೆ. ಈಗ ಇರುವ ಸಂಸ್ಕೃತಿ ಪುರುಷಕೇಂದ್ರಿತ ಚಿಂತನೆಯುಳ್ಳದ್ದೂ ಏಕಲಿಂಗಿಯೂ ಆಗಿರುವುದರಿಂದ ಇಲ್ಲಿಯ ಮೌಲ್ಯಗಳು ಏಕಪಕ್ಷೀಯವಾಗಿವೆ ಎಂದೇ ಹೇಳಬೇಕಾಗುತ್ತದೆ.

- ಹೆಣ್ಣು–ಗಂಡಿನ ಲೈಂಗಿಕ ಸಂಬಂಧದಲ್ಲಿ ಪುರುಷನ ಪಾತ್ರವನ್ನು ಮೇಲುವರ್ಗದ್ದೆಂದೂ ಶಕ್ತಿಯುತವಾದದ್ದೆಂದೂ ಪಿತ್ರಸಂಸ್ಕೃತಿಯಾ ಮುಖವಾಣಿಯಾದ ಸಾಹಿತ್ಯ ನಂಬುತ್ತದೆ. ಅಂಥ ಸಾಹಿತ್ಯ ಪುರುಷನ ಭೋಗದ ವಸ್ತುವಾಗಿ ಮಾತ್ರ ಮಹಿಳೆಯ ಬದುಕನ್ನು ಮಿತಿಗೊಳಿಸುತ್ತಾ ಮಹಿಳೆಯನ್ನು ಅವಮಾನಕ್ಕೆ ಈಡುಮಾಡುತ್ತಿದೆ. ಅವಳ ವೈಯಕ್ತಿಕವಾದ ಸಮಗ್ರ ಬದುಕು ಅದಕ್ಕೆ ಮುಖ್ಯವಾಗುವುದಿಲ್ಲ. ಆಕೆಯ ಇಡಿಯಾದ ವ್ಯಕ್ತಿತ್ವವನ್ನು ಲೈಂಗಿಕತೆ ಮತ್ತು ಪ್ರಜನನಕ್ಕೆ ಇಳಿಸಲಾಗಿದೆ.

- ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಠತೆಯ ವಿರುದ್ಧ ತನ್ನ ಹೋರಾಟವನ್ನು ಅನೇಕ ಬಗೆಗಳಲ್ಲಿ ಮಾಡಬೇಕಾಗಿದೆ. ಈ ಒಂದು ಹೋರಾಟಕ್ಕೆ ಬೀಳಿಸುವುದರಲ್ಲಷ್ಟೇ ಆಸಕ್ತಿಯಲ್ಲ. ಕಟ್ಟುವುದರಲ್ಲಿಯೂ ಕೂಡ, ರಾಚನಿಕವಾದ ತನ್ನ ಧ್ಯೇಯ ಗುರಿಗಳನ್ನು ಈ ವಿಮರ್ಶೆಯು ಮರೆಯುವಂತಿಲ್ಲ.

ಆದುದರಿಂದ ಸ್ತ್ರೀವಾದಿ ನೆಲೆಯಿಂದ ಬರುವ ಸಾಹಿತ್ಯಕ್ಕೆ ಮೊದಲ ಗಮನನೀಡುತ್ತದೆ.

- ಸ್ತ್ರೀವಾದ – ಸ್ತ್ರೀವಾದ ಚಳುವಳ, ಸ್ತ್ರವಾದಿ ವಿಮರ್ಶೆ ಇವೆಲ್ಲ ಹೊಕ್ಕಳು ಬಳ್ಳಿಯ ಸಂಬಂಧವನ್ನು ಪಡೆದಿರುವಂಥವು. ಸ್ತ್ರೀವಾದಿ ವಿಮರ್ಶೆಯು ಸ್ತ್ರೀಯರ ಅನುಭವಕ್ಕೆ ಪ್ರಾಮಾಣಿಕವಾಗಿರಬೇಕು ಮತ್ತು ಅವರಿಗೆ ಅದೊಂದು ವೇದಿಕೆಯಾಗಬೇಕು. ಸ್ತ್ರೀಯರ ವಿಕಸನಕ್ಕೆ ಮಾದರಿಗಳನ್ನು ನೀಡಬೇಕು. ಸಾಂಸ್ಕೃತಿಕ ದ್ವಿಲಿಂಗತ್ವವನ್ನು ಸಾಧಿಸಲು ನೆರವು ನೀಡಬೇಕು.

ಹೀಗೆ ಸ್ತ್ರೀವಾದಿ ಸಾಹಿತ್ಯವನ್ನು ಕುರಿತ ಸಿದ್ಧಾಂತವನ್ನು ಅಥವಾ ಚಿಂತನಶೀಲನ ಮಾರ್ಗವನ್ನು ಹರಿಯಬಿಡುತ್ತಾರೆ. ಆದ್ದರಿಂದ ಇವುಗಳ ವಿವೇಕಯುತ ಬಳಕೆಯನ್ನು ಅವರ ಪ್ರಮುಖ ವಿಮರ್ಶಾಕ್ಷೇತ್ರದ ಸಂಕಲನದ ಮೇರುಕೃತಿಗಳಾದ 'ನಯಸೇನ' – ೧೯೭೭, 'ಸಂಪ್ರತಿ' ೧೯೭೭, 'ಮಹಿಳೆ ಸಾಹಿತ್ಯ ಸಮಾಜ' – ೧೯೮೬, 'ನಾರಿದಾರಿ-ದಿಗಂತ'-೧೯೯೭, 'ಮಹಿಳೆ ಮತ್ತು ಮಾನವತೆ' –೨೦೦೩, 'ಅನುಪಮಾ ನಿರಂಜನ'-೧೯೯೮. ಇವು ಇವರ ಮುಖ್ಯ ವಿಮರ್ಶಾ ಸಂಕಲನದಂತ ಕೃತಿಗಳು. ಆದರೆ ವಿಜಯಾರವರು ಒಂದು ಮುಖ್ಯ ಅಂಶವೆಂದರೆ ಇವುಗಳಲ್ಲಿನ ವಿಷಯಗಳು ಮೊದಲು, ಕೆಲವು ಭಾಷಣಗಳಲ್ಲಿ, ವಿಚಾರಸಂಕೀರಣ, ಲೇಖನಗಳಾಗಿ, ಪತ್ರಿಕೆಗಳಲ್ಲಿ, ಸಮ್ಮೇಳನಗಳಲ್ಲಿ, ಭಾಷಣಮಾಡಿದ, ಬರೆದ ಸಾಹಿತ್ಯವಾಗಿರುತ್ತವೆ ಕೆಲವು.

"ವಿಭಿನ್ನ ಸಂದರ್ಭಗಳಲ್ಲಿ ಮಾಡಿದ ಮಹಿಳಾ ವಿಷಯಕವಾದ ಭಾಷಣಗಳ/ಲೇಖನಗಳು ಇಲ್ಲಿವೆ. ಲಿಂಗವ್ಯವಸ್ಥೆಯೇ ಈ ಎಲ್ಲ ಬರಹಗಳ ಕೇಂದ್ರವಾದ್ದರಿಂದ ಒಮ್ಮೊಮ್ಮೆ ವಿಷಯಗಳು ಮರುಕಳಿಸಿವೆ. ಆ ಬರಹದ ಮೈಯೊಳಗೇ ಆ ವಿಷಯಗಳು ಸೇರಿರುವುದರಿಂದ ಅನಾಮತ್ತಾಗಿ ಅವನ್ನು ಕೀಳುವುದೂ ಕಷ್ಟ. ಹೀಗಾಗಿ ಅವನ್ನು ಅವಿದ್ದಂತೆಯೇ ಬಿಟ್ಟಿದ್ದೇನೆ. ಬೇಕಾದಾಗ ಬೇಕಾದ್ದನ್ನು ಓದಿಕೊಳ್ಳುವ ಅಥವಾ ಪುಸ್ತಕ ಮುಚ್ಚಿಟ್ಟು ಎದ್ದುಹೋಗುವ ಸ್ವಾತಂತ್ರ್ಯ ಹೇಗೂ ಇದೆಯಲ್ಲ"[೧] ಮೂಕ ನೆನಕೆ ಎಂದು ಲೇಖಕಿಯು ಸ್ವತಃ ಹೇಳಿರುವ ಮಾತುಗಳು ಓದುಗ-ವಿಚಾರ ಸ್ವಾತಂತ್ರ್ಯದ ಬಗ್ಗೆ ಹೊಂದಿರುವ ವಿಶಾಲ ಅರಿವಿನ ರೂಪವನ್ನು ಅಂತರಾಳದ ತೆರೆಯನ್ನು ಸರಿಸಿ ಇಡುತ್ತದೆ.

ವಿಜಯಾ ಅವರ ವಿಮರ್ಶಾಕೃತಿಗಳನ್ನು ವಸ್ತುದೃಷ್ಟಿಯಿಂದ ಸಾಹಿತ್ಯ ಅಧ್ಯಯನಕ್ಕಾಗಿ ಈ ರೀತಿಯ ವಿಧಾನದಿಂದ ವಿವೇಚನೆಗೊಳಪಡಿಸಿ ನೋಡಲಾಗಿದೆ.

---

೧. ನಾರಿ : ದಾರಿ –ದಿಗಂತ, ವಿಜಯಾದಬ್ಬೆ, ರಚನಾ ಪ್ರಕಾಶನ, ಮೈಸೂರು, ಮು. ೧೯೯೭.

ಅ) ಮಹಿಳೆಯರ ಸಾಹಿತ್ಯ ಮತ್ತು ಮಹಿಳೆ ಕುರಿತು ಸಾಹಿತ್ಯ, ಸ್ತ್ರೀವಾದಿ ವಿಮರ್ಶೆ ಸ್ತ್ರೀವಾದಿ ನೆಲೆಯ ಬರಹಗಳು.

ಆ) ವ್ಯಕ್ತಿಕೇಂದ್ರಿತ ಪರಿಚಯಾತ್ಮಕ, ವಿಮರ್ಶಾತ್ಮಕ ಲೇಖನಗಳು

ಇ) ಮಹಿಳಾ ವಿಮೋಚನೆಗೆ ಸಂಬಂಧಿಸಿದ ಲೇಖನಗಳು

ಈ ರೀತಿಯಾಗಿ ಅವರ ಮೊದಲ ವಿಮರ್ಶಾ ಸಂಕಲನ 'ಸಂಪ್ರತಿ'ಯ ಹತ್ತು ಲೇಖನಗಳು ಹಾಗೂ 'ಮಹಿಳೆ ಸಾಹಿತ್ಯ ಸಮಾಜ'ದ ಹದಿನೇಳು ಲೇಖನಗಳು 'ನಾರಿ : ದಾರಿ – ದಿಗಂತ' ಕೃತಿಯ ಇಪ್ಪತ್ತು ಲೇಖನಗಳು ' ಮಹಿಳೆ ಮತ್ತು ಮಾನವತೆ'ಯ ಕೃತಿಯಲ್ಲಿ 'ಮಹಿಳೆ ಸಾಹಿತ್ಯ ಸಮಾಜ'ದ ನಾಲ್ಕು ಲೇಖನಗಳು ಸೇರಿ ಒಟ್ಟು ಹದಿನೈದು ಲೇಖನಗಳು ಜೊತೆಗೆ 'ಅನುಪಮಾನಿರಂಜನ', 'ನಯಸೇನ' ವಿಮರ್ಶಾ ಕೃತಿಗಳ ಒಟ್ಟಾರೆ ಒಳ ಅರಿವಿನ ಎಲ್ಲೆಗಳನ್ನು ಸ್ಥೂಲ ಹಾಗೂ ಸಂಕ್ಷಿಪ್ತ ಗಂಭೀರ ಮಾರ್ಗದಿಂದ ಕಂಡುಕೊಳ್ಳಬೇಕಿದೆ.

ಅ) ಮಹಿಳೆಯರ ಸಾಹಿತ್ಯ ಮತ್ತು ಮಹಿಳೆ ಕುರಿತು ಸಾಹಿತ್ಯ, ಸ್ತ್ರೀವಾದಿ ವಿಮರ್ಶೆ ಸ್ತ್ರೀವಾದಿ ನೆಲೆಯ ಬರಹಗಳು:

ಮಹಿಳಾ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರದ ಬಗೆಗಿನ ದೃಷ್ಟಿಕೋನ ಧೋರಣೆಗಳನ್ನು ಗುರುತಿಸುತ್ತಾ ಹಲವಾರು ಲೇಖನಗಳನ್ನು ಬರೆದಿರುವ ವಿಜಯಾರವರು ಆರೋಗ್ಯಕರ ಶಕ್ತ ಮಹಿಳೆಯನ್ನು ರೂಪಿಸುವುದು ಸಮಾಜದ ಸಮಾನತಾ ನೆಲೆಗಟ್ಟಿನಲ್ಲಿ ಮಾತ್ರ ಸಾಧ್ಯವೆಂದು ಸ್ಪಷ್ಟಪಡಿಸುತ್ತಾರೆ. ಮಹಿಳೆಯ ದೇಹ ಮತ್ತು ಮನಸ್ಸನ್ನು ಪುರುಷಾಧೀನವಾಗಿಸಿದ, ಅವರ ದುಡಿಮೆ ಮತ್ತು ತಾಯ್ತನದ ಹಕ್ಕನ್ನು ತನ್ನ ಹತೋಟಿಯಲ್ಲಿಟ್ಟುಕೊಂಡ ವ್ಯವಸ್ಥೆ ಸಹನೆ, ಕ್ಷಮೆ ವಿಧೇಯತೆಗಳ ಮೇಲಿಂದ ಅವಳು ತಲೆಯತ್ತದಂತೆ ಮಾಡಲು ಸತತವಾಗಿ ಯತ್ನಿಸಿತು ಎಂಬ ಪ್ರತಿಭಟನಾ ವಾಕ್ಯದಿಂದಲೇ ಪ್ರಾರಂಭವಾಗುವ ಲೇಖನದಲ್ಲಿ ಅಂದಿನಿಂದ ಇಂದಿನವರೆಗಿನ ಲೇಖಕಿಯರ ಸಾಹಿತ್ಯದ ಅವಲೋಕನ ಮಾಡಿದ್ದಾರೆ. ಮಹಿಳೆಯರ ಅಭಿವ್ಯಕ್ತಿಗೆ ಪ್ರತ್ಯೇಕ ವೇದಿಕೆಯ ಅಗತ್ಯವದೆಯೇ ಎಂಬುದರ ಬಗ್ಗೆ ಚರ್ಚಿಸುತ್ತಾ ವಿಜಯಾರವರು ಹೆಣ್ಣಿನ ದೃಷ್ಟಿಕೋನದಿಂದ ಬದುಕನ್ನು ಹಿಡಿಯುವ ಹೆಣ್ಣಿನ ಮನಸ್ಸು ಬಾಹ್ಯದೊಂದಿಗೆ ಪ್ರತಿಕ್ರಿಯಿಸುವ ರೀತಿಯನ್ನು ಒರೆಗೆ ಹಚ್ಚುವ ಹೆಣ್ಣಿನೊಳಗನ್ನು ನೋಡಿ ತೋರುವ ಸಾಹಿತ್ಯವನ್ನು ಮಹಿಳಾ ಸಾಹಿತ್ಯವೆಂದು ಅಭ್ಯಸಿಸಲಾಗಿದೆ.

'ಸಂಪ್ರತಿ' ಅವರ ಮೊದಲನೆಯ ವಿಮರ್ಶಾ ಸಂಲನ 'ಬದುಕು ಬರಹ ಮತ್ತು ಮಹಿಳೆ' ಲೇಖನದಲ್ಲಿ ವಿಜಯಾ ದಬ್ಬೆಯವರ ಅಪೂರ್ವವಾದ ಒಳನೋಟದ ಅರಿವು

ನಮಗುಂಟಾಗುತ್ತದೆ. ಈ ಲೇಖನದಲ್ಲಿ ಮಹಿಳಾ-ಪರದೃಷ್ಟಕೋನವು ಕೇಂದ್ರವಾಗಿದೆ. ಲೇಖನದಲ್ಲಿ ಶುದ್ಧಸಾಹಿತ್ಯ ವಿಮರ್ಶೆಯೆಂದು ಕರೆಯಲಾಗುವುದಿಲ್ಲ. ಆದರೆ ಈ ಲೇಖನದಲ್ಲಿ ಮಹಿಳಾ ಸಮಸ್ಯೆ ಮತ್ತು ಸಾಹಿತ್ಯ ಕೃತಿಗಳಲ್ಲಿ ಬಂದಿರುವ ಚಿತ್ರಣಗಳ ವಿಮರ್ಶೆಯಿದೆ.

ಮಹಿಳಾ ಸಾಹಿತ್ಯ ಮತ್ತು ಮಹಿಳೆ ಕುರಿತು ಇಪ್ಪತ್ತಕ್ಕೂ ಹೆಚ್ಚು ಲೇಖನಗಳನ್ನು ಗುರುತಿಸಬಹುದು. ಇವುಗಳಲ್ಲಿ ಮಹಿಳೆಯ ಸುತ್ತ ಹಲವಾರು ರೀತಿಯ ಚಿಂತನೆಯನ್ನು, ಜಿಜ್ಞಾಸೆಯನ್ನು ಮಾಡುತ್ತಾ ವ್ಯವಸ್ಥಿತ ಸಮಾಜದ ನಂಬಿಕೆಗಳನ್ನು ಪ್ರಶ್ನಿಸುತ್ತಾ ಆರೋಗ್ಯಕರ, ಶಕ್ತಮಹಿಳೆಯನ್ನು ರೂಪಿಸುವುದು ಆರೋಗ್ಯಕರ ಸಮಾಜದ ಸಾಂಸ್ಕೃತಿಕ ಸಮಾನತಾ ಧ್ಯೇಯಾದಿಂದ ಮಾತ್ರ ಸಾಧ್ಯವೆಂದು ಸಾದರಪಡಿಸುತ್ತಾರೆ. ಸಾಹಿತ್ಯ ಶಿಕ್ಷಣ, ರಾಜಕೀಯ ಮೀಸಲಾತಿ, ವೈಯಕ್ತಿಕ ಕಾನೂನು ಪತ್ರಿಕೋದ್ಯಮ ಜಾಹೀರಾತು ಮುಂತಾದ ವಿಷಯಗಳಡಿ ಮಹಿಳೆಯ ಸ್ಥಿತಿ-ಗತಿಗಳನ್ನು ಕುರಿತು ಅವಲೋಕಿಸಿದ್ದಾರೆ. ಮಹಿಳೆಯ ಬಗೆಗಿನ ಅವರ ತೀವ್ರ ಕಾಳಜಿ ವ್ಯಕ್ತವಾಗುತ್ತಲೇ ಹೋಗುತ್ತದೆ. ಚಾರಿತ್ರಿಕ, ಸಾಮಾಜಿಕ ಪ್ರಜ್ಞೆಯ ಜೊತೆಗೆ ಸಂಶೋಧಕ ದೃಷ್ಟಿ ಅವರ ವಿಮರ್ಶೆಗಳಲ್ಲಿ ಕಾಣುವ ಮುಖ್ಯ ಅಂಶವೆನ್ನಬಹುದು. 'ಮಹಿಳಾ ಸಾಹಿತ್ಯದಲ್ಲಿ ಪ್ರತಿಭಟನೆ'[೧] ಲೇಖನವು ಮಹಿಳೆಯ ದೇಹ ಮತ್ತು ಮನಸ್ಸನ್ನು ಪುರುಷಾಧೀನವಾಗಿಸಿದ, ಅವರ ದುಡಿಮೆ ಮತ್ತು ತಾಯ್ತನದ ಹಕ್ಕನ್ನು ತನ್ನ ಹತೋಟಿಯಿಟ್ಟುಕೊಂಡ ವ್ಯವಸ್ಥೆ ಸಹನೆ, ಕ್ಷಮೆ ವಿಧೇಯತೆಗಳ ಮೇಲಿಂದ ಅವಳು ತಲೆಯೆತ್ತದಂತೆ ಮಾಡಲು ಸತತವಾಗಿ ಯತ್ನಿಸಿತು, ಎಂದು ಪ್ರತಿಭಟನೆ ಧ್ವನಿಯಿಂದ ಏರುವ ಕನ್ನಡ ಸಾಹಿತ್ಯದ ಪ್ರಾರಂಭದ ದೆಸೆಯಿಂದ ಇತ್ತೀಚಿನ ಬಂಡಾಯ ಸಾಹಿತ್ಯದ ಕಾಲದ ತನಕ ಬೀಸು ನೋಟವನ್ನು ಹರಿಸಿದ್ದಾರೆ. ತಿರುಮಲಾಂಬರಿಂದ ಇತ್ತೀಚಿನ ಅನುಪಮಾ ನಿರಂಜನ, ಸಾರಾ, ಗೀತಾನಾಗಭೂಷಣ ಮುಂತಾದ ಲೇಖಕಿಯರ ಲೇಖನಿಯಲ್ಲಿ ಒಡಮೂಡಿದ ಸಮಾಜದ ಅಸಮಾನತೆ ವಿರುದ್ಧದ ಧೋರಣೆ ಪ್ರತಿಭಟನೆಯ ರೂಪದಲ್ಲಿ ವ್ಯಕ್ತವಾದದ್ದನ್ನು ದಾಖಲಿಸುತ್ತಾರೆ. 'ಮಹಿಳಾ ಸಾಹಿತ್ಯ ಮತ್ತು ಮಹಿಳಾ ಸಾಹಿತ್ಯ ಸಮ್ಮೇಳನ ಕೆಲವು ವಿಚಾರಗಳು'[೨] 'ಕನ್ನಡ ಸಾಹಿತ್ಯ ಪರಿಷತ್ತು' ಸಮ್ಮೇಳನದಲ್ಲಿ ಒಂದು ಭಾಗವಾಗಿ 'ಮಹಿಳಾ ಗೋಷ್ಠಿ'ಗಳನ್ನು ಏರ್ಪಡಿಸುತ್ತಿದ್ದು ಮಹಿಳೆಯರ ಅಭಿವ್ಯಕ್ತಿಗೆ ಪ್ರತ್ಯೇಕ ವೇದಿಕೆಯ ಅಗತ್ಯವಿದೆಯೇ ಎಂಬ ವಾದ

---

೧. ಮಹಿಳೆ-ಸಾಹಿತ್ಯ-ಸಮಾಜ, ವಿಜಯಾದಬ್ಬೆ, ಪ್ರ. ರಚನಾ ಪ್ರಕಾಶನ, ಮೈಸೂರು, ೧೯೮೯, ಪು. ೧.
೨. ಅದೇ, ಪು. ೧೦೩

ವಿವಾದಗಳು, ಲಿಂಗತಾರತಮ್ಯ ಅಂಶವನ್ನು ಸಾಹಿತ್ಯ ಕ್ಷೇತ್ರದಲ್ಲಿಯೂ ಮುಂದುವರಿಸಿದಂತಾಗುತ್ತದೆ ಎಂದು ಅಭಿಪ್ರಾಯಿಸುತ್ತ ಮಹಿಳಾ ಸಾಹಿತ್ಯ ಎನ್ನಬೇಕಾದರೆ 'ಮಹಿಳಾ ಸಂವೇದನೆ ಎಂಬುದೂ ಇರಬೇಕು ಈ ಸಂವೇದನೆ ವಿಶಿಷ್ಟಾಂಶಗಳನ್ನು ಹೊಂದಿರಬೇಕು ಎಂದು ವಿವರಿಸುತ್ತಾ ವಿಜಯಾ ಅವರು "ಹೆಣ್ಣಿನ ದೃಷ್ಟಿಕೋನದಿಂದ ಬದುಕನ್ನು ಹಿಡಿಯುವ ಹೆಣ್ಣಿನ ಮನಸ್ಸು.... ಬಾಹ್ಯದೊಂದಿಗೆ ಪ್ರತಿಕ್ರಿಯಿಸುವ ರೀತಿಯನ್ನು ಒರೆಗೆ ಹಚ್ಚುವ ಹೆಣ್ಣಿನೊಳಗನ್ನು ನೋಡಿ ತೋರುವ ಸಾಹಿತ್ಯವನ್ನು ಮಹಿಳಾ ಸಾಹಿತ್ಯವೆಂದು ಗುರುತಿಸಬಹುದು."[೧] ಎಂದು ಮಹಿಳಾ ಸಾಹಿತ್ಯ ವಸ್ತು ಸಂವೇದನೆ ತಿಳಿಸುತ್ತಾರೆ. ಸ್ತ್ರೀವಾದಿ ದೃಷ್ಟಿಕೋನ ಜಾಗತಿಕ ನೆಲೆಯಲ್ಲಿ ಪಡೆದ ಅಪಾರ ಚರ್ಚೆ ಮಹಿಳೆಯ ಒಳಗಿನ ಸತ್ಯ ಹೊರಹಾಕಲು ತನ್ನದೇ ಆದ ಭಾಷೆಯ ಅಗತ್ಯವಿದೆ ಎಂಬ ಮುಂತಾದ ವಿಚಾರಗಳನ್ನು ತಿಳಿಸುತ್ತದೆ.

ಸಾಹಿತ್ಯದಲ್ಲಿ ಮಹಿಳೆಯ ಕುರಿತು ಬಂದಿರುವ ಸ್ವರೂಪವನ್ನು ವಿಜಯಾ ಅವರು ಕೆಲವು ಮುಖ್ಯ ಬರಹಗಾರರ ಸಾಹಿತ್ಯವನ್ನು ಅವಲೋಕಿಸಿದ್ದಾರೆ. ಮುಖ್ಯವಾಗಿ ಶಿವರಾಮಕಾರಂತ, ನಿರಂಜನ, ಚದುರಂಗರ ಕೃತಿಗಳಲ್ಲಿ ಸ್ತ್ರೀಪಾತ್ರಗಳ ಸೃಷ್ಟಿಯಲ್ಲಿಯ ಧೋರಣೆಯಲ್ಲಿ ಕಾಣಬಹುದು. 'ಕಾರಂತರ ಕಾದಂಬರಿಗಳಲ್ಲಿ ಗ್ರಾಮೀಣ ಮಹಿಳೆಯರು'[೨] ಲೇಖನದಲ್ಲಿ ಕಾರಂತರ ಕಾದಂಬರಿಗಳಲ್ಲಿ ಅತ್ಯಂತ ಕಸುವುಳ್ಳ ಪಾತ್ರಗಳು ಗ್ರಾಮೀನ ಮಹಿಳೆಯರದು, ಈ ಮಹಿಳೆಯರ ಬದುಕಿನ ದುರಂತ ಸ್ಥಿತಿಯನ್ನು, ಆದರೂ ಆ ಮಹಿಳೆಯರಲ್ಲಿರುವ ಜೀವನ ಶ್ರದ್ಧೆ, ತಾಳ್ಮೆ, ತ್ಯಾಗ, ಸಹನೆಯಂತ ಸತ್ವಯುತ ಮುಖಗಳನ್ನು ಕಾರಂತರು ಚಿತ್ರಿಸುತ್ತಾರೆ. ಇದನ್ನು ವಿಜಯಾ ಅವರು ಹೀಗೆನ್ನುತ್ತಾರೆ. "ಇವರೆಲ್ಲರ ಬದುಕಿನ ಹೋರಾಟ, ಪರಂಪರಾಗತ ಜೀವನ ಕ್ರಮದ ಬಗೆಗಿನ ನಿಷ್ಠೆ, ಬೇಡಿದ ತ್ಯಾಗ ಸಣ್ಣದಲ್ಲ. ಜೀವನಾಭಿಮುಖಿಗಳಾದ, ಕರ್ತವ್ಯ ಶೀಲೆಯರಾದ ಕೆಲವು ಮಹಿಳೆಯರು ಗಂಡಸರು ಹದಗೆಡಸಿದ ಸಂಸಾರವನ್ನು ಕಟ್ಟಿ ಉಳಿಸಿದ್ದನ್ನು" ಚಿತ್ರಿಸಿದ್ದಾರೆ. 'ಗರತಿ' ಮತ್ತು 'ವೇಶ್ಯೆ' ಎರಡು ಚೌಕಟ್ಟಿನಲ್ಲಿನ ಮಹಿಳೆಯ ಸ್ಥಿತಿ ಮನಸ್ಥಿತಿಯನ್ನು ಅವರ ಕಾದಂಬರಿಗಳು ಚಿತ್ರಿಸಿವೆ ಎಂದು ವಿಶ್ಲೇಷಿಸುತ್ತ ಈ ಗ್ರಾಮೀಣ ಮಹಿಳೆಯರು ಪ್ರತಿಮಿಸುವ ಜೀವನ ಮೌಲ್ಯಗಳಾದ ಸಹನೆ, ತ್ಯಾಗ, ಶ್ರದ್ಧೆಗಳು ಒಟ್ಟು ಮನುಕುಲದ ಮೌಲ್ಯವಾಗಬೇಕು. ಇಂತಹ ಮೌಲ್ಯಗಳನ್ನು ಮಹಿಳೆಯರ ಬದುಕಿನಿಂದ ಮಾತ್ರ ನಿರೀಕ್ಷಿಸುವ ಸ್ಥಿತಿ ಆರೋಗ್ಯಕರವಲ್ಲ. ಇಂಥ ಪಾತ್ರಗಳನ್ನು ಓದುಗ ಮೆಚ್ಚುಗೆ ನೋಟದಿಂದ ಮಾತ್ರ ನೋಡುವಂತಾಗುತ್ತದೆ.

---

೧. ಅದೇ, ಪು. ೧೦೫

೨. ಮಹಿಳೆ ಸಾಹಿತ್ಯ ಸಮಾಜ, ವಿಜಯಾದಬ್ಬೆ, ಪ್ರರಚನಾ ಪ್ರಕಾಶನ,ಮೈಸೂರು, ಪು. ೪೯.

ಸ್ತ್ರೀಪುರುಷ ಅಸಮಾನತೆ ಎತ್ತಿ ಹಿಡಿಯಲ್ಪಡುತ್ತದೆ ಎಂಬುದನ್ನು ಎಚ್ಚರದಿಂದ ಇಲ್ಲಿ ಲೇಖಕಿ ವಿವೇಚಿಸುತ್ತಾರೆ. ಇದೇ ರೀತಿಯಲ್ಲಿ 'ಲಿಂಗಾಧಾರಿತ ಅಸಮಾನತೆ–ನಿರಂಜನರ ದೃಷ್ಟಿಕೋನ' ಲೇಖನದಲ್ಲು ಸಹ ಶ್ರೇಣೀಕೃತ ಸಮಾಜ ವ್ಯವಸ್ಥೆಯ ತಳಪಾಯದಲ್ಲಿ ಅನೇಕ ಅಸಮಾನ ನೆಲೆಗಳಿವೆ. ವರ್ಣ, ವರ್ಗದಂತೆ ಅಮಾನವೀಯ ಕ್ರೌರ್ಯಗಳ ಕಾರಣವಾಗುವ ಮತ್ತೊಂದು ನೆಲೆ ಲಿಂಗಾಧಾರಿತ ಅಸಮಾನತೆ ಎಂದು ಹೇಳುತ್ತಾ ನಿರಂಜನರ ಕಾದಂಬರಿಗಳಲ್ಲಿ ಈ ಅಸಮಾನ ನೆಲೆಗಳನ್ನು ಗುರುತಿಸಿ. ನಿರಂಜನರ ಪ್ರಗತಿಶೀಲ ಮನೋಭಾವ 'ಸಮಾನತೆ'ಯ ಪ್ರತಿಪಾದನೆಯು ಕಾದಂಬರಿಯಲ್ಲಾಗಿರುವುದನ್ನು ವಿಜಯಾ ಅವರು ಪ್ರಗತಿಶೀಲ ಲೇಖಕರ ಬರವಣಿಗೆಯಲ್ಲಿ 'ಸಮಾನತೆ'ಯ ತತ್ವ ಸತ್ವಯುತವಾಗಿ ಮೂಡಲೇ ಇಲ್ಲ ಆದರೆ ನಿರಂಜನರ ಕೃತಿಗಳಲ್ಲಿ ಸ್ಪಷ್ಟವಾಗಿ ಅಂಶ ಕಾಣುತ್ತದೆ ಎಂದು ವಿಜಯಾ ಅವರು ಅಭಿಪ್ರಾಯಿಸುತ್ತಾರೆ. ಹಾಗೂ ನಿರಂಜನರ ಕಾದಂಬರಿಯ ಪಾತ್ರಗಳಾದ ಬನಶಂಕರಿಯ, ಬನಶಂಕರಿ, ಅಭಯದ ತುಂಗಮ್ಮ, ಮೀನಾಕ್ಷಿ, ದೇವಕಿ ಮುಂತಾದವರುಗಳ ಮೂಲಕ ಲಿಂಗಾಧಾರಿತ ತಾರತಮ್ಯದ ಸಮಸ್ಯೆಯನ್ನು ಕಾಣಿಸಿದ್ದಾರೆ ಎಂದು ಹಾಗೂ ಸ್ಪಷ್ಟವಾಗಿ ಖಂಡಿಸುತ್ತಾ, ಸಮಾಜದಲ್ಲಿ ಗಂಡನಿಗಿಂತ ಹೆಂಗಸಿನ ಪಾತ್ರ ಮಹತ್ವದ್ದು ಎಂದು ಹೇಳುತ್ತಾರೆ. ಹಾಗಾಗಿ ಇಂತಹ ಹಲವು ಕಾರಣಗಳಿಂದ ನಿರಂಜನರ ಬರಹಗಳು ಇಂದಿಗೂ ಪ್ರಸ್ತುತ ಎಂದು ಹೇಳಿದ್ದಾರೆ. ವಿಜಯಾ ಅವರು ಮುಂದುವರಿದಂತೆ 'ವೈಶಾಖ'ದ ಜಾತಿ–ವರ್ಗಗಳ ಹಿನ್ನೆಲೆಯಲ್ಲಿ ಮಹಿಳೆಯರು' ಇಲ್ಲು ಮಹಿಳೆಯರ ಶೋಷಣೆ ನಾನಾ ಸ್ವರೂಪ, ತೀವ್ರತೆಯಲ್ಲಿ ಆಯಾ ಸಮಾಜದ ಒಳರಚನೆಯನ್ನು ಅವಲಂಬಿಸಿದೆ ಎಂದು ಪ್ರಸ್ತುತತೆಯ ಒರೆಗಚ್ಚಿ ವಿಶಿಷ್ಟ ಸ್ತ್ರೀವಾದಿ ತಾತ್ವಿಕತೆಯಿಂದ ಅವಲೋಕಿಸಿದ್ದಾರೆ.

ವಿಜಯಾದಬ್ಬೆಯ ವಿಮರ್ಶಾ ಬರಹಗಳಲ್ಲಿ ಜಾಗತಿಕ ನೆಲೆ–ಬೆಲೆ, ಸೈದ್ಧಾಂತಿಕ ತಾತ್ವಿಕತೆಯ ಅನನ್ಯತೆಯನ್ನು ಕಾಣುವುದು ಸ್ತ್ರೀವಾದಿ ವಿಮರ್ಶೆ ಸಾಹಿತ್ಯ ಬರಹಗಳು, ಅದಮ್ಯ ಸ್ತ್ರೀಪರ ಕಾಳಜಿ, ವಿರುದ್ಧ ಧೋರಣೆಯ ಅವಲೋಕನೆಯ ಸಂಯಮ ಚಿಂತನ ಶೈಲಿಯು ಹಲವು ಲೇಖನಗಳಲ್ಲಿ ವಿಚಾರಾತ್ಮಕ ನೆಲೆಯಿಂದ ಹರಿಹಾಯ್ದಿರುವುದು ಇವರ ವಿಮರ್ಶಾ ಕೃತಿಗಳ ಮಹತ್ವ ಅಧ್ಯಯನಾವಶ್ಯಕ ವಸ್ತು.

'ಸಂಪ್ರತಿ' ಸಂಕಲನದ 'ಹೊನ್ನಮ್ಮನ ಕಿವಿಮಾತಿಗೆ ಒಂದು ಪ್ರತಿಕ್ರಿಯೆ' ಲೇಖನವು ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಕೃತಿಯನ್ನು ವಿಜಯಾದಬ್ಬೆಯವರು ಸ್ತ್ರೀಪರ ದೃಷ್ಟಿಕೋನದಿಂದ ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಹೊನ್ನಮ್ಮನು ಒಪ್ಪಿಕೊಂಡಿದ್ದ ಮೌಲ್ಯಗಳು ಹೇಗೆ ಪುರುಷಪರವಾಗಿವೆ ಎಂಬುದನ್ನು

ವಿಜಯಾ ಅವರು ಆಧಾರ ಸಮೇತವಾಗಿ ವಿವರಿಸಿ ಸ್ತ್ರೀವಾದಿ ನೆಲೆಯಿಂದ ಅವಲೋಕಿಸಿದ್ದಾರೆ. 'ಭವತಾರಿಣಿಯ ಭವ' ನಾರಿ:ದಾರಿ – ದಿಗಂತ ಕೃತಿಯ ಲೇಖನವು ಹೆಣ್ಣಿನ ಹುಟ್ಟಿನ ಬಗ್ಗೆ ಸಮಾಜ ತಳೆದ ತಿರಸ್ಕಾರ ಅಸಹನೆಗಳ ಪರಿಣಾಮವಾಗಿ ಹೆಣ್ಣಿಗೆ ಹೆಣ್ಣಾಗಿ ಹುಟ್ಟೋಕ್ಕಿಂತ ಮರವಾಗಿ ಹುಟ್ಟುವುದು ಲೇಸೆನಿಸುತ್ತದೆ. ಇಂತಹ ಹಲವಾರು ಜನಪದ ಗೀತೆಗಳ ಹೊಳವು ಹಲವು ಸಮಸ್ಯೆಯ ಸುಳಿಯಲ್ಲಿ ಸಿಕ್ಕ ಮಹಿಳೆ ತನ್ನ ಶಕ್ತಿಯನ್ನು ತಾನೇ ಗುರುತಿಸಿಕೊಳ್ಳಬೇಕಿದೆ. ಹೆಣ್ಣು ಮಕ್ಕಳ ಭವಿಷ್ಯವನ್ನು ಶಿಕ್ಷಣದ ಮುಖಾಂತರ ಭದ್ರಗೊಳಿಸಬೇಕಿರುವುದು ಕುಟುಂಬದಲ್ಲಿ ಮದುವೆ, ತಾಯ್ತನಕ್ಕೆ ಸಿದ್ಧಗೊಳಿಸುವ ಪರಿ, ವಿದ್ಯಾವಂತಳಾಗಲು, ಉದ್ಯೋಗಸ್ಥಳಾಗಲು ಪ್ರೋತ್ಸಾಹ ನೀಡಬೇಕಿರುವ ಅಂಶಗಳನ್ನು ಸ್ತ್ರೀಪರ ಧೋರಣೆಯಿಂದ ಎತ್ತುವರು. ಆದರೆ ಸ್ತ್ರೀವಾದಿ ವಿಮರ್ಶೆಯ ರೂಪವನ್ನು ಸಂಪೂರ್ಣವಾಗಿ ಅನ್ವಯಿಕ ಮಾದರಿಯಿಂದ ವಿಚಾರ ಸಿದ್ಧಾಂತಗಳು 'ಕಪ್ಪು ಸ್ತ್ರೀವಾದಿ ವಿಮರ್ಶೆ' ಲೇಖನದಿಂದ ಅಭಿವ್ಯಕ್ತವಾಗಿದೆ. ಜಗತ್ತಿನಾದ್ಯಂತ 'ಸ್ತ್ರೀವಾದ ವಿಸ್ತರಿಸಿದಮತೆ ವರ್ಗ– ವರ್ಣಗಳ ಸಮಸ್ಯೆ ಉಂಟಾಯಿತು. "ಕಪ್ಪು ಮಹಿಳೆಯರು ಬರೆದ, ಕಪ್ಪು ಮಹಿಳೆಯರನ್ನು ಕುರಿತು ಬರೆದ ಸಾಹಿತ್ಯ, ಕಪ್ಪು ಮಹಿಳಾ ಸಾಹಿತ್ಯವನ್ನು ಕುರಿತು ಬಂದ ವಿಮರ್ಶೆಗಳಿಗೂ ಬರಹಗಳಿಗೂ ಕಪ್ಪು ಸ್ತ್ರೀವಾದಿ ವಿಮರ್ಶೆ ಎನ್ನಬಹುದು."[೧] ಎಂಬ ಹೇಳಿಕೆಯಲ್ಲಿ ಕಪ್ಪು ಸ್ತ್ರೀವಾದವನ್ನು ಸ್ಪಷ್ಟಪಡಿಸಿಕೊಂಡು ಪಾಶ್ಚಾತ್ಯ ಸ್ತ್ರೀವಾದಿ ಚಿಂತಕರುಗಳು 'ಕಪ್ಪು ಮಹಿಳೆ'ಯರ ಸ್ಥಿತಿ–ಗತಿಗಳನ್ನು ಕ್ರೂಢೀಕರಿಸಿ ಹೇಳಿದ್ದಾರೆ. ಬಹುಮುಖ್ಯವಾಗಿ ಈ ನೆಲೆಯಿಂದ 'ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ'[೨] ವಿಜಯಾ ಅವರ ಸ್ತ್ರೀವಾದ ಕುರಿತ ಬಹು ಮಹತ್ವಾಕಾಂಕ್ಷೆಯ ಲೇಖನವಿದು. 'ಸ್ತ್ರೀವಾದ'ದ ವಿಶ್ಲೇಷಣೆಯನ್ನು ಪರಿಭಾಷಿಕ ಭಾಷೆಯಲ್ಲಿ ವಿವರಿಸುತ್ತಾ ಸ್ತ್ರೀವಾದಿ ತಾತ್ವಿಕತೆಯನ್ನು ಪ್ರಜ್ಞೆರೂಪಿತಗೊಳಿಸುವುದು, ಲಿಂಗ ವಿರೋಧಿ ನೀತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಜಾಗತಿಕ ಚರಿತ್ರಾ ನೆಲೆಯಿಂದ ಪುರುಷ ನಿಷ್ಠ ಚಿಂತನೆ ಹರಿದುಬಂದ ಮಾದರಿ ತಿಳಿಸುತ್ತಾ ಸ್ತ್ರೀ ವಿಮೋಚನೆಯ ನೆಲೆಯಿಂದ ಮನುಷ್ಯನ ವಿಮೋಚನೆಯಿದೆ ಎಂಬ ಸಿಮೋನಳ ಮಾತನ್ನು ಇಲ್ಲಿ ಬಿಂಬಿಸುತ್ತಾ ಪಿತೃಸಂಸ್ಕೃತಿಯ ಪರಾಮರ್ಶೆ ಮತ್ತು ವಿರೋಧವು ಸ್ತ್ರೀವಾದಿ ವಿಮರ್ಶೆಯ ಮುಖ್ಯ ಗುರಿಯಾಗಿದೆ. ಸ್ತ್ರೀವಾದಿ ವಿಮರ್ಶೆಯ ಶಾಖೆಗಳು ಭಾಷಾ ವಿಜ್ಞಾನ, ಮನೋ ವಿಶ್ಲೇಷಣಾಶಾಸ್ತ್ರ, ಸಾಂಸ್ಕೃತಿಕ ಸಾಮಾಜಿಕ, ಮಾನವ ಶಾಸ್ತ್ರಗಳೇ ಮೊದಲಾದ ಕ್ಷೇತ್ರಗಳನ್ನು ಆವರಿಸಿದೆ. ಸ್ತ್ರೀತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯಾತ್ಮಕತೆಯು

---

೧. ನಾರಿ:ದಾರಿ–ದಿಗಂತ, ವಿಜಯಾದಬ್ಬೆ,ಪ್ರರಚನಾ ಪ್ರಕಾಶನ, ಮೈಸೂರು, ೧೯೯೭, ಪು. ೫೦

೨. ನಾರಿ:ದಾರಿ–ದಿಗಂತ, ವಿಜಯಾದಬ್ಬೆ,ಪ್ರರಚನಾ ಪ್ರಕಾಶನ, ಮೈಸೂರು, ೧೯೯೭, ಪು. ೧

ಮಹಿಳಾವಾದದಲ್ಲಿ ಪ್ರಧಾನವಾದ ಹಂತಗಳೆಂದು ಗುರುತಿಸಿ ಈ ಪರಿಭಾಷೆಗಳ ಅರ್ಥ ನೀಡಿ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆ, ಸ್ತ್ರೀವಾದಿ ಸಾಹಿತ್ಯ ರೂಪಗಳನ್ನು ಗುರುತಿಸುತ್ತಾ ಸ್ತ್ರೀವಾದಿ ನೆಲೆಯ ಸಾಹಿತ್ಯವನ್ನು ಕನ್ನಡ ಸಂದರ್ಭದಲ್ಲಿ ಗುರುತಿಸಿಕೊಳ್ಳಲು ಒಂದು ಹೆದ್ದಾರಿಯನ್ನು ನಿರ್ಮಿಸುತ್ತಾರೆ. ಈ ಮೂಲಕ ಎನ್ನಬಹುದು. 'ಮಹಿಳಾವಾದ ಮತ್ತು ಮಹಿಳಾ ಸಾಹಿತ್ಯ' ಲೇಖನವು ಮಹಿಳಾವಾದದ ಅಗತ್ಯವನ್ನು ಸ್ತ್ರೀವಾದಿ ಒಂದು ದೃಷ್ಟಿಕೋನ. ಇದನ್ನು ಆಧರಿಸಿ ಜೀವನ ಕ್ರಮವಿದೆ. ಚಳುವಳಿ ಇದೆ ಎಂಬುದನ್ನು ತಿಳಸುತ್ತದೆ. ವಿಜಯಾ ಅವರ 'ಮಹಿಳೆ ಮತ್ತು ಮನವತೆ' ಕೃತಿಯು ಬಹುಮುಖ್ಯವಾಗಿ ಈ ಸ್ತ್ರೀವಾದಿ ದೃಷ್ಟಿಕೋನದ ಹಲವು ಮಗ್ಗಲುಗಳ ವಿಚಾರಸರಣಿಯ ಲೇಖನಗಳನ್ನು ಕೊಡುತ್ತಾರೆ. ಇಲ್ಲಿ 'ನಿಲ್ಲು ನಿಲ್ಲೆಲೆ ನೋಟ'ದ ಹೆಸರಿನ ಪತ್ರಿಕೆಗೆ ಬರೆದ ಚಿಂತನ ಬರಹಗಳು ಸ್ತ್ರೀಸಂಬಂಧಿ ವಿಚಾರಗಳಾಗಿದ್ದು ಬಾಲ್ಯವಿವಾಹ, ವರದಕ್ಷಿಣೆ, ಅತ್ಯಾಚಾರ, ರಾಜಕೀಯ ಪ್ರಾತಿನಿಧ್ಯ ಬಾಲ ವೇಶ್ಯಾ ಸಮಸ್ಯೆ ಇಂತಹ ಭಿನ್ನ ಸ್ವರದ ಮಹಿಳಾ ಲೇಖವನ್ನು ಬಿತ್ತರಿಸುವ ಬರಹದ ದಾಟಿ ಅನನ್ಯ ಧ್ವನಿ ಪೂರ್ಣ ಸಮಾಜದ ಕಟು ವ್ಯಂಗ್ಯ ಇದು ಆದರೆ ಸಾಹಿತ್ಯ ವಿಮರ್ಶೆ ಸಾಮಾಜಿಕ ಸಮಸ್ಯೆ, ಶೈಕ್ಷಣಿಕ ಸಮಸ್ಯೆ, ರಾಜಕೀಯ ಸಮಸ್ಯೆ ಮುಂತಾಗಿ ವಿಷಯಮ ವೈದೃಶ್ಯದಿಂದ ಕೂಡಿರುವ ದಿನನಿತ್ಯದ ಬದುಕಿನ ಸಣ್ಣ ಸಣ್ಣ ಸಂಗತಿಯ ದೈನ್ಯ ಗಂಭೀರ ಮಗ್ಗಲುಗಳನ್ನು ಸ್ತ್ರೀವಾದಿ ಧೋರಣೆಯಿಂದ ತೀಕ್ಷ್ಣವಾಗಿ ಹಿಡಿದಿಡುತ್ತಾರೆ. 'ಪಟ್ಟೆಸೀರೆ ಪುಟಾಣಿಗಂಡ' ಅಂತ ಒಂದು ಸ್ತ್ರೀಪರ ಧೋರಣೆ ಉಳ್ಳದ್ದು ಇಲ್ಲಿ ಲೇಖಕಿಯು ಪುಣಾಣಿಗಂಡ ಸಿಗಲಿ ಎಂದು ಹರಸಿ ಇಷ್ಟರಲ್ಲೇ ಸುಖವಿದೆ ಹೆಣ್ಣಿಗೆ ಎಂದು ಭಾವಿಸಿದ್ದರು. ಇಂದು ಕಾಲ ಬದಲಾಗಿದೆ, ಇಂದು ಹೆಣ್ಣು ಮಕ್ಕಳಿಗೆ ಏನೆಂದು ಹರಸುವುದು ಎಂದು ಪ್ರಶ್ನಿಸುತ್ತಾ 'ಉದ್ಯೋಗದ ಪಲ್ಲವಿಯ ನಂತರವೇ ಉಳಿದ ಆಶೀರ್ವಚನ ಎಂದು ಹೆಣ್ಣಿನ ಸ್ವಾವಲಂಭಿ ಬದುಕಿಗಾಗಿ ಆಗ್ರಹಿಸಿದ್ದಾರೆ. 'ಹೀಗೊಬ್ಬಳು ಅಬ್ಬಕ್ಕ' ಇಲ್ಲು ಸಹ ಹೆಣ್ಣು ಮಕ್ಕಳು ಧೈರ್ಯದಿಂದ ಹೋರಾಡುವ ರಾಣಿಯ ಚಿತ್ರಣ ಆದರೆ ಇಂದು ಇಂತಹ ಮನಸ್ಥಿತಿ ಎಲ್ಲಾರಿಗೂ ಬೇಕು ಎಂದು ವಾದಿಸುತ್ತಾರೆ 'ಕಾಣುವ ಜೀವನ ಪ್ರೀತಿಸದೆ', 'ಒಂದುರೊಟ್ಟಿಗೆ ಒಂದು ರವಿಕೆಗೆ', 'ನಾಲಗ್ನ ಆಯ್ತೀನಿ ಅಂತೇಳಿ', 'ಕುಂತಿಯ ಕುರ್ಚಿ', ಇಂತಹ ಲೇಖನಗಳು ಸ್ತ್ರೀಪರ ಧೋರಣೆಯೊಂದಿಗೆ ಸಮಾಜದಲ್ಲಿನ ಶೋಷಣೆಯ ಅನೇಕ ಮುಖಗಳಿಂದ ವಿಶ್ಲೇಷಿಸಿ ಅತ್ಯಾಚಾರದಂತ ಘೋರ ವಿಕೃತ ಸ್ಥಿತಿಗೆ ಕುಟುಂಬದಲ್ಲಿ ಗಂಡು–ಹೆಣ್ಣನ್ನು ಬೆಳೆಸುವ ಕ್ರಮ ಎಂದು ಬಾಲ ವೈಶ್ಯಾದಂತ ಕ್ರೂರ ಕೂಪಕ್ಕೆ ಸಮಾಜದ ಪೈಶಾಚಿಕ ಹಸಿವಿನ ದುರಂತದಿಂದ ಒಂದು ರೊಟ್ಟಿಗೆ ಒಂದು ರವಿಕೆಗೆ ಮುಗ್ಧ ಮಕ್ಕಳು

ಮಾರಾಟವಾಗುವ ಸ್ಥಿತಿಯನ್ನು ಖಂಡಿಸಿ ಅಭಿವ್ಯಕ್ತಿಸುತ್ತಾರೆ. ಕಾನೂನಬದ್ಧವಿಲ್ಲದ ಮದುವೆಯ ದುರಂತದಿಂದ ಆಗುವ ಶೋಷಣೆ ಮಹಿಳೆಗೆ ಸಿಗಬೇಕಾದ ಸಾಮಾಜಿಕ ಅಧಿಕಾರದಿಂದ ವಂಚತ ಸ್ಥಿತಿಯ ಚಿಂತನೆ ಇಂತಹ ಹಲವಾರು ಸ್ತ್ರೀವಾದಿ ವಿಮರ್ಶೆಯ ಎಲ್ಲೆಯಿಂದ ಸ್ತ್ರೀಪರ ದೃಷ್ಟಿಯಿಂದ ಸ್ತ್ರೀತ್ವ ಸ್ತ್ರೀವಾದ ಸಂವೇದನೆಗಳ ಪರನಡೆಯ ಬೇಕಾದ ಸಾಮಾಜಿಕ ತುರ್ತನ್ನು ಸ್ತ್ರೀವಾದಿ ವಿಮರ್ಶೆ ಮಾರ್ಗದಲ್ಲಿ ನಿರಂತರ ತೊಡಗಬೇಕಾದ ಚಿಂತನೆ, ಮನನ, ಹೊಳವುಗಳನ್ನು ಲೇಖಕಿಯ ತಾತ್ವಿಕತೆಯ ಒಟ್ಟು ನೋಟಗಳಾಗಿವೆ.

ಆ) ವ್ಯಕ್ತಿಕೇಂದ್ರಿತ ಪರಿಚಯಾತ್ಮಕ ಮತ್ತು ವಿಮರ್ಶಾತ್ಮಕ ಲೇಖನಗಳು

ವಿಜಯಾ ಅವರ ವಿಮರ್ಶಾ ಬರಹಗಳಲ್ಲಿ ಗುರುತಸಬಹುದಾದ ಮತ್ತೊಂದು ಹಂತ. ಸಾಹಿತ್ಯ ಪ್ರಪಂಚದಲ್ಲಿ ಕಣ್ಮರೆಯಾಗಿದ್ದ ಹಲವಾರು ಸ್ವಾತಂತ್ರ್ಯಪೂರ್ವ ಲೇಖಕಿಯರ ಬದುಕು ಬರಹಗಳನ್ನು ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ ಮತ್ತು ಕೆಲವು ವ್ಯಕ್ತಿ ಕೃತಿಗಳಿಂದ ಅವರ ಸಾಹಿತ್ಯ ವಿಶ್ಲೇಷಣೆಯಂತ ಕೃತಿಗಳು ಸಹ ನೋಡಬಹುದು. ಈ ರೀತಿಯಾಗಿ ಮೊದಲು 'ಮಹಿಳೆ ಸಾಹಿತ್ಯ ಸಮಾಜ'ದ 'ಹಿತೈಷಿಣಿ; ಒಂದು ನೆನಕೆ' ಲೇಖನದಲ್ಲಿ ನವೋದಯದ ಮುಂಬೆಳಗಿನ ಸಮಯದ ತಿರುಮಲಾಂಬ ಎಂಬ ಕವಿಯತ್ರಿಯ ಬದುಕು–ಬರಹ ಕುರಿತು ಬರೆಯುತ್ತಾರೆ. ಇಲ್ಲಿ ತಿರುಮಲಾಂಬರ ದುರಂತ ಬದುಕಿನ ಚಿತ್ರಣವನ್ನು ನೀಡಿದ್ದಾರೆ. ಬದುಕು ನೀಡಿದ ಸವಾಲುಗಳನ್ನು ಎದುರಿಸುತ್ತಾ ತಂದೆಯ ಮಾರ್ಗದರ್ಶನದಲ್ಲಿ ಸಾಹಿತ್ಯಕ, ಧಾರ್ಮಿಕ ಗ್ರಂಥಗಳ ಅಧ್ಯಯನ ಮಾಡುತ್ತಲೇ ಬರವಣಿಗೆಯ ಕೆಲಸವನ್ನು ಕೈಗೆತ್ತಿಕೊಂಡ ಬಗ್ಗೆ ಹಾಗೂ ತಿರುಮಲಾಂಬಾರವರು ಸೃಷ್ಟಿಸಿದ ಕಾದಂಬರಿ, ನಾಟಕ, ಪ್ರಬಂಧ, ಗೀತೆಗಳ ಬಗ್ಗೆ ಹೇಳುತ್ತಾರೆ. ಇವರ ಬರವಣಿಗೆಯಲ್ಲಿ ಸ್ತ್ರೀಶಿಕ್ಷಣಕ್ಕೆ ಮಹತ್ವ ನೀಡುವ ರೀತಿ, ಹಾಗೆಯೇ ಕನ್ನಡದ ಮೊದಲ ಪತ್ರಕರ್ತೆಯಾಗಿ ದುಡಿದ ಪರಿಯನ್ನು ವಿವರಿಸಿದ್ದಾರೆ. 'ಕರ್ನಾಟಕ–ನಂದಿನಿ, ಸನ್ಮಾರ್ಗದರ್ಶಿ' ಮುಂತಾದ ಪತ್ರಿಕೆಯಿಂದ ಸಾಧಿಸಿದ ಕೀರ್ತಿ ಒಟ್ಟಾರೆ ಅವರ ಜೀವನ, ಚಿಂತನೆಗಳನ್ನು ವಿವರಿಸುತ್ತಾರೆ. 'ಪತ್ರಕರ್ತೆಯಾಗಿ ರಾಜವಾಡೆ' ಲೇಖನವು ಸಹ ಪತ್ರಕರ್ತೆಯಾಗಿ ಸರಸ್ವತಿಬಾಯಿ– ರಾಜವಾಡೆ 'ಗಿರಿಬಾಲೆ' ಎಂಬ ಕಾವ್ಯನಮದಿಂದ ಓದುಗ ಲೋಕಕ್ಕೆ ಪರಿಚಿತರಾದದ್ದನ್ನು ವಿವರಿಸಿದ್ದಾರೆ. ಸರಸ್ವತಿಬಾಯಿ ಕೂಡ ಪತ್ರಿಕಾರಂಗದಲ್ಲಿ ಬೆಳೆದ ಕ್ರಮವನ್ನು ಈ ಲೇಖನ ಚಿತ್ರಿಸುತ್ತದೆ. ಹಾಗೂ ಕನ್ನಡ ಪತ್ರಿಕಾ ಲೋಕಕ್ಕೆ ರಾಜವಾಡೆಯವರ ಕೊಡುಗೆಯ ಮಹತ್ವವನ್ನು ಇಲ್ಲಿ ಗುರುತಿಸಿದ್ದಾರೆ. 'ತ್ರಿವೇಣಿ' ಒಂದು ಟಿಪ್ಪಣಿಯಲ್ಲಿ ತ್ರಿವೇಣಿಯವರ ಸಾಹಿತ್ಯ ಕುರಿತು ಪರಿಚಯಿಸುತ್ತಾರೆ. ಅದು ಹೆಣ್ಣಿನ ಬದುಕಿನ ನಿಯಂತ್ರಿತ ಕೇಂದ್ರಗಳಾದ ವಿವಾಹ,

ವಿಧವೆ, ಪಾವಿತ್ರ್ಯತೆ ಮೌಲ್ಯಗಳನ್ನು ತಮ್ಮ ಕಾದಂಬರಿಗಳಲ್ಲ ವಿಶ್ಲೇಷಿಸುತ್ತಾ ತ್ರಿವೇಣಿ ಎತ್ತಿರುವ ಪ್ರಶ್ನೆಗಳು ಇಂದೂ ಉಳಿದಿರುವುದು ನೋಡಿದಾಗ ತ್ರಿವೇಣಿ ಇಂದಿಗೂ ಪ್ರಸ್ತುತರಾಗಿದ್ದಾರೆ ಎಂದು ವಿಜಯಾ ಹೇಳುತ್ತಾರೆ. ಒಟ್ಟಾರೆ ಮಹಿಳಾ ಸಾಹಿತ್ಯದ ಚರಿತ್ರೆಯ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾ ಲೇಖಕಿಯ ಸ್ಥಾನ ನಿರ್ಧಾರ ಮಾಡುವ ರೀತಿ ವಿಜಯಾರವರ ಲೇಖನದಲ್ಲಿ ವಿಶಿಷ್ಟವಾಗಿದ್ದು ತ್ರಿವೇಣಿ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಇಂತಹ ಲೇಖನಗಳು ದಾರಿಗಳಾಗುತ್ತವೆ. 'ಚಂದ್ರಾವತಿ ಒಂದು ಪರಿಚಯ' ಈ ಲೇಖನವು ಬಂಗಾಳದ ಜನಪ್ರಿಯ ಕವಯತ್ರಿಯ ಪರಿಚಯವಾಗಿದೆ. ಚಂದ್ರಾವತಿಯ ದುರಂತ ಪ್ರೇಮದ ಕಥೆ ಇದಾಗಿದೆ. ಇಲ್ಲಿ ಆಕೆಯ ಹಾಗೂ ಪ್ರೇಮದ ಘಟನೆಯನ್ನಾಧರಿಸಿ ಜನಪದ ಲಾವಣಿ ಕಟ್ಟಿ ಹಾಡಿವೆ ಎಂದು ಮತ್ತು ಒಂದು ಸಂಸ್ಕೃತಿಯ ಜೀವಂತವಾಗಿ ಚಂದ್ರಾವತಿ ಅವರ ಸಾಹಿತ್ಯಕ ಕೃತಿಗಳಿಂದ ಉಳಿದಿರುವುದನ್ನು ತಿಳಿಸುತ್ತದೆ.

ವಿಜಯಾರವರ 'ನಾರಿ : ದಾರಿ–ದಿಗಂತ' ಕೃತಿಯಲ್ಲಿ ಬಹುಮುಖ್ಯವಾಗಿ 'ಅಕ್ಕ: ಒಂದು ಪರಿಚಯ' ಲೇಖನದಲ್ಲಿ ಸ್ತ್ರೀಯು ವೈಯಕ್ತಿಕ ಸಾಧನೆಗಳಿಂದ ಔನ್ನತ್ಯಕ್ಕೇರಿದ್ದು ಹಾಗೂ ಅಂಥ ವ್ಯಕ್ತಿಗಳು ಭಾಷೆಯ ಮೂಲಕ ಗಮನಾರ್ಹ ಪ್ರಮಾಣದಲ್ಲಿ ಅಭಿವ್ಯಕ್ತಿಗೊಂಡಿದ್ದು ವಚನಯುಗ. ಈ ಸಮಯದ ಕನ್ನಡದ ಮೊದಲ ಕವಯತ್ರಿಯಾದ ಶ್ರೇಷ್ಠ ಅನುಭಾವಿ ಕವಯತ್ರಿ ಅಕ್ಕಮಹಾದೇವಿ. ಇಲ್ಲಿ ವಿಜಯಾ ಅವರು ವಚನಗಳ ಮಹತ್ವವನ್ನು ತಿಳಿಸುತ್ತಾ ಆಕೆಯ ವ್ಯಕ್ತಿತ್ವವನ್ನು ಔನ್ನತ್ಯವನ್ನು ಗುರುತಿಸುವುದು ಅವಳ ವಚನಗಳ ಮೂಲಕವೇ ಕಟ್ಟಿಕೊಡುತ್ತಾರೆ. 'ವಾಸಂತಿಬಾಯಿ ಪಡಕೋಣೆ' ಲೇಖನವು ವ್ಯಕ್ತಿ ಪರಿಚಯದ ಮತ್ತೊಂದು ಉತ್ತಮ ಲೇಖನ ಇಲ್ಲಿ ವಾಸಂತಿಬಾಯಿಯ ಜೀವನ ವೃತ್ತಾಂತ ಸಾಹಿತ್ಯದಲ್ಲಿ ತೊಡಗಿಸಿಕೊಂಡ ಅಂಶವನ್ನು ಹೇಳುತ್ತಾರೆ. ವಿಜಯಾ ಅವರು ಹೇಳುವಂತೆ ಒಬ್ಬ ಲೇಖಕಿಯ ಬದುಕನ್ನು ಪರಿಚಯಿಸುತ್ತಲೆ ಅವರ ಸಾಹಿತ್ಯಕ ಗುಣ ವಿಶೇಷವನ್ನು ಗುರುತಿಸಿ ಸಾಹಿತ್ಯಕ ಮಹತ್ವವನ್ನು ಹೇಳುವಲ್ಲಿ ಇವರ ಚಿಕಿತ್ಸಿಕ ದೃಷ್ಟಿ ಕೆಲಸ ಮಾಡುತ್ತದೆ. ವಾಸಂತಿಯವರ ಬದುಕಿನಾದಿಯಲ್ಲಿ ಇವರ ಒಳಗಿದ್ದ ಕಲಾವಿದೆ ಪೂರ್ಣ ಹೊರಬರಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾರೆ. 'ಆಧುನಿಕತೆಯ ಹೊಸ್ತಿಲಲ್ಲಿ ಕನ್ನಡತಿ' ಲೇಖನದಲ್ಲಿ ತಿರುಮಲಾಂಬರವರಿಗಿಂತ 'ಸದ್ಗುಣಿ ಕೃಷ್ಣಾಬಾಯಿ, ಸುಶೀಲೆ' ಕಾದಂಬರಿ ಬರೆದ 'ಶಾಂತಾಬಾಯಿ ನೀಲಗಾರ' ಎಂಬುವರ ಬಗ್ಗೆ ಹಾಗೂ ಕೃತಿಯ ವಸ್ತು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ವ್ಯಕ್ತಿ ಪರಿಚಯದ ವಿಮರ್ಶಾತ್ಮಕ ಬರಹದಲ್ಲಿ 'ನಯಸೇನ' ಕೃತಿಯು ಕವಿ ನಯಸೇನ ಕವಿಕಾವ್ಯ ವಿಚಾರವನ್ನು ತಿಳಿಸುತ್ತಾರೆ. ಇಲ್ಲಿ ವಿಜಯಾರವರು

ಮೂರು ಅಧ್ಯಾಯ ಮಾಡಿದ್ದು ಕವಿ ಕಾವ್ಯೋದ್ದೇಶದಲ್ಲಿ ಕಾವ್ಯದ ರಚನೆಕಾಲದ ಸಂದಿಗ್ಧ ಪರಿಸ್ಥಿಯೇ ಕಾರಣವಾಗಿದ್ದು ಅದಕ್ಕೆ ಮುನ್ನ ವಿಜಯಾ ಸವಿವರವಾಗಿ ಜೈನ ಪರಂಪರೆ ಕನ್ನಡ ನಾಡಿನಲ್ಲಿ ಬೆಳೆದು ಬಂದದ್ದನ್ನು ಸಂಕ್ಷಿಪ್ತವಾಗಿ ತಿಳಿಸುವ ದಾಟಿ ಅತ್ಯಂತ ಅರ್ಥಪೂರ್ಣ ಎಂಬುದಾಗಿ ಮೊದಲ ಅಧ್ಯಾಯದಲ್ಲೆ ಗುರುತಿಸಬಹುದು. ಹಾಗೂ ಕಥೆಗಳ ಸ್ವರೂಪ –ಆಕರಗಳು, ಭಾಷೆ–ಶೈಲಿಯ ಕುರಿತು ವಿಜಯಾ ಅತ್ಯಂತ ಸರಳ ದಾಟಿಯಲ್ಲಿ ವಿಶ್ಲೇಷಿಸುತ್ತ ಪರಿಚಯಿಸುತ್ತಾರೆ. 'ಅನುಪಮ ನಿರಂಜನ' ಕೃತಿಯು ಸಹ ವಿಮರ್ಶಾ ಕೃತಿಯಾಗಿದೆ. ಸಂಪಾದನೆಯಂತೆ ಕಂಡುಬಂದರು ಸಹ ವಿಜಯಾರವರು ಇಲ್ಲಿ ಅನುಪಮಾರ ಹೋರಾಟದ ಬದುಕಿನ ಬಗೆಗೆ ವಿವರವಾಗಿ ವಿಶದವಾಗಿ ಚರ್ಚೆ ಮಾಡಿದ್ದಾರೆ. ಇವರ ಕತೆ, ಆತ್ಮಕಥನ, ಪ್ರವಾಸ ವೈದ್ಯಕೀಯ ಹಾಗೂ ವೈಚಾರಿಕ ಸಾಹಿತ್ಯವನ್ನು ಕೂಲಂಕಷವಾಗಿ ವಿವೇಚಿಸಿ ನೀಡಿದ್ದಾರೆ.

ಇ) ಮಹಿಳಾ ವಿಮೋಚನೆಗೆ ಸಂಬಂಧಿಸಿದ ಲೇಖನಗಳು:

ವಿಜಯಾ ಅವರ ಸ್ತ್ರೀವಾದಿ ಸೈದ್ಧಾಂತಿಕ ನೋಟದಲ್ಲಿ ಮಹಿಳಾ ಸಬಲೀಕರಣದ ದೃಷ್ಟಿಯು ಹೆಚ್ಚು ಎನ್ನಬಹುದು. ಇಂತಹ ಕಾಳಜಿಯಲ್ಲಿ ಬಹುಮುಖ್ಯವಾಗಿ ಇಂದಿನ ತುರ್ತು ಅನಿವಾರ್ಯ ಎಂಬುದಾಗಿ ಮಹಿಳಾ ವಿಮೋಚನೆಯ ಕುರಿತು ಲೇಖಕಿಯು ವಿವೇಚಿಸುತ್ತಾರೆ. ಆದ್ದರಿಂದ ಸ್ತ್ರೀ ವಿಮೋಚನೆ ಸಮಕಾಲೀನ ಜಗತ್ತಿನ ಅಗತ್ಯ ಮತ್ತು ಚಾರಿತ್ರಿಕ ಅನಿವಾರ್ಯ ಹೀಗಿರುವಾಗ ಮಹಿಳಾ ವಿಮೋಚನೆ ಅಂದರೆ ಸ್ತ್ರೀ ಬಿಡುಗಡೆಯ ಹಾದಿಯ ಬಗ್ಗೆ ಅತ್ಯಂತ ಎಚ್ಚರದಿಂದ ಲೇಖನಗಳಾಗಿ ಪ್ರಚುರಪಡಿಸುತ್ತಾರೆ. ಮೊದಲು ಇದನ್ನು ನಾವು ವಚನಸಾಹಿತ್ಯ ಹಿನ್ನಲೆಯಿಂದಲೇ ಈ ನಿಲುವನ್ನು ಅರಸಬಹುದು. 'ಮಹಿಳಾ ಸಾಹಿತ್ಯ ಸಮಾಜ'ದ 'ವಚನಕಾರ್ತಿಯರು ಒಂದು ವಿಮುಕ್ತಿ ಪದಚಿಂತನ' ಲೇಖನವು ಕನ್ನಡದಲ್ಲಿ ೧೨ನೇ ಶತಮಾನದಲ್ಲಿನ ವೀರಶೈವ ಚಳುವಳಿ ಸ್ತ್ರೀಯನ್ನು ಕುರಿತು ತೋರಿಸಿದ ಗೌರವಾದಾರಗಳನ್ನು ಗಮನಿಸಿ "ಇಂದಿನ ಸ್ತ್ರೀವಿಮೋಚನಾ ಚಳುವಳಿ, ಕೆಲಮಟ್ಟಿಗೆ ರಚನಾತ್ಮಕ ಪ್ರೇರಣೆಯನ್ನು ವಚನ ಚಳುವಳಿಯಿಂದ ಪಡೆಯುವುದು ಸಾಧ್ಯ".[೧] ಎಂಬುದನ್ನು ಆ ಪ್ರೇರಣೆಗಳನ್ನು ವಚನಕಾರ್ತಿಯರಲ್ಲಿ ಹೇಗೆ ಗುರುತಿಸಿಕೊಳ್ಳಬಹುದು ಎಂಬುದನ್ನು ಲೇಖನದಲ್ಲಿ ವಿವರವಾಗಿ ತಿಳಿಸುತ್ತಾರೆ. ಅಂದರೆ ಸ್ತ್ರೀ ಸ್ವಾತಂತ್ರ್ಯದ ಸ್ವರೂಪ ಎಂಥದ್ದು ಎಂಬುದನ್ನು ವಿವರಿಸುತ್ತಾ ಜೈನ, ಬೌದ್ಧ ಮತಗಳು ಸ್ತ್ರೀ ಜನ್ಮಕ್ಕೆ ಮುಕ್ತಿಯೇ ಇಲ್ಲ ಎನ್ನುತ್ತಿದ್ದಾಗ,

---

೧. ಮಹಿಳೆ ಸಾಹಿತ್ಯ ಸಮಾಜ, ವಿಜಯಾದಬ್ಬೆ, ಪ್ರ.ರಚನಾ ಪ್ರಕಾಶನ,ಮೈಸೂರು,೧೯೯೮ ಪು.೨೦

ಆತ್ಮಕ್ಕೆ ಗಂಡು ಹೆಣ್ಣಿನ ರೂಪವಿಲ್ಲ ಸಾಧನೆ ಮಾಡುವ ಜೀವಿ ಹೆಣ್ಣಾದರೇನು ಗಂಡಾದರೇನು ಎಂಬ ಧೋರಣೆಯಿಂದ ತಾಂತ್ರಿಕ, ನೈತಿಕ ನೆಲೆಯನ್ನು ಆಂದೋಲನ ನೀಡುವುದನ್ನು ವಿಜಯಾ ಅವರು ಗುರುತಿಸುತ್ತಾರೆ. ವಿಮೋಚನೆಯ ಹಾದಯಲ್ಲಿ ನಾರಿ:ದಾರಿ–ದಿಗಂತ ಕೃತಿಯಲ್ಲಿ 'ವಿಮೋಚನೆ, ಆಲೋಚನೆಯೂ' ಲೇಖನದಲ್ಲಿ ಸ್ತ್ರೀವಿಮೋಚನೆಯ ಬಗ್ಗೆ ತೀವ್ರ ಕಾಳಜಿಯಿರುವ ವಿಜಯಾ ಅವರು ಸ್ತ್ರೀ ಬಿಡುಗಡೆಯ ಸಾಧ್ಯತೆಯನ್ನು ಗುರುತಿಸುವ ವೈಚಾರಿಕತೆ ಅನನ್ಯ. 'ಮಹಿಳೆ, ಜಾತಿ, ವರ್ಣ, ವರ್ಗ, ಜನಾಂಗಗಳಲ್ಲಿ ಹಂಚಿ ಹೋಗಿರುವುದರಿಂದ ಮಹಿಳೆಯ ಸಮಸ್ಯೆಯನ್ನು ಸುಧಾರಣೀಕರಣಗೊಳಿಸಲಾಗುವುದಿಲ್ಲ. ಆದ್ದರಿಂದ ಕಪ್ಪು ಮಹಿಳೆ, ಮುಸ್ಲಿಂ ಮಹಿಳೆ, ದಲಿತ ಮಹಿಳೆ ಹೀಗೆ ವಿಭಾಗಿಸಿಕೊಂಡೇ ಸಮಸ್ಯೆಯನ್ನು ನೋಡಬೇಕು ಎನ್ನುತ್ತ ನಗರ– ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು ಬೇರೆಯಾಗಿ ನೋಡುತ್ತ ಗ್ರಾಮೀಣ ಮಹಿಳೆಯ ಪರಿಸ್ಥಿತಿಯ ಅಸಹಾಯಕವಾಗಿರುವುದನ್ನು ಇಲ್ಲಿ ಮನಗಾಣಿಸಿದ್ದಾರೆ. **'ಮಧ್ಯಯುಗೀನ ಭಾರತೀಯ ಮಹಿಳೆ: ಕೆಲವು ವಿಚಾರಗಳು'** ಲೇಖನದಲ್ಲಿ ವಿಜಯಾ ಅವರು ಮಹಿಳಾ ವಿಮಾಚನೆಯ ದೃಷ್ಟಿಕೋನದಿಂದ ಭಾರತೀಯ ಪರಂಪರೆಯಲ್ಲಿ ಮಹಿಳಾ ಜೀವನವನ್ನು ಹೇಗೆ ಗಮನಿಸಬೇಕೆಂದು ತಿಳಿಸುತ್ತಾರೆ. ಅಂದರೇ ಮಾನವ ಚರಿತ್ರೆಯಲ್ಲಿ ಕಾಲ–ಕಾಲಕ್ಕೆ ಸ್ತ್ರೀ ವಿಧಿನಿಷೇಧಗಳ ಹಿಡಿತಕ್ಕೆ ಸಿಕ್ಕಿ, ತನ್ನ ಹಕ್ಕುಗಳನ್ನು ಕಳೆದುಕೊಳ್ಳುತ್ತಾ ಹೋಗಿರುವುದನ್ನು ವಿಷಾದಪಡಿಸುತ್ತಾರೆ. 'ವೈಯಕ್ತಿಕ ಕಾನೂನಿಕ ಸುಳಿಯಲ್ಲಿ ಮಹಿಳೆ' ಲೇಖನವು ಮಹಿಳೆಗೆ ಮೂಲಭೂತ ಕೋಮುವಾದದಿಂದ ಮೂಲಭೂತ ಧರ್ಮನಿರಪೇಕ್ಷತೆಯು ಪಟ್ಟುಪಡೆಯುತ್ತದೆ ಇದರಿಂದ ಮಹಿಳಾ ಸಂಬಂಧಿ ಸಮಸ್ಯೆಗಳು ಕಾನೂನಿನ ಕಾರಣದಿಂದಲೇ ಹಿಂದೂ, ಮುಸ್ಲಿಂ, ವೈಯಕ್ತಿಕತೆಯಿಂದ ಅನ್ಯಾಯಗಳು ಕಾನೂನಿನಲ್ಲು ಹಾಗೆ ಉಳಿಯುತ್ತವೆ ಎಂದು ವಿವರಿಸುತ್ತಾರೆ. 'ಹಿಂದೂವಿಧವೆ ಆಕೆಯ ಬದಲಾಗುತ್ತಿರುವ ಸ್ಥಾನಮಾನದಲ್ಲಿ ವಿಮೋಚನೆಯ ಹಾದಿಯಾಗಿ ಹಿಂದೂ ವಿಧವೆಯ ಪರಿಸ್ಥಿತಿ ಕಾಲಕಾಲಕ್ಕೆ ಬದಲಾವಣೆ ಹೊಂದಿರುವುದರ ಕಾರಣವನ್ನು ಶಿಕ್ಷಣ ಮತ್ತು ಆರ್ಥಿಕ ಭದ್ರತೆಯಿಂದ ಎಂದು ಗುರುತಿಸಿದ್ದಾರೆ. 'ವಿಶ್ವಸುಂದರಿಗೆ ನಮನ', 'ಹೆಣ್ಣಿಗೆ ಹೆಣ್ಣೇ ಶತ್ರು' ಲೇಖನಗಳು ಪುರುಷನಿಷ್ಠ ನೆಲೆಯ ದೃಷ್ಟಿಯಿಂದ ನೋಡಬೇಕಾದ ಪರಿಸ್ಥಿತಿಯನ್ನು ವಿರೋಧಸುತ್ತ ವೈಚಾರಿಕ ಸ್ತ್ರೀವಾದಿ ನೆಲೆಯಿಂದ ಹಾದಿಯನ್ನು ಸ್ತ್ರೀಯೇ ಸೂಕ್ಷ್ಮವಾಗಿ ಕಂಡುಕೊಳ್ಳಬೇಕಿದೆ ಎಂಬುದನ್ನು ವಿಚಾರವಾಗಿ ತಿಳಿಸುತ್ತಾರೆ. ಬಿಡುಗಡೆಯ ವೃತ್ತದಲ್ಲಿ 'ಪತ್ರಿಕೋದ್ಯಮ ಮತ್ತು ಮಹಿಳಾ ಚಳುವಳಿಗಳು' ಲೇಖನವು "ಮಹಿಳಾ ದೃಷ್ಟಕೋನದ

ತಾತ್ವಿಕತೆ, ಒಂದು ಸೈದ್ಧಾಂತಿಕ ನಿಲುವು ಪತ್ರಿಕೆಗಳಿಗಿರಬೇಕು. ಮಹಿಳೆಯರನ್ನು ಕುರಿತ ಸಾಂಪ್ರದಾಯಿಕ ಭೋಗ ದೃಷ್ಟಿ ಮತ್ತು ಸ್ತ್ರೀವಾದ ಒಟ್ಟಿಗೆ ಹೋಗುವುದು ಸಾಧ್ಯವಿಲ್ಲ" ಎಂಬುದನ್ನು ಉಗ್ರವಾಗಿ ಖಂಡಿಸುತ್ತಾ ಪತ್ರಿಕೆಯಲ್ಲಿ ದೊರಕಬೇಕಾದ ಸ್ತ್ರೀಸ್ಥಾನಮಾನದ ಬಗ್ಗೆ ತಿಳಿಸುತ್ತಾರೆ.

'ಮಹಿಳಾ–ಮಾನವತೆ' ಕೃತಿಯಲ್ಲಿನ 'ಮಹಿಳಾವಿಮೋಚನೆ ಮತ್ತು ಶಿಕ್ಷಣ'ದಲ್ಲಿ ಹಾಗೂ 'ವರದಕ್ಷಿಣೆಯ ಸಮಸ್ಯೆ ಮತ್ತು ಗಾಂಧೀಜಿ' ಲೇಖನದಲ್ಲಿ ಮುಖ್ಯವಾಗಿ ವಿಮೋಚನೆ ಚಿಂತನೆಯಾಗಿ ವಿಜಯಾರವರು ತಿಳಿಸುವುದು "ವಿವಾಹದ ಮೂಲಕ ಪುರುಷನ ಆಶ್ರಯದಲ್ಲಿ ಮಹಿಳೇಗೆ ಭದ್ರತೆ ಇದೆಯೆಂಬ ಹಾಗೂ ಅದೇ ಆಕೆಯ ಗುರಿಯಾಗಬೇಕೆಂಬ ಧೋರಣೆ ನಾಶವಾಗಬೇಕು" ಎಂದು ಹಾಗೂ ಪೂರಕವಾಗಿ ಗಾಂಧೀಜಿ ಹರಿಜನ ಯಂಗ್ ಇಂಡಿಯಾಗಳಲ್ಲಿ ಬರೆದ ಬರಹಗಳನ್ನು ಕೋಟ್ ಮಾಡುತ್ತಾ ಯಾವ ಹೆಂಗಸಿಗೂ ಜೀವನ ಭದ್ರತೆ ಮದುವೆಯಲ್ಲಿ ಇಲ್ಲವೆಂದು ತಿಳಿಸುತ್ತಾರೆ. 'ಮೌಲಿಕ ಬದಲಾವಣೆ ಮತ್ತು ಮಹಿಳೆ', ಜಾಹಿರಾತಿನಲ್ಲಿ ಹೆಣ್ಣು, ಕಾರಾಗೃಹದೊಳಗಿನ ಕಾರಾಗೃಹ, ಹೀಗೆ ಹಲವು ವಿಚಾರ ಸರಣಿಯಲ್ಲಿ ಮಹಿಳೆಯರೇ ಬದಲಾವಣೆಗೆ ಕಾರಣರಾಗದೆ ಇರುವುದು ಸಮಾಜ ಜಾಹಿರಾತಿನ ದೃಷ್ಟಿಯಿಂದ ಹೆಣ್ಣನ್ನು ಕಾಣುತ್ತಿರುವ ಪರಿ ಹಾಗೂ ಮಹಿಳೆಯರ ಅಪರಾಧಗಳ ಹಿಂದೆ ಇರುವ ಜಾತಿ ತಾರತಮ್ಯ ಇದರಿಂದ ಮಹಿಳಾ ಖೈದಿಗಳಿಗೆ ಸಲ್ಲಬೇಕಾದ ನ್ಯಾಯ ಸಲ್ಲಿಸಬೇಕಾದ ಅನಿವಾರ್ಯತೆ ವಿಚಾರಗಳ ಬಗ್ಗೆ ಚಿಂತನೆಯನ್ನು ಮಹಿಳಾ ಪರ ವಿಮೋಚನೆಯ ಹಾದಿಯಲ್ಲಿ ವಿಜಯಾ ಅವರು ವಿವರಿಸುತ್ತ ವಿವೇಚಿಸುತ್ತಾ ಸಾಗಿರುವ ಮಾರ್ಗ ವಿಶಾಲವಾದದ್ದು, ಇದು ಪುಟದ ಮಿತಿಗೆ ಸಿಲುಕದ ಅನಂತ ವಲಯಗಳ ಗಂಭೀರವಾದ ಸರಣಿ ಅನ್ನಬಹುದು.

ಒಟ್ಟಾರೆ ವಿಜಯಾ ಅವರ ಎಲ್ಲಾ ವಿಮರ್ಶಾ ಲೇಖನಗಳಲ್ಲಿನ ಮುಖ್ಯ ತಾತ್ವಿಕತೆಯ ವಿಚಾರಧಾರೆ ಎಂದರೆ ಮಹಿಳಾ ಪರ ಪ್ರೀತಿ ಕಾಳಜಿ ಒಳಗೊಂಡ ಒಂದು ಸಮಗ್ರ ಮಾನವತೆಯ ತುಡಿತದ ದೃಷ್ಟಿ ನೆಲೆಗೊಳ್ಳಬೇಕಿದೆ ಎಂಬುದು ಅವರ ಮಾನವ ಪರತೆಯ ಆಶಯ ಅಂದುಕೊಳ್ಳಬಹುದು.

ಇ) ಸಂಶೋಧಕಿ – ಸಂಪಾದಕಿಯಾಗಿ

ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನದ ಅರಿವಿನ ಎಲ್ಲೆಗಳನ್ನು ಅಂದಿನಿಂದ ಇಂದಿನವರೆಗೂ ವೀಕ್ಷಿಸುತ್ತಾ ಸಾಗಿದರೆ ಸಂಶೋಧನೆ ಮತ್ತು ಸಂಪಾದನೆಯ ಕ್ಷೇತ್ರದಲ್ಲಿ ವ್ಯಕ್ತವಾಗಿರುವ ಸಾಧನೆ ಸಿದ್ಧಿಗಳು ಹಲವು ಬೆರಗು ಹುಟ್ಟಿಸುತ್ತದೆ. ಅನಂತ ಮಜಲುಗಳ ಸಾಹಿತ್ಯ ಚರಿತ್ರೆಯ ವೈವಿಧ್ಯತೆಯಿಂದ, ಇದರ ಹಿಡಿತ ಸುಲಭಸಾಧ್ಯವಿಲ್ಲ ಆದ್ದರಿಂದ ಇವುಗಳ ಮರೆಯಾದ, ದೊರಕದೆ ಕಣ್ಮರೆಯಾಗಬಹುದಾದ ಸಂದರ್ಭದಲ್ಲಿ ಅಂತವುಗಳ ವಿಷಯವನ್ನು ಸಂಶೋಧನೆ ಮೂಲಕ ದಾಖಲಿಸುತ್ತ ಹಾಗೇ ಸಂಪಾದಿಸಿ, ಕ್ರೂಢೀಕರಿಸಿ ನೀಡಿರುವ ಸಂಗ್ರಹದಂತ ಸಂಪಾದನೆಯ ಕೆಲಸಗಳನ್ನು ಮಾಡಿದ ಅಪಾರ ಶ್ರಮದಾಯಕ ಹೊಂದಿದಂತ ಸಾಧಕರ ಸಾಲಿನಲ್ಲಿ ಅದರಲ್ಲೂ ಮಹಿಳಾ ಸಾಧಕರ ಹಾದಿಯ ಬೆರಳೆಣಿಕೆಯಷ್ಟೇ ಸಂಖ್ಯೆವ್ಯಕ್ತಿಗಳ ನಡುವೆ ಗುರುತಿಸಿಕೊಳ್ಳುವ ಸಂಶೋಧಕಿ–ಸಂಪಾದಕಿ ಎಂದರೆ ಡಾ.ವಿಜಯಾದಬ್ಬೆ ಅವರು.

ಸಂಶೋಧನೆ ಎಂಬುದು ವ್ಯಕ್ತಿಯ ಅಧ್ಯಯನ ಶಿಸ್ತುಗಳ ಹಾದಿಯಲ್ಲಿ ವಿಚಾರಶಕ್ತಿಯ ಹೊಳವುಗಳ ಮೂಲಕ ವಿಷಯವನ್ನು ಶೋಧನೆಯ ಮೂಲಕ ಒರಗೆ ಹಚ್ಚಿ ಸಮೂಲಾಗ್ರವಾಗಿ ನೀಡುವ ಒಂದು ಶ್ರಮಚಿಂತನೆ ಕಾರ್ಯ ಇಂತಹ 'ಸಂಶೋಧನೆ' ಯನ್ನು ವಿಜಯಾ ಅವರು ಅತ್ಯಂತ ಆಸಕ್ತಿಯ ಹವ್ಯಾಸದಂತೆ ಎಚ್ಚರಿಕೆಯಿಂದ ವಿಚಾರವನ್ನು ಶೋಧಿಸಿ ನೀಡಿರುತ್ತಾರೆ. ಕನ್ನಡ ಸಾಹಿತ್ಯರಾಶಿಗೆ ಅವುಗಳನ್ನು ಕಂಡಾಗ ಸಂಖ್ಯೆ ಕಡಿಮೆಯಾದರು ಸಾಧನೆ ಅಪಾರ ವಿಜಯಾ ಅವರ 'ಸಂಶೋಧನೆ' ಕೃತಿಗಳಾಗಿ ಮೂರನ್ನು ಗುರುತಿಸಬೇಕಾಗುತ್ತದೆ. ಅವುಗಳೆಂದರೆ 'ನಾಗಚಂದ್ರ–ಒಂದು ಅಧ್ಯಯನ'– ೧೯೮೨, 'ಹಿತೈಷಿಣಿಯ ಹೆಜ್ಜೆಗಳು'– ೧೯೯೨, 'ಸಾರಸರಸ್ವತಿ'–೧೯೯೬ ಈ ಮೂರು ಸಂಶೋಧನಾತ್ಮಕ ಸಂಪಾದನ ಗ್ರಂಥಗಳು ಹಾಗೇ ಸಂಪಾದಕಿಯವಾಗಿ ಶುದ್ಧಗ್ರಂಥ ಸಂಪಾದನೆಯಂತ ಕಾರ್ಯದಲ್ಲಿ ತೊಡಗಿಕೊಂಡಿರುವುದು ವಿಜಯಾ ಅವರ ಮತ್ತೊಂದು ಸಾಹಿತ್ಯ ಸೇವೆಯ ಮೆಟ್ಟಿಲು ಅಂದರು ತಪ್ಪಲ್ಲ. ಕಾರಣ ಸಂಪಾದನೆ ಎಂಬುದು ಹಲವಾರು ಸಾಹಿತ್ಯ ಮತ್ತು ಶಾಸ್ತ್ರ ಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ ವಿಸ್ತಾರವಾದ ಪೀಠಿಕೆಗಳನ್ನು ಬರೆದು ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ ಅವುಗಳ ಸಾಹಿತ್ಯಿಕ ಮೌಲ್ಯಗಳನ್ನು ಪರಿಶೀಲಿಸಿ ಅಗತ್ಯವಾದಲ್ಲಿ ಟಿಪ್ಪಣಿ, ವ್ಯಾಖ್ಯಾನಗಳನ್ನು ನೀಡಿ ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದ ಅರ್ಥಕೋಶ ನೀಡಿ ಬೆಳಕಿಗೆ ತರುವ ಕೆಲಸ. ಇಂತಹ ಕಾರ್ಯವನ್ನು ಮಾಡುವಾಗ "ಗ್ರಂಥ ಸಂಪಾದನೆ ಶ್ರಮ ಸಾಧ್ಯವಾದ ಕಾರ್ಯ ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು

ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯ ಅಗತ್ಯವಾಗುತ್ತದೆ".[೧] 'ಸಾನಂದ ಗಣೇಶ ಸಾಂಗತ್ಯ' ಕೃತಿಯ ಮುನ್ನುಡಿಯಲ್ಲಿ ಹಾ.ಮಾ.ನಾಯಕರು ಹೇಳಿರುವ ಮಾತುಗಳು ಈ ಮಾರ್ಗದಲ್ಲಿ ಸಾಗಿದ ವಿಜಯಾ ಅವರ ವಿದ್ವತ್ತಿಗೆ ಕೈಗನ್ನಡಿ ಅಥವಾ ಸಾಕ್ಷ್ಯ ಅಂದುಕೊಂಡರು ಅಪವಾದವಾಗಲಾರದು. ಸಂಪಾದನೆಯ ಕಾರ್ಯದಲ್ಲಿ ವಿಜಯಾದಬ್ಬೆ ಅವರು 'ಸಾನಂದಗಣೇಶ ಸಾಂಗತ್ಯ'-೧೯೭೬, 'ಶ್ಯಾಮಲಾ ಸಂಚಯ'-೧೯೮೮, 'ನಾಗಚಂದ್ರ'-೧೯೯೬, 'ಲೋಕ-ಲೇಖ'-೧೯೯೮, ಸಂಪಾದಿಸಿದಂತ ಕೃತಿಗಳಾಗಿವೆ. ಈ ರೀತಿಯಾಗಿ ಸಂಶೋಧನೆ-ಸಂಪಾದನೆಯ ಮೂಲಕ ನೀಡಿದ ಕೃತಿಗಳ ವಸ್ತು ವೈವಿಧ್ಯತೆ, ವಿಷಯ ಅವಲೋಕಿಸುವ ವಿಚಾರ ಪರತೆಯನ್ನು ಕೃತಿಗಳ ಸಾಹಿತ್ಯ ಅಭ್ಯಾಸದಿಂದ ಕಾಣಬೇಕು.

'ನಾಗಚಮದ್ರ- ಒಂದು ಅಧ್ಯಯನ'- ವಿಜಯಾದಬ್ಬೆ ಅವರ ಈ ಸಂಶೋಧನ ಗ್ರಂಥವು ಡಾಕ್ಟರೇಟ್ ಪದವಿಗಾಗಿ ಸಿದ್ಧಪಡಿಸಿದ್ದಾಗಿದೆ. ಇದು ೧೯೮೩ರಲ್ಲಿ ಹಂಪನಾ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಬೆಳ್ಳಿ ಬಿಟ್ಟ ಬಳ್ಳಿ' ಮಾಲಿಕೆಯಲ್ಲಿ ಕನ್ನಡಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಗ್ರಂಥವು ಕವಿಕೃತಿ ಹಿನ್ನೆಲೆ, ಮಲ್ಲಿನಾಥಪುರಾಣ ವಿಶ್ಲೇಷಣೆ, ಪಂಪರಾಮಾಯಣ ವಿಶ್ಲೇಷಣೆ, ಸಮಾರೋಪ ಹೀಗೆ ಒಟ್ಟು ನಾಲ್ಕು ಅಧ್ಯಾಯಗಳಿವೆ. 'ಹಾಮಾನಾ' ಅವರ ಮಾರ್ಗದರ್ಶನದ ಕೃತಿಯು ಸವಿವಿಸ್ತಾರ ವಿದ್ವತ್ ಪ್ರತಿಭೆಯಿಂದ ಬಂದಿದೆ.

ಪ್ರಾಚೀನ ಕವಿಗಳ ಕಾಲ ನಿರ್ಣಯದ ದ್ವಂದ್ವ ಸಾಮಾನ್ಯವಾಗಿರುವ ಸಂಗತಿ ಅಂತೇ ನಾಗಚಂದ್ರ ತನ್ನ ಎರಡೂ ಕೃತಿಗಳ ರಚನಾ ಕಾಲ ಉಲ್ಲೇಖವಿಲ್ಲದಿರು-ವುದರಿಂದ ಈ ಬಗ್ಗೆ ವಿಪುಲವಾದ ಜಿಜ್ಞಾಸೆ ನಡೆದಿದೆ. ಮೊದಲಿಗೆ ಬಿ.ಎಲ್, ರೈಸ್. ಕೆ.ಬಿ.ಪಾಠಕ್. ಆರ್. ನರಸಿಂಹಾಚಾರ್, ಆರ್.ಸಿ. ಹಿರೇಮಠ, ಸಿ.ಪಿ.ಕೆ., ಆರ್.ಎಸ್. ರಾಮರಾಮ್ ಇಂತಹ ವಿದ್ವಾಂಸರುಗಳ ಚರ್ಚೆಗಳ ಆಧಾರದಿಂದ ವಿವೇಚಿಸಿ ನಂತರ ನಾಗಚಮದ್ರನ ಕಾಲದ ಬಗ್ಗೆ ಮುಖ್ಯವಾಗಿ ಕಣ್ಣೂರು, ಶ್ರವಣ ಬೆಳಗೊಳ, ವಿಜಾಪುರದ ಶಾಸನಗಳ ಪರಿಶೀಲಿಸಿ ನಾಗಚಂದ್ರನ ಕೃತಿ ರಚನಾ ಕಾಲದ ವಿಸ್ತಾರವನ್ನು ಕ್ರಿ.ಶ. ೧೦೫೦ರ ನಂತರ ಮತ್ತು ಕ್ರಿ.ಶ. ೧೧೦೦ರ ಒಳಗೆ ಎಂದು ಗುರುತಿಸುತ್ತಾರೆ. ನಂತರ ಸ್ಥಳದ ಬಗ್ಗೆಯು ಆಳವಾದ ಅಭ್ಯಾಸದಿಂದ ವಿಜಯಾ ಅವರು ಗೋವಿಂದಪೈ, ಡಿ.ಎಲ್. ನರಸಿಂಹಚಾರ್‌ರ ಹೇಳಿಕೆಯನ್ನು ಅನುಸರಿಸದೆ ಉತ್ತರ ಕರ್ನಾಟಕದ

---

೧. ಓದುವಗಿರಿಯ ವಿರಚಿತ ಸುನಂದ ಗಣೇಶ ಸಾಂಗತ್ಯ, ಸಂ.: ಡಿ. ವಿಜಯ ಆರ್.ಎಸ್.ವಿಜಯಲಕ್ಷ್ಮೀ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೧೯೭೬.

ವಿಜಾಪುರವೇ ನಾಗಚಂದ್ರನ ವಿಜಯಪುರ ಎಂಬುದನ್ನು ಹಲವಾರು ಸಾಕ್ಷ್ಯಾಧಾರದಿಂದ ಸಾದರ ಪಡಿಸುತ್ತಾರೆ. ನಂತರ ನಾಗಚಂದ್ರನ ಬದುಕನ್ನು ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಿ ಯಾವ ರಾಜಾಶ್ರಯದ ಒತ್ತಡವಿಲ್ಲದ ಸ್ವತಂತ್ರ ಕವಿ ಎಂದು ಸಾಧಾರವಾಗಿ ಹೇಳುತ್ತಾರೆ. ವಿಜಯಾದಬ್ಬೆ ನೀಡುವ ನಾಗಚಂದ್ರನ ಕಾಲದ ಜೈನಧರ್ಮದ ಪರಿಸ್ಥಿತಿಯ ವಿಶ್ಲೇಷಣೆಯಿಂದ ನಾಗಚಂದ್ರನಲ್ಲಿ ಕಟ್ಟಾ ಧಾರ್ಮಿಕ ಮನೋಭಾವದ ಗಟ್ಟಿತನ ರೂಪುಗೊಂಡಿರುವ ಹಿನ್ನಲೇ ವ್ಯಕ್ತವಾಗುತ್ತದೆ. ನಾಗಚಂದ್ರನ ವ್ಯಕ್ತಿತ್ವವನ್ನು ಕುರಿತು ವಿಜಯಾರವರು ಆತನ ಹೇಳಿಕೆಯಿಂದ, ಬಾಹ್ಯ ಸಾಕ್ಷ್ಯಗಳಿಂದ ಮೃದು ಬಿರುಕಿಲ್ಲದ ಜಿನನಿಷ್ಠೆ, ತತ್ವನಿಷ್ಠೆ ವ್ಯಕ್ತಿತ್ವವನ್ನು ಹಾಗೂ ಪಾಂಡಿತ್ಯಯುತ ಕವಿತಾ ಶಕ್ತಿ ವಿನಯಪೂರ್ವವಾದ ಗುರುಪರಂಪರೆಯ ಪೂಜ್ಯ ನಿಷ್ಠೆಯ ಬಗ್ಗೆ ನಿರೂಪಿಸುತ್ತಾರೆ. ಹಾಗೂ ಕೃತಿಗಳ ಬಗ್ಗೆ ಚರ್ಚಿಸುವ ವಿಜಯಾ ಅವರು 'ಮಲ್ಲಿನಾಥಪುರಾಣ' ಮತ್ತು 'ಪಂಪರಾಮಾಯಣ' ಎರಡು ಮಾತ್ರ ಎಂದು ನಿರೂಪಿಸಿದ್ದಾರೆ.

ಎರಡನೇ ಅಧ್ಯಾಯದಲ್ಲಿ 'ಮಲ್ಲಿನಾಥನ ಪುರಾಣ'ದ ಕಥಾ ವಸ್ತುವನ್ನು ಸ್ಥೂಲವಾಗಿ ವಿವರಿಸಿ ಈ ಪುರಾಣದ ಆಕರಗಳ ಕುರಿತು ಕೂಲಂಕಷವಾಗಿ ವಿವೇಚಿಸಿ ನಾಗಚಂದ್ರನು ಉತ್ತರ ಪುರಾಣದಿಂದ ಕಥಾವಸ್ತುವನ್ನು ತೆಗೆದುಕೊಂಡರು ಮೂಲಕ್ಕೆ ಸ್ವತಂತ್ರಪುರಾಣದ ಸ್ಥಾನ ದೊರಕುವಂತೆ ರೂಪು ನೀಡಿರುವುದನ್ನು ಸೋದಹರಣವಾಗಿ ವಿವರಿಸುತ್ತಾರೆ. ಮತ್ತು ಕೃತಿ ವಸ್ತು ಮಹತ್ವ ಕುರಿತು ಸನ್ನಿವೇಶ ವಿಶ್ಲೇಷಣೆಯಿಂದ ಮನುಷ್ಯ ಮನಸ್ಸಿನ ಸ್ಥಿತಿಗಳನ್ನು ಸಮರ್ಥ ವಿವರದೊಡನೆ ಮುಂದಿಡುವ ತಾಳ್ಮೆಯಿದ್ದಿದ್ದರೆ ಇದರಿಂದ ಆತನ ಪಾತ್ರಗಳ ಆಳ ಅಗಲಗಳ ವಿಸ್ತಾರಗೊಂಡು ಕಾವ್ಯ ಪ್ರಭಾವ ಬೀರುತ್ತಿತ್ತು ಎಂದು ಅಭಿಪ್ರಾಯಿಸುತ್ತಾರೆ ವಿಜಯ ಅವರು ನಂತರ ವಿವೇಚನೆಯ ಮುಖ್ಯ ಅಂಶವೆಂದರೆ ಜೈನ ಪರಂಪರೆಯ ಹಿನ್ನಲೆಯಿಂದ ಕಾಮದಹನದ ಪ್ರಸಂಗವು ತಿರುವು ಹೊಂದಿದ್ದರು ಸಹ ಕೆಲವು ಸಂದಿಗ್ಧತೆ, ವಿರೋಭಾಸದಿಂದ ರಸಭಂಗ ವಿಶ್ಲೇಷಿಸುವ ಲೇಖಕಿಯು 'ಪ್ರಚಲಿತ' ನಂಬಿಕೆಗೆ ಮತ್ತೊಂದು ರೂಪ ಕೊಡುವಲ್ಲಿ ಕವಿ ಹೆಚ್ಚು ಎಚ್ಚರದಿಂದ ಇರಬೇಕಿತ್ತು ಎಂದು ಅಭಿಪ್ರಾಯಪಡುತ್ತಾರೆ.

ತೀರಾ ತೆಳುವಾದ ಕಥಾಂಶವನ್ನು ನಿರ್ಮಿಸಿ ಹೇಳುವಾಗ ಕಾವ್ಯ ಆಕೃತಿ ಹೇಗೆ ಜಾಳು ಜಾಲಾಗುತ್ತದೆಂಬುದನ್ನು ನಿರೂಪಿಸಿ ಶ್ರೀಧರ, ರತಿ, ಮದನ, ಇಂತಹ ಪಾತ್ರ ವಿಶ್ಲೇಷಣೆ ಮಾಡುತ್ತಾರೆ ಹಾಗೂ ಕಾವ್ಯರಸದ ಬಗ್ಗೆ ನಾಗಚಂದ್ರನು

ಅಳವಡಿಸಕೊಳ್ಳಬೇಕೆಂದ 'ಶಾಂತರಸ' ಪೂರ್ಣವಾಗಿ ಪ್ರತಿಪಾದಿತವಾಗಿಲ್ಲ ಎಂಬುದನ್ನು ಮನನ ಮಾಡುತ್ತಾರೆ.

ಮೂರನೇ ಅಧ್ಯಾಯವು ಪಂಪರಾಮಾಯಣ ವಿಶ್ಲೇಷಣೆಯಾಗಿದ್ದು ಇಲ್ಲಿ ರಾಮಾಯಣವು ಹಲವು ಧರ್ಮಗಳಲ್ಲಿ ಬಂದಿರುವ ರೂಪವನ್ನು ಸೂಕ್ಷ್ಮವಾಗಿ ತೌಲನಿಕ ಅಧ್ಯಯನ ನಡೆಸಿ ಜೊತೆಗೆ ಟಿಬೇಟ್, ಇಂಡೋನೇಷ್ಯಾ, ಕಾಂಬೋಡಿಯಾ, ಜಾವಾ, ಬರ್ಮಾ ಮುಂತಾದ ದೇಶಗಳಲ್ಲಿ ರಾಮಾಯಣವು ಪಡೆದಿರುವ 'ತಿಬತೀರಾಮಾಯಣ' ಖೋತಾನಿ ರಾಮಾಯಣ, ರಾಮಾಯಣಕಡವಿನ, 'ಸೀತಾರಾಮ', ರಾಮಕೀರ್ತಿ ಇತ್ಯಾದಿ ರೂಪಾಂತರಗಳ ವಿವೇಚನೆಯನ್ನು ನಡೆಸುತ್ತಾರೆ. ಇಲ್ಲಿ ವಿಜಯಾ ಅವರ ಸಂಶೋಧನೆಯ ಆಳದ ತೀವ್ರತೆಯು ಬುಡಕಟ್ಟು ರಾಮಾಯಣದ ವೈವಿಧ್ಯಗಳ ಸಮಗ್ರ ರೂಪಗಳನ್ನು ಸವಿಸ್ತಾರವಾಗಿ ದರ್ಶನವಾಗಿಸುತ್ತಾರೆ. ನಂತರ 'ಪಂಪರಾಮಾಯಣ' ವನ್ನು ಸೂಕ್ಷ್ಮ ಅಧ್ಯಯನ ಕೈಗೊಳ್ಳುವ ವಿಜಯಾದಬ್ಬೆ ನೀಡುವ ಕಾವ್ಯದ ಬಹು ಮುಖ್ಯ ಸನ್ನಿವೇಶಗಳ ಸೂಕ್ಷ್ಮ ಪರಿಚಯ ಹಾಗೂ ಪಾತ್ರ ಸೃಷ್ಟಿಯ ಸಮಗ್ರ ವಿವೇಚನೆಗಳು ಪಂಪರಾಮಾಯಣದ ಅಧ್ಯಯನಕ್ಕೆ ಸೂಕ್ತ ಆಧಾರವಾಗುತ್ತದೆ. ನಾಗಚಂದ್ರನ ಬರವಣಿಗೆಯ ಛಂದ ಲಕ್ಷಣವನ್ನು ಸಾಕಷ್ಟು ವಿಸ್ತಾರವಾಗಿ ಅಧ್ಯಯನ ಮಾಡಿರುವ ವಿಜಯಾದಬ್ಬೆ ನಾಗಚಂದ್ರನ ಶೈಲಿ ಸರಳವಾಗಿರುವುದು ಸಹಜವಾದರೂ ಕಾವ್ಯ ಸೃಷ್ಟಿ ಮುಕ್ತವಾಗಿರದಿದ್ದ ಕಾಲದಲ್ಲೇ 'ನಾಗಚಂದ್ರ ಸರಳ ಮಾರ್ಗ ಆಯ್ದುಕೊಂಡದ್ದರ ಗಮನಾರ್ಹತೆಯನ್ನು ತೆರೆದಿಡುತ್ತಾರೆ. ಆದರೆ ಸರಳತೆಯೇ ಅತಿಯಾದ ಕಾರನದಿಂದ ಕಾವ್ಯ ಎಷ್ಟೋ ಕಡೆ ವರದಿಯ ರೂಪ ತಾಳಿರುವುದನ್ನು ಅಲ್ಲಲ್ಲಿ ಧ್ವನಿಹೀನ ಸ್ಥಿತಿಯ ಬಗ್ಗೆ ನಿರೂಪಿಸುತ್ತಾರೆ. ಇದರಿಂದ ಒಟ್ಟಾರೆ ಕಾವ್ಯದ ಒಳದನಿ ಕ್ಷೀಣಿಸಿ ಕಾವ್ಯ ಸತ್ವ ಕಡಿಮೆಯಾಗುತ್ತದೆ ಎಂಬುದಾಗಿ ವಿವರಿಸುತ್ತಾರೆ. ಆದರೂ ನಾಗಚಂದ್ರನ ಕಾವ್ಯಗಳಲ್ಲಿ ಪ್ರತಿಬಿಂಬಿಸಿರುವ ಸ್ವಭಾವಗಳ ಋಜತ್ವಃ ಸೃಜನಶೀಲ ಭಾಷಾಂತರ ಸಂಗ್ರಹದ ಔಚಿತ್ಯ ಇತ್ಯಾದಿ ಗುಣಗಳಿಂದ ಮೆಚ್ಚುಗೆಯನ್ನು ನೀಡುವ ಇವರು ಇವು 'ಕನ್ನಡ ಕಾವ್ಯಲೋಕದ ಚಿರ ಸಂಪತ್ತಿನ ಅವಿಭಾಜ್ಯ ಅಂಗಗಳಾಗಿವೆ.' ಎಂಬುದಾಗಿ ಅಭಿಪ್ರಾಯಿಸುತ್ತಾರೆ. ಹಾಗೇ ಇಡೀ ನಾಗಚಂದ್ರನ ಕಾವ್ಯ ದೃಷ್ಟಿಯನ್ನು ಅವಲೋಕಿಸಿ ಕೃತಿಯು ಧಾರ್ಮಿಕ ದೃಷ್ಟಿಕೋನದ ಪ್ರಸಾರಕ ಮಾತ್ರನಾಗಿರುವುದರಿಂದ ವಿಶಿಷ್ಟವೂ ಕೃತಿಯ ಸತ್ವವೂ ಆಗಬೇಕಿದ್ದ ಅನ್ವೇಷಕ ಪಥ ಅವನಲ್ಲಿ ಕಾಣೆಯಾಗಿದೆ. ಸ್ವೀಕೃತ ಮೌಲ್ಯಗಳು ಕಾವ್ಯ ಮೌಲ್ಯಗಳು ಆಗುವುದರಿಂದ, ವಾಸ್ತವ ಜೀವನದ ನೋವು ನಲಿವು ಸಂಘರ್ಷಗಳಿಗಿಂತ ಅವನಲ್ಲಿ ಅಲೌಕಿಕ ಗುರಿ ಮುಖ್ಯವಾಗುತ್ತದೆ. ಹೀಗಾಗಿ ಇವನ ಕಾವ್ಯಗಳಲ್ಲಿ ತತ್ಕಾಲೀನ ಹಿನ್ನೆಲೆಯ ದಟ್ಟ ಸೊಗಡು, ವ್ಯಕ್ತಿ ವಿಶಿಷ್ಟ ಶೋಧಕ ದೃಷಿಯನ್ನು ಅಪೇಕ್ಷಿಸಿದಲ್ಲಿ ಅತೃಪ್ತಿ

ಉಳಿಯುವ ಸಂಭವವೇ ಹೆಚ್ಚು ಎಂದು ವಿಜಯಾದಬ್ಬೆ ನಾಗಚಂದ್ರನ ಮಿತಿಯನ್ನು ಗುರುತಿಸುತ್ತಾರೆ.

ಹೀಗೆ ವಿಜಯಾ ಅವರ ಪ್ರಾಚೀನ ಕವಿಕೃತಿಯನ್ನು ವರ್ತಮಾನದ ದೃಷ್ಟಿ ಧೋರಣೆಗಳ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾ, ವಿಮರ್ಶಿಸುತ್ತಾ, ವಿಚಾರಿಸುತ್ತಾ ನಡೆಸಿರುವ ವ್ಯಾಪಕ ಹರಹಿನ ಸಂಶೋಧನಾ ವಿಶಿಷ್ಟ ಕಾರ್ಯ ತೋರುತ್ತದೆ. ಈ ಮಹಾಪ್ರಬಂಧದ ನಂತರ ಇವರ ಸಂಶೋಧನ ನೆಲೆಯು ಸ್ತ್ರೀಪರ ಕಾಳಜಿಗೆ ಆಧಾರವೆಂಬಂತೆ ಮಹಿಳಾ ಸಾಹಿತ್ಯದ ಕಡೆಗೆ ಒಲವನ್ನು ಕೇಂದ್ರೀಕರಿಸಿದ್ದಾರೆ. "ನಮ್ಮ ಹಿಂದಿನ ಲೇಖಕಿಯರು ಏನನ್ನು ಕುರಿತು ಹೇಗೆ ಬರೆದರು ಅವರು ಆ ವ್ಯವಸ್ಥೆಯ ಸ್ವರೂಪಕ್ಕೆ ಮನುಷ್ಯ ಸಂಬಂಧಗಳಿಗೆ ಇತಿಹಾಸಕ್ಕೆ ವರ್ತಮಾನಕ್ಕೆ ಹೇಗೆ ಪ್ರತಿಕ್ರಿಯಿಸಿದರು." ತಮ್ಮೊಳಗನ್ನು ಹೇಗೆ ಕಂಡುಕೊಂಡರು ಎಂದು ಈ ರೀತಿಯ ಮನೋಕಾತರಗಳು ಇಂಥ ಕಾರ್ಯದಲ್ಲಿ ತೊಡಗುವಂತೆ ಮಾಡಿತು. ತಮ್ಮ ಈ ಪರಿಯ ಶೋಧನೆಯ ಹಿನ್ನೆಲೆಯ ಬಗೆಗೆ ಜಿಜ್ಞಾಸೆ ನಡೆಸುವ ವಿಜಯಾ ಅವರು "ಇದು ಹೀಗಿತ್ತು ಎಂದು ಕಾಣುವ ಆಸೆಯಷ್ಟೇ ಅಲ್ಲ. ಅದು ಹಾಗೆಯೇ ಏಕಾಯ್ತು? ಇವತ್ತಿನ ನಮಗೆ ಅದು ಹೇಗೆ ಎಲ್ಲಿ ಅರ್ಥಪೂರ್ಣ ಎಂಬ ಪ್ರಶ್ನೆಗಳೂ ಈ ಹುಡುಕಾಟಕ್ಕೆ ಪ್ರೇರಕವಾಗಿವೆ. ಈ ಹುಡುಕುವಿಕೆ ನನಗೆ ವಿಸ್ಮಯದ ಜಗತ್ತನ್ನು ತೆರೆದು ತೋರಿದೆ. ನಮ್ಮ ದೃಷ್ಟಿಯಿಂದ ಕುತೂಹಲಕಾರಿಯಾದ ಹಲವು ಸಂಗತಿಗಳಿರಬಹದು, ನಮ್ಮ ಸಹಮತವನ್ನು ಪಡೆಯದ ಕೆಲವು ವಿಚಾರಗಳಿರಬಹುದು ಆದರೆ ನಮಗೂ ಎಲ್ಲ ಕಾಲಕ್ಕೂ ಕಲಿಸುವ ಹಲವು ಬದುಕಿನ ಮಾರ್ಗಗಳನ್ನು ಈ ಶೋಧ ಕಾಣಿಸುತ್ತದೆ....."[೧] ಎಂಬ ಸಾರಸ್ವತಿಯ ನೆನಕೆಯಲ್ಲಿನ ಮಾತುಗಳು ಸಂಶೋಧನಾತ್ಮಕ ಸಂಪಾದನೆ ವಿಮರ್ಶಾ ದೃಷ್ಟಿಯಿಂದ ರೂಪುಗೊಳಿಸುವ ವಿಚಾರ ಹಿನ್ನಲೆಯನ್ನು ತಮ್ಮ ಸಂಶೋಧನ ಚಿಕಿತ್ಸಕ ಬುದ್ಧಿಯ ಒಳಗನ್ನು ತೆರೆದಿಡುವ ಮಾತುಗಳು ಈ ಮಾರ್ಗದಲ್ಲಿ ಸಾಗಲು ಕಾಲುದಾರಿಗಳಾಗಿವೆ. ಹಾಗೇ ಸಂಶೋಧನಾ ವಿಧಾನದಿಂದ ಕತ್ತಲ ಗರ್ಭದಲ್ಲಿ ಹುಗಿದುಹೋಗುತ್ತಿದ್ದ ಲೇಖಕಿಯರಾದ ತಿರುಮಲಾಂಬ ಹಾಗೂ ಸಾರಸರಸ್ವತದೇವಿಗೌಡರ ಕುರಿತು ಸಂಶೋಧನ ರೀತಿಯ ಕೃತಿಗಳಾದ 'ಹಿತೈಷಿಣಿಯ ಹೆಜ್ಜೆಗಳು', 'ಸಾರಸರಸ್ವತಿ' ಮುಖ್ಯವಾದವು.

'ಹಿತೈಷಿಣಿಯ ಹೆಜ್ಜೆಗಳು'- ೧೯೯೨ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಜಯಾ ಅವರು ಈ ಮಹಾಗ್ರಂಥವನ್ನು ಸಂಶೋಧನೆ ಮಾಡಿ

---

೧. ಸಾರಸರಸ್ವತಿ, ಸಂ.: ವಿಜಯಾದಬ್ಬೆ, ಪ್ರಮಹಿಳಾ ಸಾಹಿತ್ಯಕಾ, ಧಾರವಾಡ, ೧೯೯೬.

ಪ್ರಕಟಿಸಲು ಕಾರಣರಾದರು. ತಿರುಮಲಾಂಬ ಅವರ ಬಗ್ಗೆ ಒಂದು ಕಿರು ಬರಹವನ್ನಾದರೂ ಮಾಡಬೇಕೆಂಬ ದೃಢ ಆಸೆಯಿಂದ ವಿಜಯಾದಬ್ಬೆ ಈ ಕ್ರಿಯೆಯನ್ನು ಕಾರ್ಯಗತಗೊಳಿಸುವ ವೇಳೆಗೆ ತಿರುಮಲಾಂಬ ತೀರಿಹೋಗಿ ೩-೪ ದಿನಗಳಾಗಿದ್ದವು ಆದರೆ ಅವರನ್ನು ಕುರಿತು ಬರೆಯಬೇಕೆಂಬ ಹಂಬಲ ಬತ್ತಲಿಲ್ಲ. ಅವರ ಬಗೆಗಿನ ಸಮಗ್ರ ಮಾಹಿತಿಯನ್ನು ಗೆಳತಿ ಅಹಲ್ಯಾರ ನೆರವಿನಿಂದ ಸುಮಾರು ೧೩ ವರ್ಷಗಳ ಸತತ ಪ್ರಯತ್ನದಿಂದ ಕಲೆಹಾಕಿ, ಬೃಹತ್ ಸಂಪುಟವಾಗಿ ಹೊರ ಬರಲು ವಿಜಯಾರ ಸಾಧಕ ಗುಣ ಸ್ಮರಿಸುವಂತದ್ದು, ಈ ಕೃತಿಯಲ್ಲಿ 'ಹಿತೈಷಿಣಿಯ ಬದುಕು-ಬರಹ' ಅಧ್ಯಾಯದಲ್ಲಿ ತಿರುಮಲಾಂಬರವರ ಕುರಿತು ಹಲವು ವಿಚಾರಗಳನ್ನು ವಿಜಯಾ ಅವರು ತಿಳಿಸುತ್ತಾರೆ. ಆಘಾತದ ಒಡಲಲ್ಲೇ ಅರಳಿದ ಜೀವ; ಪತ್ರಗಳು ಹೇಳುವ ವ್ಯಥೆ ಕಥೆ ಭಾಗಗಳಲ್ಲಿ ವಿಜಯಾ ಅವರು ತಿರುಮಲಾಂಬರ ಜೀವನದ ಪರಿಯನ್ನು ಅಮೂಲಾಗ್ರವಾಗಿ ವಿವರಿಸುತ್ತ ಜೊತೆಗೆ ಪತ್ರಸಾಹಿತ್ಯದ ಶೋಧನೆಯಿಂದ ಅವರ ಪತ್ರಿಕೋದ್ಯಮದ ಸಾಹಸಮಯ ಸಾಮಾಜಿಕ ಸಂದರ್ಭವನ್ನು ಮನವರಕೆ ಮಾಡಿಕೊಡುತ್ತಾರೆ. "ಒಂದು ಕಾಲಕ್ಕೆ ಅಷ್ಟು ಕ್ರಿಯಾಶೀಲರಾಗಿದ್ದ ತಿರುಮಲಾಂಬ ಇದ್ದಕ್ಕಿಂದ್ದಂತೆ ತಟಸ್ಥರಾದದ್ದೇಕೆ? ಬರವಣಿಗೆಯ ಅಚ್ಚಿನ ಸಂಪಾದಕತ್ವದ ಕೆಲಸ ಸಾಕೋ ಸಾಕೆನ್ನಿಸಿದ್ದೇಕೆ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರದ ಸೂಚನೆಗಳು ಈ ಪತ್ರಗಳಲ್ಲಿವೆ...."[೧] ಎಂದು ಹೇಳುತ್ತ ವಿಜಯಾ ಅವರು ಪತ್ರಸಂಗ್ರಹ ದಾಖಲಿಸುವ ಪ್ರಕಾಶನ, ಸಂಪಾದನೆಯ ಅವರ ಹೋರಾಟ, ಹತಾಶೆ, ಸೋಲುಗಳನ್ನು ತೆರೆದಿಡುತ್ತಾರೆ. ಮುಂದುವರಿದು ತಿರುಮಲಾಂಬರ ಬೃಹತ್ ಸಾಹಿತ್ಯ ಕೃಷಿಯ ನೆಲೆಗಳನ್ನು ಪರಿಚಯಿಸುತ್ತ ಸಾಗುತ್ತಾರೆ. ತಿರುಮಲಾಂಬರ ಒಟ್ಟು ಹದಿನೇಳು ಕಾದಂಬರಿಗಳಲ್ಲಿ ೧೨ ಕಾದಂಬರಿಗಳು ಅಚ್ಚಾಗಿವೆ. ೨ ಅಪೂರ್ಣವಾಗಿ ಅಚ್ಚಾಗಿವೆ. ಒಂದು ಹಸ್ತಪ್ರತಿಯಲ್ಲಿದೆ. ಎರಡು ಹೆಸರು ಉಲ್ಲೇಖಗೊಂಡಿವೆ ಪ್ರಕಟವಾಗಿಲ್ಲದ ಬಗೆಗೆ ಮಾಹಿತಿ ಇಲ್ಲ ಎಂದು ಹೇಳುತ್ತ ಸುಶೀಲೆಯಿಂದ ಮಣಿಮಾಲೆಯವರೆಗೆ ಕೃತಿಗಳ ಸ್ಥೂಲ ಕಥಾ ಹಂದರ ನೀಡಿ ವಿಶ್ಲೇಷಣೆ ವಿಚಾರಕ್ಕೊಳಪಡಿಸುತ್ತಾರೆ. ಇಲ್ಲಿ ಅವರು ಗುರುತಿಸುವುದು ಕಾದಂಬರಿಗಳು ವಸ್ತು ಶೈಲಿಯಲ್ಲಿ ಸಾಂದ್ರತೆಯಲ್ಲಿ ಕಳೆದುಕೊಂಡು ಜಾಳು ಜಾಳಾಗಿ ತೆಳುವಾಗುವುದನ್ನು ಬೇಸರದಿಂದಲೇ ವಿಶ್ಲೇಷಿಸುತ್ತಾರೆ. ಆದರೂ ವಿಜಯಾ ಅವರು ತಿರುಮಲಾಂಬರ ಸ್ತ್ರೀಸಂವೇದನೆಯ ಕೆಲವು ವಿಚಾರಗಳಿಂದ ಅಂದರೇ

೧. ಹಿತೈಷಿಣಿಯ ಹೆಜ್ಜೆಗಳು, ಸಂ.: ವಿಜಯಾದಬ್ಬೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೬೨, ಪು. ೨೨

ಕಾಲಸಂದರ್ಭದಿಂದ ಅಜ್ಞಾನದಿಂದ ಆವೃತವಾದ ಸ್ತ್ರೀಸಮೂಹದಲ್ಲಿ ಬೇರು ಬಿಟ್ಟಿದ್ದ ಮೌಢ್ಯ ಕುಹಕಗಳ ವಿವರಿಸುವ ರೀತಿಯನ್ನು ಮೆಚ್ಚುತ್ತಾರೆ.

ದಕ್ಷಕನ್ಯಾ, ವಿಕ್ರಮ, ನಿಶಾಕಾಂತ, ಮಣಿಮಾಲ, ಕಾಂತಿಮತಿ ಮೊದಲಾದ ಸಾಹಸ ಪ್ರಧಾನ ಪತ್ತೇದಾರಿ ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳಲ್ಲಿರುವ ಕರ್ತವ್ಯಪರತೆ, ಚೈತನ್ಯದ ಕ್ರಿಯಾಗುಣ, ನಿರಂತರೋದ್ಯಮ ಶೀಲತೆಗಳನ್ನು ಗುರುತಿಸುವ ವಿಜಯಾದಬ್ಬೆ ನಾಯಕಿಯರ ವಿಚಾರ, ಚಿಂತನಶೀಲ ಬದುಕಿನ ಪರಿಯನ್ನು ಗುರುತಿಸುತ್ತಾರೆ. ಆದರೂ ಆ ಸಮಯದಲ್ಲಿ ಲೇಖಕಿಗೆ ದಕ್ಕಬಹುದಾಗಿದ್ದ ನೆಲೆ-ಬೆಲೆ ಸಿಕ್ಕಿಲ್ಲವೆಂಬುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. ಮತ್ತು ಮಹಿಳೆಯರ ಸಾಹಿತ್ಯ ಕೃಷಿಯೇ ಇಲ್ಲದ ಸಮಯದ ಹೊಸಗನ್ನಡದ ಮೊದಲ ಲೇಖಕಿ ತಿರುಮಲಾಂಬ ನಾಟಕ ಪ್ರಕಾರವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿಸಕೊಂಡಿರುವುದನ್ನು ಅತ್ಯಂತ ರೋಚಕ ಎಂದು ಅಭಿಪ್ರಾಯಪಡುತ್ತಾರೆ. ಹಾಗೂ ಅವರ ನಾಟಕಗಳ ಕುರಿತು "ಈ ನಾಟಕಗಳು ತೀರ ಮಿತ ಆಶಯದ ಪ್ರಯತ್ನಗಳು ಆದರೂ ಸ್ಪಷ್ಟ ಗ್ರಹಿಕೆ ಮತ್ತು ಅಚ್ಚುಕಟ್ಟಾದ ನಿರೂಪಣೆಯಿಂದ ಪ್ರಸ್ತುತ ನಾಟಕ ಓದುಗರ ಸಹಾನುಭೂತಿ ಪಡೆಯುತ್ತದೆ."[೧] ಎಂದು ನಾಟಕಗಳ ಕುರಿತು ವಿಜಯಾ ಅವರ ಪ್ರತಿಕ್ರಿಯೆಯಾಗಿದೆ. ಹೀಗೆ ತಿರುಮಲಾಂಬರವರ ಸಾಹಿತ್ಯ ಮಗ್ಗಲುಗಳ ತಲಸ್ಪರ್ಶಿಯಾದ ಶೋಧನೆ ನಡೆಸಿ ಪತ್ರಿಕೋದ್ಯಮಿಯಾಗಿ ಅವರ ಸಾಧನೆಯನ್ನು 'ಕರ್ನಾಟಕದನಂದಿನಿ' ಮತ್ತು 'ಸನ್ಮಾರ್ಗದರ್ಶಿ'ಗಳ ಮೂಲಕ ತಿರುಮಲಾಂಬರ ಸಾಧನೆ ವಿಶ್ಲೇಷಿಸುತ್ತಾರೆ. ಬಹುಮುಖ್ಯವಾಗಿ ಮಹಿಳಾ ಪತ್ರಿಕೆಗಳ ಬಗ್ಗೆ ಅಂದು ಇದ್ದ ಮಿತ ನಿರೀಕ್ಷೆ ಇದರಿಂದ ತಿರುಮಲಾಂಬರಲ್ಲಿ ಪ್ರಧಾನವಾಗಿದ್ದ ಸಾಂಪ್ರದಾಯಿಕ ಧಾರ್ಮಿಕನೋಟ, ಮಾರ್ಗದರ್ಶನ ಸಂಪರ್ಕ, ಸಹಕಾರದ ಮಿತಿಗಳನ್ನು ತಿಳಿಸುತ್ತಾ ಇದರಿಂದ ಪತ್ರಿಕೆ ಬಹುಬೇಗ ಕ್ಷೀಣಿಸಿತು ಎಂದು ಅಂದಿನ ಸಾಮಾಜಿಕ ಸಂದರ್ಭಕ್ಕೆ ಬೆಳಕಾಗಿಸುತ್ತಾರೆ. ಒಟ್ಟಾರೆ ತಿರುಮಲಾಂಬರವನ್ನು ಕೆಲವು ಅಪವಾದಗಳ ನಡುವೆಯು ಅಂದಿನ ಸನ್ನಿವೇಶದ ದೃಷ್ಟಿಯಿಂದ ಅವರ ಸ್ತ್ರೀಪರ ಹಲವು ಹತ್ತು ಕಾರ್ಯಗಳಿಂದ ಕನ್ನಡದ ಪ್ರಾತಃ ಸ್ಮರಣೀಯ ಲೇಖಕಿ ಎಂಬುದಾಗಿ ವಿಜಯಾ ಅವರು ಒಟ್ಟಾಭಿವ್ಯಕ್ತಿಯನ್ನು ಹೊಂದಿದ್ದಾರೆ.

ಮತ್ತೊಂದು ಗ್ರಂಥ 'ಸಾರಸರಸ್ವತಿ' ಇದು ಉತ್ತರ ಕರ್ನಾಟಕದ ಮಹತ್ವದ ಲೇಖಕಿ ಸರಸ್ವತಿದೇವಿಗೌಡರ ಬದುಕು ಸಾಹತ್ಯಗಳ ಸಾರವನ್ನು ಕಾವ್ಯ ಸರಸ್ವತಿ,

---

೧. ಹಿತೈಷಿಣಿಯ ಹೆಜ್ಜೆಗಳು: ಸಂ. ವಿಜಯಾದಬ್ಬೆ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು, ೧೯೯೨, ಪು. ೯೧.

ದೃಶ್ಯಸರಸ್ವತಿ, ಕಥಾಸರಸ್ವತಿ, ಪ್ರಬಂಧ ಸರಸ್ವತಿ ಈ ನಾಲ್ಕು ಭಾಗಗಳಲ್ಲಿ ಅರ್ಥಪೂರ್ಣವಾಗಿ ಸಂಶೋಧನೆ ನಡೆಸಿ ಹಾಗೂ ಕೃತಿಗಳನ್ನು ಸಂಪಾದಿಸಿ ವಿಜಯಾ ಅವರು ನೀಡಿದ್ದಾರೆ. ಇಲ್ಲಿ ವಿಜಯಾ ಅವರು ಅವರ ಕಾವ್ಯ ದಾಟಿಯ ಬಗ್ಗೆ ಸರಸ್ವತಿಯವರ ಸೂಕ್ಷ್ಮವಾದ ಮನಸ್ಸು ದುಃಖಕ್ಕೆ ತೀವ್ರವಾಗಿ ಸ್ಪಂದಿಸುವುದನ್ನು ಸಾಂದರ್ಭಿಕ ರಚನೆಗಳಲ್ಲಿ ಭಾವ ತೀವ್ರತೆಯ ತನ್ಮಯತೆಯ ಸೆಳೆವನ್ನು ಗುರುತಿಸುತ್ತಾರೆ ಹಾಗೂ ಬದುಕಿನಲ್ಲಿ ಮಾನವತೆಯ ಕುರಿತು ಚಿಂತಿಸಿ ಒಳಿತನ್ನು ಕಾವ್ಯದ ಜೀವಾಳವಾಗಿಸುವ ವಿಶಿಷ್ಟತೆಯನ್ನು ಮೆಚ್ಚುಗೆಯಿಂದ ಸಾದಾರಪಡಿಸುತ್ತಾರೆ. ಮತ್ತು ಆ ಕಾಲಘಟ್ಟಕ್ಕೆ ನಾಟಕ ಪ್ರಕಾರದಲ್ಲಿ ಸಾಧನೆಗೈದದ್ದನ್ನು ವಿಶೇಷವಾಗಿ ಸ್ಮರಿಸುತ್ತಾರೆ, ಸರಸ್ವತಿ ಗೌಡರ ೨೩ ಕಥೆಗಳನ್ನು ಬಿಡಿಬಿಡಿಯಾಗಿ ವಿಮರ್ಶೆಯ ಒರೆಗೆ ಹಚ್ಚುವ ಇವರು ಸ್ವತಂತ್ರ ಹರಿತ ದೃಷ್ಟಿಯ ಸರಸ್ವತಿಯವರು ವರ್ತಮಾನ ಬದುಕಿನ ಹಲವು ಹತ್ತು ಸಮಸ್ಯೆಗಳಿಗೆ ಸ್ಪಂದಿಸಿರುವ ರೀತಿಯನ್ನು ಕುರಿತು ಚರ್ಚಿಸುತ್ತಾರೆ. ತಮ್ಮ ಕಥಾವಸ್ತುಗಳ ಮೂಲಕ ಇಡೀ ಸ್ತ್ರೀ ಲೋಕವನ್ನೇ ಮತ್ತೇ ಮತ್ತೇ ಆರಿಸಿಕೊಂಡು ಅದರೊಳಗೆ ಅರ್ಥಪೂರ್ಣ ವೈವಿಧ್ಯಗಳನ್ನು ತೋರಿಸಿ ಹೆಣ್ಣಿನ ಸಂಕಟ ಒಳಗುದಿ ತ್ಯಾಗ ಸಹಿಷ್ಣುತೆ ಇತ್ಯಾದಿಗಳನ್ನು ಮೂಲದ್ರವ್ಯವಾಗಿಟ್ಟುಕೊಂಡು ಮಹಿಳೆಯ ಇಕ್ಕಟ್ಟು ದುರಂತಗಳನ್ನು ಅರ್ಥಪೂರ್ಣವಾಗಿ, ಸಹಜ ಹಾಗೇ ತೀಕ್ಷ್ಣವಾಗಿ ವ್ಯಕ್ತಗೊಳಿಸುವ ಸರಸ್ವತಿ ಅವರ ಕಥಾ ಸಾಹಿತ್ಯ ಮಹಿಳಾ ಸಾಹಿತ್ಯದಲ್ಲೊಂದು ಅಪೂರ್ವ ದಾಖಲೆ ಎಂದು ಮಾನಪೂರ್ವಕ ವಿಶ್ಲೇಷಿಸುತ್ತಾರೆ. ಹಾಗೇ ಇವರ ಪ್ರಬಂಧಗಳ ಕುರಿತು "ಸರಸ್ವತಿಯವರ ಗದ್ಯದ ಹದ ಅವರ ಪ್ರಬಂಧ ಸಾಹಿತ್ಯದ ಓದನ್ನು ಒಂದು ಆಹ್ಲಾದಕರ ಅನುಭವವನ್ನಾಗಿ ಮಾಡುತ್ತದೆ. ಅಂತಃಕರಣದಿಂದ ಚಿಮ್ಮುವ ಸಜೀವ ಸ್ವಾಭಾವಿಕ ಸ್ಪಂದನ ಅವರ ಬರಹವನ್ನು ಆಪ್ತವಾಗಿಸುತ್ತದೆ."[೧] ಎಂದು ಹೇಳುತ್ತಾರೆ.

ಒಟ್ಟಾರೆ ಆ ಕಾಲಕ್ಕೆ ಆ ಪರಿಸರಕ್ಕೆ ಸರಸ್ವತಿ ಅವರ ಬದುಕು ಬರಹದಿಂದ ಒಂದು ಅಪೂರ್ವ ಚೇತನ ಮುಂದಿನ ತಲೆಮಾರುಗಳಿಗೂ ಸ್ಮರಣೀಯ ಮಾರ್ಗ ಇವರದು ಎಂದು ಆಶಯ ಪೂರ್ವಕವಾಗಿ ಸಂಶೋಧನೆ ವಿಮರ್ಶೆಯನ್ನು ವಿಜಯಾ ಅತ್ಯಂತ ಸಾಂಸ್ಕೃತಿಕ ಶೋಧನ ಪರಿಯನ್ನು ಮಾಡುತ್ತಾರೆ.

ವಿಜಯಾ ಅವರ ಮತ್ತೊಂದು ಸಾಹಿತ್ಯ ಸಾಧನೆಯ ಗರಿ, ಅವರ ವೈಚಾರಿಕ ವಿದ್ವತ್, ಪಾಂಡಿತ್ಯಗಳ ಸಂಕೇತ ಗ್ರಂಥ ಸಂಪಾದನೆಯ ಶ್ರಮ ಸಾಧ್ಯವಾದ ಕೆಲಸ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾಗಿ ಬೇಕಾಗುವ ಅನೇಕ

---

೧. ಸಾರಸ್ವತಿ, ಸಂ. ವಿಜಯಾದಬ್ಬೆ, ಪ್ರ ಮಹಿಳಾಸಾಹಿತ್ಯಿಕ ಧಾರವಾಡ, ೧೯೯೬,ಪು. ೨೨.

ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. ಇದರಿಂದ ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಹಸ್ತಪ್ರತಿಗಳ ಸಂಗ್ರಹಕಾರ್ಯದಂತ ಗ್ರಂಥ ಸಂಪಾದನೆ ಕೆಲಸವು ಮುಖ್ಯವಾಗಿರುತ್ತವೆ ಇಂತಹ ಮಾರ್ಗದಲ್ಲಿ ನಡೆದು ವಿಜಯಾ ಅವರು ಮೊದಲು 'ಓದುವ ಗಿರಿಯ ವಿರಚಿತ ಸಾನಂದ ಗಣೇಶ ಸಾಂಗತ್ಯ'-೧೯೭೬ 'ಶ್ಯಾಮಲಾ ಸಂಚಯ'-೧೯೮೮, 'ನಾಗಚಂದ್ರ'- ೧೯೯೬, 'ಲೇಖ-ಲೋಕ'-೧೯೯೮ ಗ್ರಂಥಗಳನ್ನು ಕಾಣಬಹುದು.

'ಓದುವ ಗಿರಿಯ ವಿರಚಿತ ಸಾನಂದ ಗಣೇಶ ಸಾಂಗತ್ಯ' ಗ್ರಂಥವನ್ನು ೧೯೭೬ರಲ್ಲಿ ವಿಜಯಾ ಅವರು ಆರ್.ಎನ್. ವಿಜಯಲಕ್ಷ್ಮಿಯ ಎಂಬುವರ ಜೊತೆ ಸೇರಿ ಸಂಪಾದಿಸಿದರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗದಿಂದ ಪ್ರಕಟವಾಗಿದೆ. ಈ ಕೃತಿಯು ಕಥೆಯನ್ನು ಆರು ಸಂಧಿಗಳಲ್ಲಿ ನೀಡುತ್ತಾರೆ. ಬಹುಮುಖ್ಯವಾಗಿ ಪ್ರಸ್ತಾವನೆಯ ಭಾಗದಲ್ಲಿ ಕರ್ತೃ ಮತ್ತು ಕೃತಿಯ ಕಾಲ ನಿರ್ಣಯದ ಬಗ್ಗೆ "ಕ್ರಿ.ಶ. ೧೫೨೫ರಲ್ಲಿ ಇದ್ದಿರಬಹುದಾದದ ಓದುವ ಗಿರಿಯ ಪ್ರಕೃತ ಸಾನಂದ ಗಣೇಶ ಸಾಂಗತ್ಯವನ್ನು ಬರೆದಿದ್ದಾನೆ. ಇದರಲ್ಲಿ ಆರು ಸಂಧಿಗಳೂ ೪೪೦ ಪದ್ಯಗಳೂ ಇರುವುದಾಗಿ ಕವಿ ಚರಿತೆಕಾರರು ಹೇಳಿದ್ದಾರೆ. ಆದರೆ ಈ ಗ್ರಂಥದ ಸಂಪಾದನೆಗೆ ಬಳಸಿಕೊಂಡಿರುವ ಹಸ್ತಪ್ರತಿಗಳಲ್ಲಿ ಸಂಧಿ ಮತ್ತು ಪದ್ಯ ಸಂಖ್ಯೆಗಳಲ್ಲಿ ಒಮ್ಮತ ಕಂಡುಬರುವುದಲ್ಲ."[೧]ಎಂದು ವಿಭಾಗ ಸಂಪಾದಕರ ಮಾತುಗಳು ಕಾಲದ್ವಂದ್ವದ ಬಗ್ಗೆ ತಿಳಿಸುತ್ತದೆ. ಇದನ್ನು ಸ್ಥೂಲವಾಗಿ ಪ್ರಸ್ತಾವನೆಯಲ್ಲಿ ಸುಮಾರು ೧೬ನೇ ಶತಮಾನ ಎಂದು ಹೇಳುತ್ತಾರೆ. ಕೃತಿಯಲ್ಲಿ ವ್ಯಕ್ತವಾಗಿರುವ ಶಿವ ಸ್ತುತಿಯಿಂದ ಶೈವ ಪುರಾಣದ ಕಥಾವಸ್ತುವಿನಿಂದ ಶಿವ ಕವಿಗಳ ಸ್ಮರಣೆಯಿಂದ ಕವಿ ವೀರಶೈವನೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಛಂದಸ್ಸು, ಅಲಂಕಾರ, ವಡಿ, ಪ್ರಾಸಬಿಂದು ಗಣನೇಮ ತಿಳಿದವನೇ ಎಂದು ಕವಿಯೇ ಹೇಳಿಕೊಂಡಿದ್ದರೂ ಪ್ರಾಸ ಛಂದಸ್ಸಿಗೆ ಇಲ್ಲಿ ಚ್ಯುತಿ ಬಂದಿಲ್ಲ ಎಂದು ಗುರುತಿಸಿದ ನಂತರ ಸಾನಂದ ಕಥೆಯ ಕಥಾ ವಿವರವನ್ನು ನೀಡಿ, ಈ ಕಥೆಯನ್ನು ಹಿಂದಿನ ಕವಿಗಳು ಎಲ್ಲಿ ಹೇಗೆ ಉಪಯೋಗಿಸಿಕೊಂಡಿದ್ದರೆಂಬ ವಿವರಣೆ ನೀಡುತ್ತಾರೆ. 'ಇದು ಘಟನಾ ಪ್ರಧಾನ ಅಥವಾ ವಸ್ತು ಪ್ರಧಾನ ಕೃತಿಯಲ್ಲದ ಕಾರಣ ವರ್ಣನೆ ಅನಿವಾರ್ಯವಾಗಿ ಬಂದಿದೆ ಎಂದು ಅಭಿಪ್ರಾಯಪಡುತ್ತಾರೆ. ಒಂದನೇ

೧. ಸುನಂದ ಗಣೇಶ, ಸಾಂಗತ್ಯ- ಸಂ.: ಡಿ.ವಿಜಯ, ಆರ್.ಎನ್. ವಿಜಯಲಕ್ಷ್ಮಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೧೯೭೬,

ಅನುಬಂಧದಲ್ಲಿ ವಿಭಿನ್ನ ಕೃತಿಗಳಲ್ಲಿ ದೊರೆತ ಹೆಚ್ಚುಚವರಿ ಪದ್ಯಗಳನ್ನು ಅನುಕ್ರಮವಾಗಿ ನೀಡಿದರೆ ಅನುಬಂಧದಲ್ಲಿ 'ಸದಾಶಿವ' ಅಂಕಿತ ಕವಿರಚಿತ ಅಪ್ರಕಟಿತ ಸಾನಂದಗಣೇಶ್ವರ ರಗಳೆ'ಯನ್ನು ದೊರೆತ ಏಕೈಕ ಹಸ್ತಪ್ರತಿಯ ಆಧಾರದಿಂದ ನೀಡಿದ್ದಾರೆ.

'ಶ್ಯಾಮಲಾಸಂಚಯ' 'ಈ ಶತಕದ ಪೂರ್ವಾರ್ಧದ ಲೇಖಕಿಯರು' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡಾಗ ಶ್ಯಾಮಲಾ ಬಗೆಗೆ ಏನೂ ತಿಳಿಯದುದರಿಂದ ಕೇವಲ ಅವರ ಹೆಸರನ್ನು ಮಾತ್ರ ಸ್ಮರಿಸುವಂತಾಯಿತು. ಈ ಒಂದು ವಿಷಾದನೀಯ ಘಟನೆಯಿಂದ ವಿಜಯಾ ಅವರು ವ್ಯಾಕುಲರಾಗಿ ಇದರ ಪರಿಣಾಮವಾಗಿ ಕೂಡಲೇ ಕಾರ್ಯತತ್ಪರರಾಗಿ ಶ್ಯಾಮಲಾರ ನೆಲೆಯಾದ ಧಾರವಾಡಕ್ಕೆ ಧಾವಿಸಿ ಅಲ್ಲಿನ ಗೆಳೆಯರ ನೆರವಿನಿಂದ ಶ್ಯಾಮಲಾದೇವಿಯರ ಬದುಕು-ಬರಹಗಳ ಪರಿಚಯ ಮಾಡಿಕೊಂಡು 'ಬದುಕಟೊಂಗೆಗಳಲ್ಲಿ ಹಣ್ಣಾಗಿ ತೂಗಬೇಕಿದ್ದ ಎಷ್ಟೋ ಕನಸ ಮೊಗ್ಗು ಹೂಗಳು" ಶ್ಯಾಮಲಾರೊಡನೆ ನೆಲಕುದುರಿದ ದುರಂತವನ್ನು ಅರಿತಾಗ ತೀವ್ರವಾಗಿ ನೊಂದರು. ಆದರೆ ಅವರ ನಿರಂತರ ಸಂಶೋಧನೆಯ ಫಲವಾಗಿ ಕಾಣೆಯಾಯಿತು ಎಂದೋ ದಶಕಗಳ ಕಂದರ ಇಂದು ನಾಳೆನೆಲ್ಲ ಕುಡಿಗಳಿಗೂ ನಿಮ್ಮ ಹಣತೆಯ ಬೆಳಕು ನೀವೀಗ ಚರಿತ್ರೆಯಲ್ಲ. ನೆನಪಲ್ಲ ನಮ್ಮೊಳಗು ಶ್ಯಾಮಲಕ್ಕಾ ಎಂದು ಧ್ವನಿಸುವ ಆತ್ಮೀಯತೆ ಪ್ರೀತ್ಯಾದರಗಳು ಮೂಡಿದವು. ಪರಿಣಾಮವಾಗಿ ಕನ್ನಡದ ಹಿರಿಯ ಲೇಖಕಿಯರ ಸಂಘದ ಯೋಜನೆಯ ಎರಡನೇ ಕೃತಿಯಾಗಿ 'ಶ್ಯಾಮಲಾಸಂಚಯ' ೧೯೮೮ರಲ್ಲಿ ಪ್ರಕಟವಾಗಿದೆ.

ವಿಜಯಾ ಅವರ ಈ ಕೃತಿಯಲ್ಲಿ ಮೊದಲು ಶ್ಯಾಮಲಾರ ಬದುಕಿನ ಹಿನ್ನಲೆ ನೀಡಿ ಅನಂತರ ಅವರ ವ್ಯಕ್ತಿತ್ವದ ಪರಿಚಯ ಮೂಲಕ ಪತ್ರಕರ್ತೆ, ಸ್ತ್ರೀವಾದಿ ವಿಮರ್ಶಕಿ ಹಾಗೂ ಕತೆಗಾರ್ತಿ ಶ್ಯಾಮಲ ವೈಚಾರಿಕ ವಿಶ್ಲೇಷಣೆಯನ್ನು ಮಾಡುತ್ತ ಶ್ಯಾಮಲರ ಬಹುಮುಖ ಪ್ರತಿಭೆಯ ಬಗ್ಗೆ ನಿರೂಪಿಸುತ್ತಾರೆ. ೧೯೪೦ರಿಂದ ೪೨ರವರೆಗೆ ಜಯ ಕರ್ನಾಟಕದ ಸಹ ಸಂಪಾದಕಿಯಾಗಿ ಮಹಿಳೆಯರ ಪ್ರಗತಿಗೆ ಪೂರಕವಾಗಿ ಪತ್ರಿಕೆಯ ವರದಿಗಾರ್ತಿಯಾಗಿ ಸಾಧನೆಯ ಹಾದಿಯನ್ನು ಗುರುತಿಸುತ್ತಾರೆ. ಶ್ಯಾಮಲಾರ ಸ್ತ್ರೀಪರ ಕಾಳಜಿಯ ಬಗ್ಗೆ ವಿಜಯಾ ಅವರು ಸ್ತ್ರೀಪರ ನಿಲುವಿಗೆ ದನಿ ನೀಡುವ ಅಗತ್ಯ ಮತ್ತು ಸ್ತ್ರೀಯರ ಕಥನ ಕಲೆ, ಪರಿಪಕ್ವತೆಯನ್ನು ಪಡೆದುಕೊಳ್ಳಬೇಕಾದ ತುರ್ತನ್ನು ಒತ್ತಿ ಹೇಳುವ ಐತಿಹಾಸಿಕ ಅಗತ್ಯವನ್ನು ಶ್ಯಾಮಲಾ ಪೂರೈಸುತ್ತಾರೆ ಎಂದು ಹೇಳುತ್ತಾರೆ ಹಾಗೂ ಸಾಹಿತ್ಯ ವಸ್ತು ಕುರಿತು. ದಿನನಿತ್ಯದ ಬದುಕಿನ ಅವಲೋಕನದ ಲೋಕದ ವಿಸ್ತಾರ ವೈವಿಧ್ಯಗಳನ್ನು ತಮ್ಮ ಜೀವನ ಸಂದರ್ಭಗಳಲ್ಲಿ ಕಂಡುಂಡ ಅನುಭವಸಾರವನ್ನು ದೊರೆತ ಸೀಮಿತ ಅವಕಾಶದಲ್ಲೇ ತೆರೆದಿಟ್ಟ ಅಪರೂಪದ

ಕತೆಗಾರ್ತಿ ನಿಲುವ ಬಗ್ಗೆ ಮೆಚ್ಚಿಕೊಳ್ಳುತ್ತಾರೆ. ಒಟ್ಟಾರೆ ಶ್ಯಾಮಲಾ ಅವರ ಸೃಜನಶೀಲತೆಯ ಒಂದು ನೆಲೆ ಬರಹ ಎಂದು ಹೇಳುತ್ತಾ ನಲವತ್ತೂರರ ತುಂಬು ಹರಯದಲ್ಲೇ ಹೃದಯ ವಿಕಾರದಿಂದ ಕೊನೆಯುಸಿಳೆದ ಶ್ಯಾಮಲಾ ಬಗೆಗೆ ವಿಷಾದದಿಂದ ಅವರ ಬದುಕು–ಬರಹದ ಬಗ್ಗೆ ವಿಜಯಾ ಅವರು ತಿಳಿಸುತ್ತಾರೆ.

'ನಾಗಚಂದ್ರ' ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕನ್ನಡಸಾಹಿತ್ಯ ಪರಂಪರೆಯ ಪರಿಚಯವನ್ನು ನೀಡುವ 'ಮುತ್ತಿನಹಾರ' ಯೋಜನೆಯಲ್ಲಿ ೧೯೯೭ರಲ್ಲಿ ಈ ಕೃತಿ ಪ್ರಕಟವಾಗಿದೆ. ಗಾತ್ರದಲ್ಲಿ ದೊಡ್ಡವಾದ ತಮ್ಮ ಸಾಹಿತ್ಯಕೃತಿಗಳನ್ನು ಈ ಹೊತ್ತಿಗೆ ಎಲ್ಲ ಬಗೆಯ ಓದುಗರ ವಾಚನಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸಿರುವ ಈ ಪುಟ್ಟ ಹೊತ್ತಿಗೆಯಲ್ಲಿ ಈಗಾಗಲೇ ಪ್ರಸ್ತಾಪಿತವಾಗಿರುವ ನಾಗಚಂದ್ರನ ಮುಖ್ಯ ವಿಚಾರಗಳು ಹಾಗೂ ನಾಗಚಮದ್ರನ ಎರಡೂ ಕಾವ್ಯಗಳ ಬಹು ಮುಖ್ಯವಾದ ಆಯ್ದ ಪದ್ಯಗಳು ಸೇರಿಸಿ ಹೊರತರಲಾಗಿದೆ. 'ಲೇಖ–ಲೋಕ' ಗ್ರಂಥವು ವಿಜಯಾ ಅವರ ಮತ್ತೊಂದು ಸಂಪಾದನ ಕೃತಿ ಇದು ೧೯೯೮ರಲ್ಲಿ ಹೊರತಂದದ್ದು. ಇದರ ಸಂಪಾದನೆ ಕಾರ್ಯವು ಒಂದು ವಿಶಿಷ್ಟ ವಿಜಯಾ ಅವರ ಸ್ತ್ರೀ ಸಾಹಿತ್ಯದ ಕಾಳಜಿಯ ಪ್ರತೀಕ ಎನ್ನಬಹುದು. 'ಮಹಿಳಾ ಸಾಹಿತ್ಯ ಚರಿತ್ರೆ' ರಚನೆಯಾಗಬೇಕು. ಮಹಿಳೆಯರ ಸಾಹಿತ್ಯ ಕಾಣಿಕೆ ದಾಖಲಾಗಬೇಕು ಎಂಬ ಮಹದಾಸೆ. ಲೇಖಕಿ ಸಂಘದ್ದು ಹಾಗೇ ವಿಜಯಾ ಅವರದು ಈ ಆಶಯವು ರೂಪ ಹೊಂದಲು ಸಹಾಯಕವಾಗಿ ಮೊದಲು ಮೈಸೂರಿನಲ್ಲಿ ಸಮತಾ ಅಧ್ಯಯನ ಕೇಂದ್ರ ಮತ್ತು ಮಹಿಳಾ ಅಧ್ಯಯನ ಕೇಂದ್ರಗಳ ಸಹಕಾರದೊಡನೆ 'ಮಹಿಳೇ ಪರಿಸರ ಸಾಹಿತ್ಯ' ಕುರಿತ ಸಂವಾದದಲ್ಲಿ ಹೊರಹೊಮ್ಮಿದ ಲೇಖಕಿಯರ ಬಿಚ್ಚು ಮನದ ಮಾತು ಅನುಭವದ ನೋಟಗಳನ್ನು ಸಂಪಾದಿಸಿದರು. ಕೃತಿಯು ಕೆಲವು ಲೇಖಕಿಯರಾದ ಎಚ್.ಎಸ್.ಪಾರ್ವತಿ, ಶೈಲಜಾಉಡಪ, ಸಾರಾ, ಮಲತಿಪಟ್ಟಣಶೆಟ್ಟಿ, ಬಿ.ಟಿ.ಲಲಿತಾನಾಯಕ್, ಶಶಿಕಲಾ, ಸ.ಉಷಾ, ಎಚ್.ಎಲ್.ಪುಷ್ಪಾ, ನೇಮಿಚಂದ್ರ ಮೊದಲಾದವರ ಮನದಾಳದ ಸೊಲ್ಲನ್ನು ಒಳಗೊಂಡಿದೆ. ಹಾಗೇ ವಿಜಯಾದಬ್ಬೆ ನೀಡುವ 'ನಿಮ್ಮೊಂದಿಗೆ' ಭಾಗವು ಮಹಿಳಾ ಸಾಹಿತ್ಯ ಆತ್ಮಾವಲೋಕನದಂತಿದೆ. ಲೇಖಕಿಯರ ವಿಶಿಷ್ಟ ಜೀವನ ಸ್ವರೂಪ ಮತ್ತು ಮನೋಜೈವಿಕ ಸಂಬಂಧಗಳಿಂದಾಗಿ ಮಹಿಳೆಯರ ಹೋರಾಟ ಯಾವ ಬಗೆಯದು? ಅವರ ಸೃಜನಶೀಲತೆಯ ಇಕ್ಕಟ್ಟುಗಳು ಸಂಘರ್ಷಗಳು ಅನುಸಂಧಾನಗಳು, ಕೌಟುಂಬಿಕ, ಸಾಮಾಜಿಕ, ರಾಜಕೀಯ ಪರಿಸರದೊಂದಿಗೆ ಲೇಖಕಿಯರ ಹಾದಿಯಂತದು, ಪ್ರಸ್ತುತ ಪರಿಸರದಿಂದ ತಮಗೂ ಸಮಾಜಕ್ಕೂ ಎದುರುರಾಗುತ್ತಿರುವ ಆತಂಕ ಅನುಕೂಲತೆಗಳ ಲೇಖಕಿಯರು ನೋಡಿರುವ ರೀತಿ. ಇಂಥ ಹತ್ತು ಹಲವು ಪ್ರಶ್ನೆಗಳ ಜೊತೆಗೆ ಮಹಿಳಾ

ಸಾಹಿತ್ಯದ ಬಗೆಗೆ ಹೊರಗಿನ ತೀರ್ಮಾನಕ್ಕಿಂತ ಲೇಖಕಿಯರೇ ಸ್ವತಃ ತಮ್ಮ ಸಾಹಿತ್ಯದ ಬಗ್ಗೆ ಹೊಂದಿರುವ ಭಾವ ಇವುಗಳ ತಿಳಿಯುವ ಕಾತುರದಿಂದ ಈ ಕಾರ್ಯಕ್ರಮದ ಯೋಜನೆಯು ಅಗತ್ಯದ ಬಗ್ಗೆ ವಿಜಯಾ ಅವರು ತಮ್ಮ ಮನತುಮುಲಕ್ಕೆ ಬರಹ ರೂಪ ನೀಡಿ ವಿಜಯಾ ಅವರು ಮಹಿಳಾ ಸಾಹಿತ್ಯಕ್ಕೆ ನ್ಯಾಯವಾಗಿ ಸಲ್ಲಬೇಕಾದ ಮೌಲ್ಯ ಸಂದಾಯವಾಗಿಲ್ಲ ಎಂಬ ವಿಷಾದ ಹೊಂದೆ ಇದ್ದಾರೆ. ಹಾಗೇ ಲೇಖಕಿಯರು ಸಮಾಜದ ಜಾತಿ ವ್ಯವಸ್ಥೆ, ಬಡತನ, ಹಳ್ಳಿಗತನಗಳ ಜೊತೆಗೆ ಹೆಣ್ತನವೂ ಸೇರಿ ಏನೇನೆಲ್ಲಾ ಅನುಭವಿಸಿದ್ದಾರೆ. ಇವೆಲ್ಲವೂ ಸೇರಿ ಲೇಖಕಿಯರನ್ನು ಎದುರಿಸಿದೆಷ್ಟು? ಮುದುಡಿದೆಷ್ಟು? ಇರಿದಿದ್ದಷ್ಟು? ಅವರ ಆತ್ಮಾಭಿಮಾನ ಒರೆಗೆ ಹಚ್ಚಿದೆಷ್ಟು? ಈ ಯಾತನೆ ಹಾದಿಗಳನ್ನೆಲ್ಲಾ ಹಾದು ಬರುವಾಗ ಲೇಖಕಿಯರು ಪಟ್ಟ ಪಾಡಿನಲ್ಲಿ ಅವರ ಸಾಹಿತ್ಯದ ಆಂತರ್ಯವಿದೆ.... ಇಂಥ ಯಮಯಾತನೆ, ಮೃದಸೌಂದರ್ಯ ತಮ್ಮದೇ ಆದ ನೋವು ನಲಿವು ಸಂತಸದ ಲೋಕಗಳು ಲೇಖಕಿಯರು ತಮ್ಮ ಸಾಹಿತ್ಯಕ್ಕೆ ತರುತ್ತಿದ್ದರೂ ಇನ್ನಷ್ಟು ಮೊನಚಾಗಿ, ಸೂಕ್ಷ್ಮವಾಗಿ, ವಿಷಾದವಾಗಿ ಅವರ ಆತ್ಮಕಥಾನಕಗಳಲ್ಲೂ ಈ ಒಳಲೋಕ ತೆರೆಯಬೇಕಾಗಿದೆ ಎಂದು ವಿಜಯಾ ಅವರು ಹೇಳಿದರು ಮತ್ತೇ ತಮ್ಮ ಆಂತರಿಕ ಲೋಕವನ್ನು ಪರರ ಮುಂದೆ ತರುವುದು ಪ್ರಾಯಾಸದ ಕೆಲಸ ಎಂದು ಗುರುತಿಸುತ್ತಾರೆ. ಒಟ್ಟಾರೆ ಲೇಖಕಿಯರ ಒಳತುಮುಲ, ತಾಕಲಾಟಗಳ ವ್ಯಕ್ತಪಡಿಸ ಹೊರಟ ಪ್ರಯತ್ನವನ್ನು ತುಂಬು ಹೃದಯದಿಂದ ಸ್ವಾಗತಿಸಿ ಸಂಪಾದಿಸಿ ಕೊಟ್ಟಿದ್ದಾರೆ. ಇದಿಷ್ಟು ಸಂಶೋಧನೆಯ, ಸಂಪಾದನೆಯಂತಹ ವಿಶಿಷ್ಟ ಸಾಹಿತ್ಯ ಪ್ರಕಾರದಲ್ಲಿ ತೊಡಗಿಸಿಕೊಂಡು ವಿಜಯಾ ಅವರು ನೀಡಿದ ಸಾಹಿತ್ಯ ಕಾಣಿಕೆಗಳಾಗಿವೆ.

ಈ) ಇತರ ಬರವಣಿಗೆಗಳ ಒಟ್ಟು ನೋಟ:

ವಿಜಯಾದಬ್ಬೆ ಸಾಧನೆಯ ಬಹುಮುಖ ವ್ಯಕ್ತಿತ್ವದ ಪ್ರತಿಭೆಯಲ್ಲಿ ಗುರುತಿಸಬಹುದಾದ ಮತ್ತೆ ಕೆಲವು ಬರಹದ ಅಡಿಯಿಡುವ ಸಾಹಿತ್ಯದ ಶಾಖೆಗಳೆಂದರೆ ಕೇವಲ ಸೃಜನಶೀಲ, ಸಂಪಾದನೆ, ಸಂಶೋಧನೆಯಂತಹ ರೂಪಗಳು ಮಾತ್ರವಾಗಿರದೆ ವಿವೇಚನೆಯ ಹಾದಿ ಎಲ್ಲಿದ್ದರು ಸರಿ ಅದನ್ನು ಹುಡುಕಿ ತಂದು ತಮ್ಮ ತೆಕ್ಕೆಗೆ ಸೇರಿಸುವ ಮಹತ್ ವಿಶಿಷ್ಟ ಕಾರ್ಯವೆಂದರೇ ಅನುವಾದವು ಒಂದು, ಅರಿವಿನ ಮಾರ್ಗಗಳನ್ನು ವಿಸ್ತರಿಸಲು ಅನ್ಯಭಾಷೆ, ಸಾಹಿತ್ಯಗಳ ಕೊಳ್ಳುಕೊಡುಗೆ ಅತ್ಯಂತ ಸಾಮಾನ್ಯ ಹಾಗೇ ಜವಬ್ದಾರಿಯುತವಾದ್ದು ಇಂತಹ ಅನುವಾದ ಸಾಹಿತ್ಯ ಮತ್ತು ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಯ ಒಂದುರೂಪ ಸಾಮಾಜಿಕ ಕಾಳಜಿಯಿಂದ ಪರಸ್ಪರ ಪ್ರಾದೇಶಿಕ, ಸಾಂಸ್ಕೃತಿಕ ಅಭ್ಯಾಸದಿಂದ ರಚನೆಯಾಗುವ ಸಾಹಿತ್ಯ ಪ್ರವಾಸ ಸಾಹಿತ್ಯ, ಸಮಾಜದ

ಕೆಲವು ವಿಶಿಷ್ಟ ಸಾಧನೆಯ ಮೂಲಕ ಎಂದಿಗೂ ಉಳಿಯುವ ತಮ್ಮ ಆಂತರೀಕ ಆತ್ಮಸ್ಥೈರ್ಯದ ರೂಪಗಳಾದ ವ್ಯಕ್ತಿ ಪರಿಚಯದ ವ್ಯಕ್ತಿಚರಿತ್ರೆಯಂತಹ ಸಾಹಿತ್ಯ. ಒಟ್ಟಾರೆ, ಅನುವಾದ, ಪ್ರವಾಸ ಸಾಹಿತ್ಯ, ವ್ಯಕ್ತಿಚಿತ್ರ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ವಿಜಯ ಅವರ ಸಾಧನೆ ಅಪಾರ ಇವರ ಬರವಣಿಗೆಯ ಇತರ ರೂಪಗಳಾಗಿ 'ಗುರಜಾಡ', 'ವಿಮೋಚನೆಯೆಡೆಗೆ', 'ಉರಿಯ ಚಿಗುರು ಉತ್ಕಲೆ', 'ಮೆರಿಮೆಕ್ಲಿಯಾಡ್ ಬೆಥುನೆ' ಹಾಗೂ 'ಬೇಂದ್ರೆ ಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ'ಯಂತಹ ಲೇಖನ ಹೀಗೆ ವಿಜಯಾದಬ್ಬೆ ಅವರ ಸಾಹಿತ್ಯದ ಇತರ ಬರಹ ಸಾಧನೆಯನ್ನು ಗುರುತಿಸಿಕೊಳ್ಳಬೇಕು.

ವಿಜಯಾದಬ್ಬೆ ಅವರ ಬಹುಮುಖ್ಯ ಅನುವಾದ ಕೃತಿಗಳು ಎರಡು 'ವಿಮೋಚನೆಯೆಡೆಗೆ' ಮತ್ತು 'ಗುರಜಾಡ' ಅನುವಾದಿಸಿರುವ ಕೃತಿಗಳಲ್ಲೆಲ್ಲ ಒಂದು ವಿಶಿಷ್ಟ ಗುಣ ತೋರುತ್ತದೆ. ಮುಖ್ಯವಾಗಿ ಅದು ನೂತನ ವಿಚಾರಗಳನ್ನು ಸೂಚಿಸುತ್ತದೆ. ವಿಜಯಾ ಅವರ ಸ್ತ್ರೀಪರ ಕಾಳಜಿ, ಧೋರಣೆಗೆ ಸಾಕ್ಷಿಯಂತೆ ಅಂತ ಒಂದು ತಾತ್ವಿಕ ಸಂಗತಿಯನ್ನು ಸಾಧಿಸುವ ಕೃತಿಯಾದ 'ವಿಮೋಚನೆಯೆಡೆಗೆ' ಗಮನಾರ್ಹ ಅನುವಾದ ಬರಹ ಎಂದು ಗುರುತಿಸಬಹುದು. ಇದು ಮೈಥಿಲಿ ಶಿವರಾಮನ್ ಎಂಬ ಲೇಖಕಿಯ ಇಂಗ್ಲಿಷ್‌ನ "Towards Emancipadin' ಎಂಬ ಲೇಖನದ ಅನುವಾದವಾಗಿದೆ. ಈ ಅನುವಾದದಲ್ಲಿ ಜೊತೆಯಾಗಿ ದುಡಿದಿರುವ ಮತ್ತೊಬ್ಬ ಸ್ತ್ರೀವಾದಿ ವಿಮರ್ಶಕಿ ಶ್ರೀಮತಿ ಬಿ.ಎನ್.ಸುಮಿತ್ರಾಬಾಯಿ ಈ ಕೃತಿಯ ಸಮತಾವೇದಿಕೆಯ ಮೊದಲ ಪ್ರಕಟಣೆ.

ಮಹಿಳಾ ಸ್ತ್ರೀವಾದಿ ಸಾಹಿತ್ಯದ ಅಂದರೆ ಸಾಹಿತ್ಯ ಮಾತ್ರ ಒಂದಲ್ಲ. ಮಹಿಳಾಪರ ಚಿಂತನೆಯ, ಅವಳ ಬದುಕಿನ ಪ್ರತಿಹಂತದ ಬಗ್ಗೆ ಸೂಕ್ಷ್ಮ ಆಲೋಚನೆಯಿಂದ ಅವಳ ಬಿಡುಗಡೆಯ ಹಾದಿಯನ್ನು ಹುಡುಕುವಂತ ಅವರ ವಿಚಾರಪರತೆ ತಾತ್ವಿಕತೆಯ ಯೋಚನಾ ನಡಿಗೆಯಲ್ಲಿ ಸ್ತ್ರೀಪರ ಹೋರಾಟ, ನ್ಯಾಯವನ್ನು ಪಡೆಯುವ ಪ್ರಯತ್ನದ, ಸಮಾನವಾದ ಅವಕಾಶಗಳು ಸಿಗಬೇಕೆಂಬ ಮಹಾದಾಸೆಯ ಇಂತಹ ಮೌಲ್ಯಯುತ ಮಾರ್ಗಗಳ ತೋರುದೀಪದಂತ ಹೆಜ್ಜೆಯಾಗುವ ಜ್ಞಾನ ಸಂಪತ್ತನ್ನು ಅನುವಾದದ ಮೂಲಕ ಹಿಗ್ಗಿಸುವ ಒಂದು ಅನನ್ಯ ಕಾಣಿಕೆ ಕೃತಿಯಾಗಿದೆ. ಇಂದಿನ ಜಾಗತಿಕ ಸಮಸ್ಯೆಗಳ ವಿವರ ಮತ್ತು ಹೋರಾಟಕ್ಕೆ ನಮ್ಮ ದೇಶದ ಪರಿಸ್ಥಿತಿಯನ್ನು ತಿಳಿಸುತ್ತದೆ. ಸ್ತ್ರೀ ಯೋಚನಲಹರಿಗೆ ಒಂದಿಷ್ಟು ಚುರುಕು ಮುಟ್ಟಿಸುವ, ಆಕೆಯ ಅಸ್ತಿತ್ವದ ಬಗ್ಗೆ ಬಿಸಿ ಅನುಭವ ನೀಡುತ್ತದೆ.

ಮಹಿಳೆಯ ವಸ್ತುಸ್ಥಿತಿಯ ಬಗ್ಗೆ ಲೇಖನದಲ್ಲಿ ಲೇಖಕಿ ಕಂಡುಕೊಳ್ಳುವ ಅಥವಾ ಪ್ರಶ್ನೆ ಮೂರು ರೀತಿಯವು. ಮೊದಲು "ಮಹಿಳೆಗೆ ತನ್ನದೇ ಆದ ವ್ಯಕ್ತಿತ್ವವಿದೆಯೇ? ಅಥವಾ ಪುರುಷನ ಜೀವನ ಸೌಖ್ಯ ಹೆಚ್ಚಿಸಲೆಂದೇ ಹುಟ್ಟಿದಳೆ?" ಎರಡನೆಯದಾಗಿ "ಆಕೆ ಕೇವಲ ಪುರುಷನ ಅನುಬಂಧವೇ? ಇದು ಪ್ರಕೃತಿ ನಿಯಮವೇ? ಹಿಂದೆಂದಾದರೂ ಸ್ವತಂತ್ರವಾಗಿದ್ದಳೆ? ಎಂದಿನಿಂದ ಅವಳ ಪತನ ಆರಂಭವಾಯಿತು?" ಕೊನೆಯದು "ಅವಳ ಬಿಡುಗಡೆ ಹೇಗೆ? ಕೇವಲ ಹೆಂಗಸಾಗಿರದೆ ಮನುಷ್ಯಳಾಗಿರುವುದು ಹೇಗೆ? ಎಲ್ಲ ಮುಂದುವರಿದ ದೇಶಗಳಲ್ಲೂ ಸ್ತ್ರೀ ಬೇರೆ ಬೇರೆ ಪ್ರಮಾಣದಲ್ಲಿ ಹಿಂದೆ ಬಿದ್ದಿದ್ದಾಳೆ. ಅವಳ ಹಿಂದುಳಿದಿರುವಿಕೆ ಇತಿಹಾಸ ಅವಳಿಗೆ ಕೊಟ್ಟ ಆಸ್ತಿ ಎಂಬುದು ವಿಪರ್ಯಾಸ. ಆಗಸ್ಟ್ ಬೈಬಲ್ 'ಮಹಿಳೆಯೇ ದಾಸ್ಯಕ್ಕೊಳಗಾದ ಮೊಟ್ಟಮೊದಲ ಮಾನವ ಜೀವ, ಗುಲಾಮಗಿರಿ ಅಸ್ತಿತ್ವಕ್ಕೆ ಬರುವ ಮೊದಲೇ ಸ್ತ್ರೀ ಪುರುಷನ ತೊತ್ತಗಿದ್ದಳು' ಎಂದಿದ್ದಾರೆ. ಸಾಮಾಜಿಕವಾಗಿ ಐತಿಹಾಸಿಕವಾಗಿ ವಿಚಾರ ಮಾಡಿದಂತೆ ನಾಗರಿಕತೆಯ ಉಗಮದಲ್ಲಿ ಗುಂಪಾಗಿ ಸ್ತ್ರೀ ಪುರುಷರು ಸ್ವತಂತ್ರವಾಗಿದ್ದರು. ನಾಗರಿಕತೆ ಬೆಳೆದಂತೆ ಹೇಗೆ ಸ್ತ್ರೀ ಕ್ರಮ, ಕ್ರಮವಾಗಿ ಪುರುಷನ ಅಹಂಗೆ ಅನುಮೋದಿಸುತ್ತ, ಅವನ ಕಲ್ಪಿತ ಆದರ್ಶಗಳಲ್ಲಿ ತಾನು ರೂಪುಗೊಳ್ಳುತ್ತ ತುಂಬ ಮುಂದುವರಿದ ಪಾಶ್ಚಿಮಾತ್ಯ ದೇಶಗಳಲ್ಲೂ ಸಾಮಾಜಿಕವಾದ, ಕೆಲವು ಒಡೆತನಗಳಾದ ಆರ್ಥಿಕ, ಮತದಾನದಂತಹ ಹಕ್ಕು ಮೊನ್ನೆ ನೆನ್ನೆಯವರೆಗೂ ಇರಲಿಲ್ಲ. ಇಂದು ಮಹಿಳೆ ಯಾಂತ್ರೀಕೃತ ಸುಖೀ ಜೀವನದ ಸೋಗಿನಲ್ಲಿ, ತಾನೆ ಹೆಣೆದ ಹಂದರದಲ್ಲಿ ಸುಖವೆಂಬ ಭ್ರಮೆಯ ಬಲೆಯಲ್ಲಿ ಸಿಲುಕಿದ್ದಾಳೆ ಒಮ್ಮೊಮ್ಮೆ ಚೌಕಾಶಿಮಾಡಿ ಬೇಡದ್ದನ್ನು ಕೊಂಡು ತುಂಬಿಕೊಳ್ಳುವ ಮೂರ್ಖ ಹೆಂಗಸಾಗಿಯೇ ತನ್ನದೆಂಬ ಬದುಕಿಲ್ಲದ ಸಖಿಯಾಗಿಯೋ, ಬಹುಪಾಲು ಉಳಿದಿದ್ದಾಳೆ. ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳ್ಲಲಿ ಈಚೀಚೆಗಷ್ಟೆ ಅವಕಾಶಗಳ ಹೊಂದುತ್ತ, ಸೃಜನಾತ್ಮಕ ಕಲೆಗಳಲ್ಲಿ ಅವಳ ಪ್ರತಿಭೆಗೆ ಅವಕಾಶ ದೊರೆಯ ತೊಡಗಿದೆ. ಇದರಲ್ಲೂ ಯಶಸ್ವಿಯಾಗಿರುವವರು ಕೇವಲ ಕೆಲವೆ ಮಂದಿ ರಷ್ಯಾ ಮತ್ತು ಚೀನಾಗಳಲ್ಲಿ ಪ್ರಜೆಗಳು ಕಮ್ಯೂನಿಸಂ ಮತ್ತು ಸಾಮ್ಯವಾದ ಕ್ರಾಂತಿಯಲ್ಲಿ ತೊಡಗಿದಾಗ ಸ್ತ್ರೀಯರಿಗೆ ಮುಕ್ತ ಅವಕಾಶಗಳು ದೊರೆತವು. ಅಡುಗೆಯ ಮನೆಗಳಿಂದ ಪ್ರಸೂತಿ ಗೃಹಗಳಿಂದ ಹೊರಬಂದ ಅವರು ಸಾಮೂಹಿಕವಾಗಿ ಮಕ್ಕಳನ್ನು ಬೆಳೆಸಿ, ಬೇಸಾಯದಲ್ಲಾಗಲಿ, ಸೈನ್ಯ, ಕ್ರಾಂತಿಯ ಕಾರ್ಯಕ್ರಮಗಳಲ್ಲಿಯಾಗಲಿ ತುಂಬ ಪರಿಣಾಮಕಾರಿಯಾದ ಸಾಧನೆಗಳನ್ನು ತೋರಿದ್ದಾರೆ. ಕಬ್ಬಿಣದ ಹುಡುಗಿಯರೆಂದು ಮನೆಮಾತಾಗಿದ್ದಾರೆ. ಚೀನಾದ ಕನ್‌ಫ್ಯೂಶಿಯಸ್ಸನ ಸಮಯದ ಹೆಂಗಸರ ಹೀಗಳೆಯುವ ಗಾದೆಮಾತುಗಳು ಈಗ

ಮೂಲೆ ಸೇರಿ 'ಸಮಯ ಬಂದರೆ ಸ್ತ್ರೀ ಅರ್ಧ ಆಕಾಶವನ್ನು ಹೊತ್ತಾಳು' ಎಂಬ ಗಾದೆ ಹುಟ್ಟಿಕೊಂಡಿದೆ. ದೇಶದಲ್ಲಿ ಸ್ತ್ರೀ ಉನ್ನತಿಯನ್ನು ಸಮಾನತೆಯನ್ನು ಸಾಧಿಸಲಾರಳೋ ಅಲ್ಲಿಯವರೆಗೆ ದೇಶಕ್ಕೆ ಏಳ್ಗೆ ಉನ್ನತಿ ಸಾಧ್ಯವಿಲ್ಲವೆಂದು ನಾಯಕರು ಭಾವಿಸು-ವಂತಾಗಿದೆ. ಬಂಡವಾಳಶಾಹಿಗಳು ಬೆಲೆಗೊಡಲಾರದ ಸ್ತ್ರೀಶಕ್ತಿಗೆ ಸಾಮ್ಯವಾದಿಗಳು ಮುಕ್ತ ಅವಕಾಶವನ್ನಿತ್ತು ಪುರುಷ ಮಾಡಬಲ್ಲ ಎಲ್ಲ ಕೆಲಸಗಳನ್ನು ಸ್ತ್ರೀ ಮಾಡಬಲ್ಲಳೆಂದು ಸಾಬೀತು ಮಾಡಿದರು.

ಹೀಗೆ ಕ್ರಿ.ಪೂ. ಸಾವಿರಾರು ವರ್ಷಗಳಿಂದ ಕ್ರಿ.ಶ. ಎರಡು ಸಾವಿರದವರೆಗೆ ಬೇಟೆಯಾಡಿ ಗೆಡ್ಡೆ ಗೆಣಸು ತಿಂದು ಬದುಕುತ್ತಿದ್ದ ಮಾನವರಿಂದ ವಿಯೆಟ್ನಾಂ ಯುದ್ಧದಲ್ಲಿ ಹೋರಾಡಿದ ಸ್ತ್ರೀಯರವರೆಗೆ ಅನೇಕ ವಿಚಾರಗಳನ್ನು ಬಯಲಿಗಿಡುತ್ತದೆ. ಅಂದರೆ ಭಾರತವನ್ನು ಕುರಿತು ಲೇಖಕಿ ವಿಚಾರ ಮಾಡಹೋಗುವುದಿಲ್ಲ. ಸ್ತ್ರೀಯ ಪರಿಸ್ಥಿತಿಯನ್ನು ಅರಿಯಬೇಕಾದರೆ ದೇಶದ ಇತಿಹಾಸವನ್ನು ಹರಡಿ ಆ ಕನ್ನಡಿಯಲ್ಲಿ ನೀವೇ ನೋಡಿಕೊಳ್ಳಿ ಎಂದುಬಿಟ್ಟಿದ್ದಾರೆ. ಸಂಪ್ರದಾಯದ ಸಂಕೋಲೆಗಳನ್ನು ತೊಟ್ಟ ಭಾರತೀಯ ನಾರಿಯರ ಪಾಡು ಏನು? ಎಂಬುದಾಗಿ ಮೈಥಿಲಿಯವರ ಕೃತಿ. ತಾತ್ವಿಕತೆಯು ಪ್ರಚೋದಕವಾಗಿದೆ. ಅಂಕಿಅಂಶಗಳಿಂದ ಕೂಡಿ, ಪ್ರಾಚೀನವಾದ ಸಮಾಜಶಾಸ್ತ್ರದ ಆಧಾರಗಳಿಂದ ಸ್ಪಷ್ಟವಾಗಿದೆ. ಇತಿಹಾಸದ ಹಿನ್ನೆಲೆಯಿಂದ ಆಧುನಿಕತೆಯ ಸ್ಥಿತಿಯನ್ನು ಪುಂಖಾನುಪುಂಖವಾಗಿ ವಿಚಾರಸರಣಿಯನ್ನು ಲೇಖನ ಹೊಂದಿದೆ. ಇಂತಹ ಸ್ತ್ರೀ ವಿಮೋಚನೆಗೆ, ವಿವೇಚನೆಯನ್ನು ಒದಗಿಸುವ ಚಿಂತನೆ ಕೆದಕುವ, ಸ್ವಂತಿಕೆಯ ಸಮಾನತೆ ಚಿತ್ತವೃತ್ತಿಯ ಬಡಿದೆಚ್ಚರಿಸುವಂತಹ ಅಂಶವನ್ನು ಅನುವಾದಕಿಯಾಗಿ ಈ ಲೇಖನವನ್ನು ವಿಜಯಾ ಅವರು ಅತ್ಯಂತ ಎಚ್ಚರಿಕೆಯಿಂದ ಮಾಡಿದ್ದಾರೆ.

ವಿಜಯಾದಬ್ಬೆ ಅವರ ಮತ್ತೊಂದು ಅನುವಾದ ಕೃತಿ 'ಗುರಜಾಡ' ಇದು ೧೯೮೬ರಲ್ಲಿ ಬಂದದ್ದು. ಸಾಹಿತ್ಯ ಅಕಾಡೆಮಿಯಿಂದ 'ಗುರುಜಾಡ ವೆಂಕಟ ಅಸ್ಸಾರಾವ್ ಎಂಬ ತೆಲಗು ಸಾಹಿತಿಯ ವ್ಯಕ್ತಿಚಿತ್ರಣದ ಕೃತಿ ಇದನ್ನು ಮೊದಲು ಸಾಹಿತಿ ಡಾ. ವಿ.ಆರ್.ನಾರ್ಲ ಅವರು ಇಂಗ್ಲಿಷ್‌ನಲ್ಲಿ ರಚಿಸಿದ್ದಾಗಿದ್ದು. ಇದನ್ನು ಲೇಖಕಿಯು ಕನ್ನಡಕ್ಕೆ ಅನುವಾದಿಸುವುದರ ಮೂಲಕ, ಖ್ಯಾತ ತೆಲುಗು ಸಾಹಿತ್ಯದ ಕಾವ್ಯ, ನಾಟಕ, ಸಣ್ಣಕತೆಗಳ ಮಾರ್ಗ ಸಂಸ್ಥಾಪಕರಾದ, ಸಾಹಿತಿಯಾದ ಕ್ರಿ.ಶ. ೧೮೬೨ರಿಂದ ೧೯೧೫ರಲ್ಲಿ ಇದ್ದ, ಅಲ್ಪಪ್ರಮಾಣದಲ್ಲಿ ಬರೆದರೂ ಅಪಾರ ಪ್ರಭಾವ ಬೀರಿದ ಹತ್ತೊಂಬತ್ತನೆ ಶತಮಾನದ ತೆಲುಗು ಸಾಹಿತ್ಯಕ್ಕೆ ನೂತನ ಮಾರ್ಗ ಹರಿಕಾರರಾದ ಗುರಜಾಡರ ಬದುಕು ಬರಹದ ಬಗ್ಗೆ ತಿಳಿಯುತ್ತದೆ. ಇದನ್ನು ವಿ.ಆರ್.ನಾರ್ಲ ಅವರು

ಭಾವಪೂರ್ಣ ಶೈಲಿಯಿಂದ ಪರಂಪರೆಯ ಚಿತ್ರಗಳ ಮೂಲಕ ತುಂಬು ಅಭಿಮಾನದಿಂದ ಚಿತ್ರಿಸಿದ್ದಾರೆ.

ಆಯುಷ್ಯದ ಬಹುಭಾಗವನ್ನು ಅರಸರೊಂದಿಗೆ ಕಳೆಯುತ್ತ ಸಾಮಾನ್ಯ ಮನುಷ್ಯ ತನ್ನ ನ್ಯಾಯಬದ್ಧ ಹಕ್ಕನ್ನು ಪಡೆಯುವ ಒಂದು ಭವಿಷ್ಯ ಸಮಾಜದ ಕನಸನ್ನು ಅವರು ಕಂಡರು. ವಾಸ್ತವವಾಗಿ ಅವರು ಮಾನವ ಸಮತೆ ಮತ್ತು ಘನತೆಯನ್ನು ಆಧರಿಸಿದ ಬಣ್ಣ, ಪಂಥ ವರ್ಗ ಅಥವಾ ಜಾತಿಗಳಿಲ್ಲದ ನಾಳಿನ ಜಗತ್ತನ್ನು ಕಲ್ಪಿಸಕೊಂಡರು. ಅವರು ಹೊಸ ಮಾನವ ಮತ್ತು ಹೊಸ ಮಾನವತಾವಾದದ ಒಬ್ಬ ಮಹಾಸಮರ್ಥಕರು. ಇವರ ಕೃತಿಗಳಲ್ಲಿ ನಮಗೆ ಕವಿತೆ, ನಾಟಕ, ಸಣ್ಣಕತೆಗಳು ದೊರೆಯುತ್ತವೆ. ಅವರ ಜೀವನವನ್ನು ಚಿತ್ರಿಸಲು ಆಧಾರವಾಗಿ ದೊರೆತ ಅವರ ದಿನಚರಿ ಟಿಪ್ಪಣಿಗಳು, ಪತ್ರಗಳು, ನಾಟಕ, ಕಥೆಗಳು, ಕವಿತೆಗಳು, ಅರಸನಾದ ಆನಂದ ಗಜಪತಿಯ ಇತಿಹಾಸ, ಸ್ವತಃ ಕವಿಯೇ ಬರೆಯಲು ಪ್ರಯತ್ನಿಸಿದ ವಿಷಯಗಳನ್ನು ಕಲೆಹಾಕಿಕೊಂಡ ಕಳಿಂಗ ಚರಿತ್ರೆಯ ಟಿಪ್ಪಣಿ, ಲೇಖನಸಾಮಾಗ್ರಿಗಳು ಇವಿಷ್ಟೇ ಸಂದಿಗ್ಧದಿಂದ ಕೂಡಿದ ಆಧಾರ ಸಾಮಾಗ್ರಿಯನ್ನು ಬಳಸಿ ಬಹುಶ್ರುತರಾದ ಶ್ರೀನಾರ್ಲ ಅವರು ರಚಿಸಿಕೊಟ್ಟಿರುವ ಕೃತಿ ಒಂದು ಜೀವನ ಚಿತ್ರಮಾಲೆ, ಗುರಜಾಡ ಕೃತಿ ಇದನ್ನು ಅಷ್ಟೇ ಸಮರ್ಥವಾಗಿ ಸಹೃದಯರು ಕವಿಯನ್ನು ವಿಮರ್ಶಿಸುವುದಾದರೆ, ಹೀಗಿರಬೇಕು, ಎಂಬಂತೆ ಒಂದು ಮಾರ್ಗಕಾವ್ಯದಂತೆ ನೀಡಿದ್ದಾರೆ. ಅದನ್ನು ವಿಜಯಾ ಅವರು ಕನ್ನಡದ್ದೇ ಕೃತಿ ಎಂಬಂತೆ ಅತ್ಯಂತ ಜಾಣ್ಮೆ ಜವಾಬ್ದಾರಿಯ ಪ್ರತೀಕವಾಗಿ ಅನುವಾದಿಸಿದ್ದಾರೆ.

ವಿಜಯಾ ಅವರ ಪ್ರಮುಖ ಕೃತಿ, ವ್ಯಕ್ತಿಚಿತ್ರವಾದ 'ಮೇರಿಮೆಕ್‌ಲಿಯಾಡ್ ಬೆಥುನೆ'. ಇದು ೧೯೭೯ರಲ್ಲಿ ಪ್ರಕಟವಾದ ಮೂವತ್ತು ಪುಟದ ಅತ್ಯಂತ ಸ್ಪಷ್ಟ, ಶಕ್ತಿಯುತ ವಿಚಾರವನ್ನು ನೀಡುವಂತದ್ದು. ಅಂದರೆ ಸ್ತ್ರೀಪರ ಧೋರಣೆ ಅದಕ್ಕೂ ಮಿಗಿಲಾಗಿ ಮಾನವತೆಯನ್ನು ಮಿಡಿಯುವ ವ್ಯಕ್ತಿತ್ವ ಸಮಾನತೆ, ಸ್ವಾತಂತ್ರ್ಯ ಪ್ರತಿಜೀವಿಯ ಹಕ್ಕು ಎಂಬ ಚಿಂತನೆಯಿಂದ ಅತ್ಯಂತ ತುಚ್ಚವಾಗಿ ಕಂಡಂತ ಸಮಾಜದಲ್ಲಿ ತನ್ನ ವಿಚಾರ, ವಿದ್ಯೆಯಿಂದ ಬೆಳೆದುಬಂದು ಮಾದರಿಯಾದ ಸಾಹಸಿ ಅನ್ನಿಸಿಕೊಳ್ಳುವಂತಹ, 'ಮೇರಿಮೆಕಲಿಯಾಡ್' ಎಂಬ ನೀಗ್ರೋ ಬಡಕುಟುಂಬದ ಹೆಣ್ಣುಮಗಳ ಸ್ಫುಟ ಜೀವನ ಯಶೋಗಾಥೆ ಎನ್ನಬಹುದು.

ದಕ್ಷಿಣ ಅಮೇರಿಕಾದ 'ದ ಮೆಯ್ಸ್ ವಿಲೆ' ಎಂಬ ಪ್ರಾಂತ್ಯದ ಒಂದು ಹೊಸದಾಗಿ ಸ್ವತಂತ್ರರಾದ ಚಿಕ್ಕದೊಂದು ಕೃಷಿ ಭೂಮಿಯುಳ್ಳ ಹದಿನೇಳು ಮಕ್ಕಳ ತುದಿ

ಮೊದಲಿಲ್ಲದ ಕಷ್ಟಕಾರ್ಪಣ್ಯಗಳ ತಂದೆ-ತಾಯಿಗಳಿದ್ದಾರೆ. ಆದ್ದರಿಂದ ತಾಯಿ ಬಿಳಿಯರೊಬ್ಬರ ಮನೆಗೆಲಸವನ್ನು ಮಾಡಿ ಕುಟುಂಬ ಪೋಷಣೆಯ ಖರ್ಚು ಸರಿದೂಗಿಸಲು ಯತ್ನಿಸಿದ್ದಾಳೆ. ಒಮ್ಮೆ ಅವಳ ಜೊತೆ ಬಂದ ಕಪ್ಪುಬಾಲಿಕೆ ಮೇರಿಜೇನ್ ಅಲ್ಲಿನ ಬಿಳಿಯ ಮಕ್ಕಳ ಜೊತೆ ಆಡುತ್ತಿದ್ದಳು. ಆಗ ಅಲ್ಲಿನ ಪುಸ್ತಕವೊಂದನ್ನು ಕಂಡು ಕುತೂಹಲದಿಂದ ಮುಟ್ಟಿ ಕೈಗೆತ್ತಿಕೊಂಡು ನೋಡಲು ಪ್ರಯತ್ನಿಸಿದಾಗ ಅಲ್ಲಿನ ಬಿಳಿಯ ಮಕ್ಕಳು 'ಮುಟ್ಟದಿರು, ನೀನೆಂದೂ ಓದಲಾರೆ, ನಿನಗೆ ಪುಸ್ತಕದ ಗೊಡವೆಯಾಕೆ' ಎಂದು ನಿಷ್ಠುರ ನುಡಿದ. ಹಿನ್ನೆಲೆಯಿಂದ 'ನಾನೂ ಓದಲು ಕಲಿಯಬೇಕು' ಅಂದುಕೊಂಡರು. ಕರಿಯರಿಗೆ ಶಾಲೆಗಳಿರಲಿಲ್ಲ. ಆದರೆ ಪ್ರಿಸೆಬಿಟ್ಟೆರಿಯನ್ ಚರ್ಚ್‌ಗೆ ಸೇರಿದ ಬಿಳಿಯ ಮಹಿಳೆಯೊಬ್ಬಳು ಕರಿಯ ಮಕ್ಕಳಿಗಾಗಿಯೇ ಶಾಲೆತೆಗೆದಾಗ ದೂರವೇ ಆದರೂ ಓದುವ ಅದಮ್ಯ ಆಸೆಯಿಂದ ಮೇರಿ ಡಿಪ್ಲೋಮ ಪಡೆದು, ಮುಂದೇ ಕಲಿಯಬೇಕೆಂಬ ಆಸೆ. ಆದರೆ ನೀಗ್ರೋಗಳಿಗೆ ಕಾಲೇಜಿನಲ್ಲಿ ಪ್ರವೇಶವಿರಲಿಲ್ಲ. ಆಗ ಉಡುಪು ತಯಾರಿಸಿ ಜೀವನ ನಡೆಸುತ್ತಿದ್ದ ಬಿಳಿಯ ಮಹಿಳೆಯೊಬ್ಬಳು ತನ್ನ ಜೀವಿತ ಉಳಿತಾಯದ ಹಣವನ್ನು ಬಂದು ನೀಗ್ರೋ ವಿದ್ಯಾರ್ಥಿಗೆ ಕಾಲೇಜು ವ್ಯಾಸಂಗಕ್ಕಾಗಿ ಕೊಡಬೇಕೆಂದು ಮೀಸಲಿಟ್ಟಳು. ಇದರಿಂದ ಅವಕಾಶಪಡೆದು ಏಳು ವರ್ಷ ಅಭ್ಯಾಸಮಾಡಿ ಇದರ ಫಲವಾಗಿ ತನ್ನ ಜನರ ಹಿಂದಿನ ದೀರ್ಘ ಇತಿಹಾಸ, ಗುಲಾಮಗಿರಿ. ಅದರ ಕಾರಣಗಳು, ಬಿಡುಗಡೆಗಾಗಿ, ಹೋರಾಟ ಈ ಎಲ್ಲವನ್ನು ತಿಳಿಯಬಯಸಿದಳು. ಆಫ್ರಿಕಾದ ಜನರ ಸ್ಥಿತಿಯನ್ನರಿತು ಆಕೆ ಅಲ್ಲಿ ಮಿಷನರಿಯಾಗಿ ಕೆಲಸಮಾಡ ಬಯಸಿ ಚಿಕಾಗೋವಿನ ಇಲಿನಾಯ್ಸ್ ಎಂಬ ಬೈಬಲ್ ಸಂಸ್ಥೆಯಲ್ಲಿ ತರಬೇತಿಗಾಗಿ ಸೇರಿದಳು. ಇಲ್ಲಿ ಆಕೆ "ಆ ಸಂಸ್ಥೆಯಲ್ಲಿ ಜನಾಂಗೀಯ ಭಾವನೆಗಳಿರಲಿಲ್ಲ. ಮನುಷ್ಯ ನನ್ನ ಕೇವಲ ಮನುಷ್ಯನನ್ನಾಗಿ ಭಾವಿಸಬೇಕಲ್ಲದೆ ಬಿಳಿಯ ಕರಿಯ ಎಂಬುದಾಗಿ ಅಲ್ಲ. ಇದರಿಂದ ಸಂಪೂರ್ಣ ಮಾನವ ಜನಾಂಗವನ್ನೇ ಇಡಿಯಾಗಿ ಪ್ರೀತಿಸಬೇಕೆಂದು ಕಲಿತೆ, ಆ ಪ್ರೀತಿ ಇನ್ನು ನನ್ನೊಂದಗೆ ಇದೆ" ಎಂದು ಬರೆದಳು. ಹಾಗೆಯೇ ಬದುಕಿದಳು. ಆಲ್ಬರ್ಟ್ ಬೆಥುನೆಯನ್ನ ಮದುವೆಯಾಗಿ ಸಮನ್ನಾಗೆ ಪ್ರಯಾಣ ಬೆಳೆಸಿ 'ಡೋಟೋನಾ ಬೀಚ್' ಎಂಬಲ್ಲಿ ನೀಗ್ರೋ ಮಕ್ಕಳಿಗಾಗಿ ಶಾಲೆ ತೆರೆದು ಅಲ್ಲಿನ ಹುಡುಗಿಯರಿಗೆ ವಿದ್ಯೆಯ ಜೊತೆ ಶುಭ್ರವಾಗಿರುವುದು, ಮನೆಯನ್ನು ಚೆಂದವಾಗಿಟ್ಟುಕೊಳ್ಳುವುದು. ಇತರರನ್ನು ಪ್ರೀತಿ ಗೌರವದಿಂದ ಕಾಣುವುದನ್ನು ಕಲಿಸಿಕೊಟ್ಟಳು ತನ್ನ ಜನರಿಗಾಗಿ ಆಸ್ಪತ್ರೆಯನ್ನು ತೆರೆದಳು. ಹಾಗೇ ಮತದಾನಕ್ಕಾಗಿ ಪ್ರಯತ್ನಿಸಿದಳು ಹಾಗೂ ನೀಗ್ರೋ ಮಹಿಳೆಯ ಸಮಿತಿಯನ್ನು ರಚಿಸಿ ಕಟ್ಟಡ ನಿರ್ಮಿಸಿ, 'ಅಮೇರಿಕನ್ ಕ್ರಾಂತಿಯ ಹೆಣ್ಣು ಮಕ್ಕಳು' ಎಂಬ ಸಂಸ್ಥೆ ಹುಟ್ಟುಹಾಕಿ

ಸಮನಾವಕಾಶಗಳಿಗಾಗಿ ಹೋರಾಟ ನಡೆಸಿದಳು. ಹೀಗೆ ತನ್ನ ೭೪ನೇ ವಯಸ್ಸಿನವರೆಗೂ ವಿಶ್ರಾಂತಿಯಿಲ್ಲದೆ ದುಡಿದು ಇವಳ ಈ ಸಾಧನೆಯಿಂದ, ಕ್ರಾಂತಿಯ ಮೂಲಕ, ಕರಿಯರು ಎಲ್ಲಾ ಕಡೆ ಸಮಾನಾವಕಾಶಗಳನ್ನು ಪಡೆಯುವಂತಾಯಿತು. ಇಂತಹ ಒಂದು, ವಿದ್ಯೆ ವಿದ್ಯೆಯ ಫಲದಿಂದ ಪಡೆದ ವಿಚಾರಶಕ್ತಿಯ, ಧೈರ್ಯದ ಮೂಲಕ ಸಮಾಜದಲ್ಲಿ ತಮ್ಮ ಸಹಜ ಹಕ್ಕಿಗಾಗಿ ಆಗ್ರಹಿಸಿ ತನ್ನ ಆತ್ಮಸ್ಥೈರ್ಯದಿಂದ ಉಳಿದ, ಜೀವನ ಪ್ರೀತಿಯನ್ನು ಬೆಳೆಸಬೇಕೆಂಬ ಆಶಯ ಹೊಂದಿದ್ದ ವ್ಯಕ್ತಿ ಕುರಿತ ಜೀವನ ಚಿತ್ರಣ ನೀಡುವ ವಿಜಯಾ ಅವರ ಕೊಡುಗೆ ಮಾನವ ಲೋಕಕ್ಕೆ ಕೈಗನ್ನಡಿ ಕೃತಿ ತಾತ್ವಿಕತೆಯ ಪ್ರಚೋದಕವಾಗಿದೆ.

ಸೃಜನಶೀಲ ಹಾಗೂ ಸೃಜನೇತರ ಈ ಎರಡೂ ಪ್ರಕಾರಗಳ ವಿಶಿಷ್ಟ ರೀತಿಯಲ್ಲಿ ಸ್ಪಂದಿಸಿರುವ ವಿಜಯಾದಬ್ಬೆ ಅವರ ಪ್ರವಾಸ ಕಥನದಲ್ಲಿ ಚಿಂತನೆ ಹಾಗೂ ಸಂಶೋಧನಾತ್ಮಕ ಆಸಕ್ತಿಗಳು ಬೆರೆತುಕೊಂಡಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶಿಷ್ಟ ಯೋಜನೆಗಳಲ್ಲಿ ಒಂದಾದ ಪ್ರವಾಸ ಅನುದಾನ ಯೋಜನೆಯ ಅಡಿಯಲ್ಲಿ ೧೯೯೯ರಲ್ಲಿ ಪ್ರಕಟವಾದ್ದು 'ಉರಿಯ ಚಿಗುರ ಉತ್ಕಲೆಯಲ್ಲಿ'. ಪ್ರವಾಸ ಕಥನ ಎಂಬುದು ಕೇವಲ ಪ್ರಾದೇಶಿಕತೆ ವಿವರಣೆಯನ್ನು ಮಾತ್ರ ನೀಡುವಂತ ಕೃತಿಗಳಾಗದೆ ಅಲ್ಲಿನ ಸಂಸ್ಕೃತಿಯ ಒಳಮುಖಗಳನ್ನು ನೀಡುವಂತದ್ದು ಇಂತಹ ಒಂದು ವಿಶಿಷ್ಟ ಸಾಹಿತ್ಯ ಸೇವೆಯನ್ನು ಲೇಖಕಿಯು ಈ ಕೃತಿಯಲ್ಲಿ ಅತ್ಯಂತ ಸಮರ್ಥವಾಗಿ ಬಿಂಬಿಸಿದ್ದಾರೆ ಎನ್ನಬಹುದು. ಒರಿಸ್ಸಾ ರಾಜ್ಯವನ್ನು ಸುತ್ತಾಡಿ ಅಲ್ಲಿನ ಅಪರಿಚಿತವಾದ ಜನ, ಭಾಷೆ, ಸಂಸ್ಕೃತಿ ಸಾಹಿತ್ಯ, ಕಲೆ, ಸಂಸ್ಥೆಗಳು. ಊರುಕೇರಿಗಳ ಪರಚಯ ಮಾಡಿಕೊಂಡು ತಮ್ಮ ವಿಶಿಷ್ಟ ಅನುಭವಗಳನ್ನು ಸುಂದರ ಸರಳವಾಗಿ ನಿರೂಪಿಸಿದ್ದಾರೆ. ಕೃತಿಯು ಒಟ್ಟು ಹದಿನೆಂಟು ಅಧ್ಯಾಯಗಳನ್ನು ಒಳಗೊಂಡಿದ್ದು ಸುಮಾರು ಒಂದು ತಿಂಗಳ ಕಾಲ ಈ ನಾಡಿನಲ್ಲಿ ಸುತ್ತಾಡಿ ಅಲ್ಲಿ ಕಂಡ ಪ್ರಾಕೃತಿಕ, ಸಾಂಸ್ಕೃತಿಕ, ಧಾರ್ಮಿಕ ಸೊಬಗಿನ ಚಿತ್ರಣ ಈ ಪ್ರವಾಸ ಕಥನದಲ್ಲಿ ಪ್ರತಿಬಿಂಬಿತವಾಗಿದೆ. ಲೇಖಕಿ ತಮ್ಮ ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡಿದ್ದು ಬೇಸಿಗೆಯ ದಿನಗಳನ್ನು ಹಾಗಾಗಿ ಸಹಜವಾಗಿಯೇ ಸೂರ್ಯನ ತಾಪದ ಬಗ್ಗೆ ಹೇಳಿದ್ದಾರೆ. 'ಸೂರ್ಯನ ಕ್ರೌರ್ಯ'ದಲ್ಲಿ ಇಲ್ಲಿ ದಿನಕ್ಕೆರಡುಬಾರಿ ಸೂರ್ಯೋದಯವಾಗುತ್ತದೆ ಎನ್ನುತ್ತಾರೆ. ಅಷ್ಟೇ ಅಲ್ಲ ಕೊರಟಿಕ್ಕಿನ ಬಿಸಿಲಿನ ಬೇಗೆಯ ಬಗ್ಗೆ 'ಉಳ್ಳವರ ಎರಡು ಸೂರ್ಯೋದಯಗಳು' ಎಂಬ ಕವನವನ್ನು ಬರೆದಿದ್ದಾರೆ.

ಮೊದಲಿಗೆ ಸಂಜೆ ನಾಲ್ಕು ಗಂಟೆಯಾದರೂ ಬೀದಿಯಲ್ಲ ಅಡ್ಡಾದರೆ ಇರುವ ಜನರನ್ನು ಕಂಡು 'ಇದೇನಿದು ಬೆಳಿಗ್ಗೆ ಎಲ್ಲಾ ಈ ಜನ ಮನೆಯೊಳಗೆ ಸೇರಿಕೊಳ್ಳುತ್ತಾರಲ್ಲ'; 'ಇಷ್ಟು ನಿದ್ದೆ ಹೊಡೆಯುತ್ತಾರಲ್ಲ ಇದೆಂಥ ಕುಂಭಕರ್ಣನನಾಡು' ಎಂದು ಆಶ್ಚರ್ಯಪಡುತ್ತಾರೆ. ನಂತರ ಅಲ್ಲಿನ ಬಿಸಿಲಿನ ಅರಿವಾಗುತ್ತಿದ್ದಂತೆ. ಸಹಜ ಅವರ ಈ ಜೀವನದ ರೀತಿಯೆಂಬುದನ್ನು ಒಪ್ಪಿಕೊಳ್ಳುತ್ತಾರೆ.

'ರಮಿಸುವ ರಾಜಧಾನಿ' ಭುವನೇಶ್ವರದ ಯಾವ ಬೀದಿಯಲ್ಲಿ ನೋಡಿದರೂ ಒಂದಿಲ್ಲೊಂದು ಹಳೆಯ ಗೋಪುರ ರಾರಾಜಿಸುತ್ತದೆ ಎಂದಿದ್ದಾರೆ. ದೇವಾಲಯಗಳ ನಾಡಾದ ಒರಿಸ್ಸಾದ ಶಿಲ್ಪದ ಪ್ರಬುದ್ಧತೆಯನ್ನು ರಾಜ್ಯದ ಉದ್ದಗಲಗಳಲ್ಲಿ ಕಾಣಬಹುದು ಎನ್ನುತ್ತಾ ೭ನೇ ಶತಮಾನದ ಪರಶುರಾಮೇಶ್ವರ ದೇವಾಲಯ ಇತ್ಯಾದಿ ಸುಮಾರು ಹನ್ನೆರಡಕ್ಕೂ ಹೆಚ್ಚು ದೇವಾಲಯಗಳ ಬಗ್ಗೆ ಇರುವ ನಂಬಿಕೆಗಳು, ಕಥೆಗಳು, ಐತಿಹ್ಯಗಳ ಮೂಲಕ ವಿತರಿಸಿದ್ದಾರೆ. ಜೊತೆಗೆ ದೇವಿಯರ ರಾಜ್ಯವು ಹೌದೆಂದು ಗುರುತಿಸಿ ದೇವತೆಗಳು ಕೊನೆ ಮೊದಲಿಲ್ಲದ ಗಿರಿವಾಸಿಗಳ ದೇವಿಯರಾಗಿ ಆರಾಧನೆಗೊಳ್ಳುವ ಬಗೆಯನ್ನು ಬಣ್ಣಿಸಿದ್ದಾರೆ. ಚೌಟ್ಟಿ ಜೋಗಿನಿಯರ ಬಗ್ಗೆ ಹೇಳುತ್ತಾ ಜೋಗಿನಿಯರನ್ನು ಕಾಣಲೆಂದೇ ಒರಿಸ್ಸಾಕ್ಕೆ ಬಂದರೂ ಅಡ್ಡಿಯಿಲ್ಲ ಎನ್ನುತ್ತಾರೆ. ನಾವು ಜೋಗಿನಯರ ಮಂದಹಾಸಕ್ಕೆ ಮರುಳಾಗಿ ಪ್ರತಿನಗುವಷ್ಟು ಆ ನಗೆಯು ಮಿನುಗು ಜೀವಂತವಾಗಿದೆ ಎಂದು ವರ್ಣಿಸಿದ್ದಾರೆ. ಬಹುಮುಖ್ಯವಾಗಿ ಲೇಖಕಿಯು ಒರಿಸ್ಸಾದ ಕವಿ, ಲೇಖಕರುಗಳನ್ನೆಲ್ಲಾ ಭೇಟಿಮಾಡಿ ಅಲ್ಲಿನ ಸಾಹಿತ್ಯ ಸಂಸ್ಕೃತಿ, ಜಾತಿಪದ್ಧತಿ ಮುಂತಾದ ವಿಷಯಗಳನ್ನೆಲ್ಲಾ ವಿವರವಾಗಿ ಹಿಡಿದಿಡುವ ಲೇಖಕಿ ಅಲ್ಲಿನ ಕೆಲವು 'ಕವಿಮೇಳ'ಗಳಲ್ಲಿ 'ವಿಶೇಷಕವಿ'ಯಾಗಿ ಸನ್ಮಾನಿತರಾಗಿದ್ದಾರೆ. ಹಾಗೇ ಅಲ್ಲಿನ ಬುಡಕಟ್ಟು ಜನಾಂಗದವರೊಂದಿಗೆ ಇದ್ದು ಇವರುಗಳು ಒರಿಸ್ಸಾಗೆ ಸಂಸ್ಕೃತಿಗೆ ಒಂದು ವಿಶಿಷ್ಟ ಸೊಬಗಾಗಿದ್ದಾರೆ ಎಂಬ ಚಿತ್ರಣ ನೀಡುತ್ತಾರೆ ಮತ್ತು ಅಲ್ಲಿನ ಕುಷ್ಠರೋಗಿಗಳ ಆಸ್ಪತ್ರೆ ಕೃಷ್ಣ ಚಂದ್ರಪುರದ ಚರ್ಚ್, ವಸತಿಶಾಲೆಗಳನ್ನು ಏಕಾಂಗಿಯಾಗಿ ಹೋಗಿ ವೀಕ್ಷಿಸಿ ಅಲ್ಲಿನ ಸಂಜೆ ಸಮಾರಂಭದಲ್ಲಿ 'ಬ್ರದರ್‌ಗಳ ಡಿಸ್ಕೋ ಡ್ಯಾನ್ಸ್' ಅನ್ನು ಕೂಡ ನೋಡಿ ತಮ್ಮ ಅನುಭವ ಲೋಕವನ್ನು ಕೃತಿಯ ಮೂಲಕ ಬರಹಕ್ಕೆ ನೀಡಿ, ತಮ್ಮ ಅನುಭವವನ್ನು ಓದುಗರಾದ್ದಾಗಿಸುತ್ತಾರೆ.

ಒಟ್ಟಾರೆಯಾಗಿ ಈ ಕೃತಿಯ ವಿವರಗಳಲ್ಲಿ ಒರಿಯನ್ನರ ಜೀವನ, ಕಲೆ ಶಿಲ್ಪ, ದೇವಾಲಯಗಳು, ಚರಿತ್ರೆ ಎಲ್ಲವೂ ವ್ಯಕ್ತವಾಗಿರುವಂತೆ ಕರ್ನಾಟಕ ಇಂದಿನ ಕೆಲವು ಸಮಸ್ಯೆಗಳು ಅಲ್ಲೂ ಸಹಜವಾಗಿ ಇವೆ. ಇಂಗ್ಲಿಷ್ ಪ್ರಚಾರ ಇಂಗ್ಲಿಷ್ ಮಾಧ್ಯಮದ ಹೆಚ್ಚಳ, ಬರಿಯಾ ಶಾಲೆಗಳ ದುಃಸ್ಥಿತಿ, ಹೊಸ ಸವಾಲುಗಳನ್ನು ಎದುರಿಸಲು

ಭಾಷೆಯನ್ನು ಸಿದ್ಧಗೊಳಿಸಿಕೊಳ್ಳುವಲ್ಲಿನ ಹಿಂದುಳಿದ, ಆರ್ಥಿಕ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ಹೊರಗಿನ ಅವಕಾಶಗಳಿಗೆ ಕಾಯುತ್ತಿರುವ ಯುವಜನತೆ, ಎಲ್ಲವೂ ಈ ಕೃತಿಯ ವಿಷಯ ಶ್ರೀಮಂತಿಕೆ, ವೈವಿಧ್ಯತೆ, ವ್ಯಾಪಕತೆಗಳಿಂದ ವಿಜಯಾದಬ್ಬೆ ಅವರ ಸಾಂಸ್ಕೃತಿಕ ಚಿಂತನವು ಸುವೇದ್ಯವಾಗುತ್ತದೆ. ವಿಜಯಾದಬ್ಬೆ ಅವರ 'ಬೇಂದ್ರೆಕಾವ್ಯದಲ್ಲಿ ಅನುಭಾವದ ಒಂದು ನಿಚ್ಚಣಿಕೆ' ೧೯೮೬ರಲ್ಲಿ ಪ್ರಕಟವಾಯಿತು. ಇದು ಪ್ರೊ. ಜಿ.ಶ್ರೀನಿವಾಸರಾಜು ಸಂಪಾದನೆಯ 'ಬೇಂದ್ರೆ ಸಾಹಿತ್ಯ – ಒಂದು ಅಧ್ಯಯನ' ಕೃತಿಯಲ್ಲಿ ಬಂದಿದೆ. ಲೇಖನವು ಬೇಂದ್ರೆ ಕಾವ್ಯದ ಬಗೆಗೆ ಮೂಡಿರುವ ಅಮೂಲಾಗ್ರ ಅಧ್ಯಯನದ ಫಲಶ್ರುತಿ, ಲೇಖನದ ಆರಂಭದಲ್ಲಿ ಅನುಭವ ಮತ್ತು ಅನುಭಾವದ ವಲಯಗಳ ಸಂಬಂಧ ವೈದೃಶ್ಯಗಳ ಬೇಂದ್ರೆ ವಿಚಾರವನ್ನು ಅರವಿಂದ – ರವೀಂದ್ರನಾಥ ಠಾಕೂರ್ ಅವರ ಪ್ರಭಾವದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ನಂತರ ಸ್ವತಂತ್ರವಾದ ಅತ್ಯಂತಿಕ ಮೌಲ್ಯಕ್ಕೆ ಮೆಚ್ಚಲಾದ ಶ್ರಾವಣದ ಅನುಭವ ಬೇಂದ್ರೆಯವರನ್ನು ಅನುಭಾವದ ನೆಲೆಗೆ ಒಯ್ಯುವ ಪರಿಯನ್ನು ಕೂಲಂಕಷವಾಗಿ ಚರ್ಚಿಸಿ ಋತುಗತಿಯ ಪ್ರಮುಖ ಅವಸ್ಥೆಗಳಲ್ಲೊಂದಾದ 'ಶ್ರಾವಣ' ಬೇಂದ್ರೆ ಕಾವ್ಯಗತಿಯ ನಿರ್ಣಾಯಕ ಅಂಶವಾಗಿ ದುಡಿದಿರುವ ವಿವರವನ್ನು ತೆರೆದಿಟ್ಟಿದ್ದಾರೆ. ಒಟ್ಟಾರೆ ಲೇಖನವು ಬೇಂದ್ರೆಯವರ ಕಾವ್ಯಗ್ರಹಿಕೆಯಲ್ಲಿ ಅನುಸರಿಸಬಹುದಾದ ಒಂದು ವಿಧಾನವನ್ನು ವಿಜಯಾದಬ್ಬೆ ಅವರು ನಿರೂಪಿಸುತ್ತಾರೆ.

ಹಾಗೇ ಮತ್ತೇರಡು ಬಿಡಿಲೇಖನಗಳು ಇವರ ಸಾಹಿತ್ಯ ರಾಶಿಯಲ್ಲಿ ಕಂಡುಬರುವ ಅಂಶಗಳು 'ಕನ್ನಡ ಸಾಹಿತ್ಯಿಕ ಚಳುವಳಿಗಳು ಮತ್ತು ಮಹಿಳೆ ಮಹಿಳಾ ಅಧ್ಯಯನ' ಸಂ: ವೀಣಾಶಾಂತೇಶ್ವರ, ಅಕ್ಕ – ಒಂದು ಪರಿಚಯ ಎರಡು ಸ್ತ್ರೀವಾದಿ ನೆಲೆಯವು "ಸ್ತ್ರೀವಾದಿ ಚಳುವಳಿಯು ಸಂದರ್ಭ ಹೊರತುಪಡಿಸಿದರೆ ಇನ್ನಾವ ಕನ್ನಡ ಸಾಹಿತ್ಯದ ಚಳುವಳಿಯಲ್ಲೂ ಸ್ತ್ರೀಯರು ವಿಮರ್ಶಕರಾಗಿ, ಚಳುವಳಿಯ ವಕ್ತಾರರಾಗಿ ಕೆಲಸ ಮಾಡಿಲ್ಲ" ಎಂಬ ಅಂಶಗಳಿಂದ ಕೂಡಿವೆ.

ಒಟ್ಟಾರೆ ವಿಜಯಾದಬ್ಬೆ ಅವರ ಸಾಹಿತ್ಯ ಅಧ್ಯಯನವು ಸ್ಥೂಲವಾದ ನೆಲೆಯನ್ನು ಗುರುತಿಸುವಾಗ ಸಾಹಿತ್ಯ ವಸ್ತುವನ್ನು ಬಂದ ಪ್ರಕಾರಗಳನ್ನು ಓದಿದಾಗ ಸೃಜನಾತ್ಮಕ, ಸಂಶೋಧನೆ, ಸಂಪಾದನೆ, ಅನುವಾದ ವ್ಯಕ್ತಿ ಚಿತ್ರ, ಪ್ರವಾಸಕಥನ, ಬಹುಮುಖ್ಯವಾಗಿ ವಿಮರ್ಶಾಕೃತಿಗಳು ಬಿಡಿ ಲೇಖನಗಳಲ್ಲಿ ಅವರ ಅನಂತ ತಾತ್ವಿಕತೆಯ ಸ್ತ್ರೀ ಒಳಗನ್ನು ತೆರೆದಿಡುವ ಸ್ತ್ರೀವಾದಿ ಸಾಹಿತ್ಯ-ವಿಮರ್ಶೆ ಅನ್ನುವಂತೆ ಬರಹಗಾರ್ತಿಯಾಗಿ, ಸಾಮಾಜಿಕ ಕಾಳಜಿಯ ಜೀವನಪರತೆಯ, ವೈಚಾರಿಕ ನಿಲುವಿನ ಸಾಂಸ್ಕೃತಿಕ ಆಂತರಿಕ ಸ್ಪರ್ಶ ಎನ್ನುವಂತೆ ಜೀವನ್ಮುಖಿ ಸಾಹಿತ್ಯ ಮೂಡಿದೆ.

ಅಧ್ಯಾಯ ೪

ಕಲಾಭಿವ್ಯಕ್ತಿ

"ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಇಷ್ಟೇ ಯಾಕೆ, ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ. ಸ್ಥೂಲವಾಗಿ ಹೇಳುವುದಾದರೆ, ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ. ಈ ಮೂಲ ಸತ್ವವು ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿಯೂ ಇರುತ್ತದೆ." ಎನ್ನುವ ಸಾಹಿತ್ಯ ಚರಿತ್ರೆಕಾರರ ಮಾತು ಸಾಹಿತ್ಯದ ವಸ್ತು ವಿಶೇಷತೆಯ ಗುಣ ಅಡಗಿರುತ್ತದೆ ಅನ್ನುವುದನ್ನು ಮೇಲ್ನೋಟಕ್ಕೆ ಸಾಹಿತ್ಯದ ಅಭಿವ್ಯಕ್ತಿ ಎಂಬುದು ಸುಂದರ ಅನಿಸುವುದು ಸಹಜವಾದರೂ ಸಾಹಿತ್ಯದ ರಚನೆಯ ಹಿಂದಿನ ಒಂದು ಸ್ಥೂಲವಾದ ಅಭಿವ್ಯಕ್ತಿಯ ಧೋರಣೆಯೊಂದಿಗೆ ಭಾಷೆ, ಶೈಲಿ, ತಂತ್ರಗಾರಿಕೆಗಳು ವ್ಯಕ್ತವಾಗುವ ಪರ ಭಿನ್ನ ಅಂದರೇ ಕಲಾಭಿವ್ಯಕ್ತಿ ಎಂಬುದು ಕೇವಲ ಒಂದರಿಂದ ಅಭಿವ್ಯಕ್ತಿಯಾಗುವುದು ಅದರ ಮಿತಿಯಾಗುತ್ತದೆ. ಕಲೆ ಎಂಬುದು ವಿಶಾಲ ಭೂಮಿಕೆಯ ಒಂದು ಅನೇಕ ಗರಿಗಳ ಒಂದು ಸುಂದರ ನವಿಲಂತೆ ಅದು ನೃತ್ಯ, ನಾಟಕ, ಸಂಗೀತ, ಕ್ರೀಡೆ ಇಂತಹ ಮನುಷ್ಯ ಜೀವಿಯ ಸಾಂಸ್ಕೃತಿಕ ಆಯಾಮಗಳು ಕಲಾಭಿವ್ಯಕ್ತಿಗೊಳ್ಳುವ ಹಲವು ಮಗ್ಗಲುಗಳು. ಅಂತೇ ಸಾಹಿತ್ಯವು ಇಂತಹ ಕಲೆಯ ಒಂದು ಬೌದ್ಧಿಕ ಅಭಿವ್ಯಕ್ತಿ ಮಾಧ್ಯಮ. ಸಾಹಿತ್ಯ ಕವಿಯ ಅನುಭವ ಮುಖರದ ಹಾಗೂ ಸುಪ್ತಪ್ರಜ್ಞೆಯ ಮೂಲಕ ವ್ಯಕ್ತವಾಗುವ ಕಲಾತ್ಮಕ ಕವಿ ಕರ್ಮ ಅನ್ನುವುದು ಅಷ್ಟೇ ಸಹಜ ಹೇಳಿಕೆ. ಆದರೆ ಇಂದಿನ ಸಾಹಿತ್ಯ ರೂಪಗಳ ವಿಸ್ತಾರತೆಯಿಂದಾಗಿ ಹಾಗೂ ಸಾಹಿತ್ಯ ಎಂಬುದು ಕೇವಲ ಕಲೆಗಾಗಿ ಕಲೆ, ಸಾಹಿತ್ಯಕ್ಕಾಗಿ ಸಾಹಿತ್ಯ ಎಂಬ ಧೋರಣೆಯಿಂದ ಹೊರತಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದರ ಹಿಂದಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಜೈವಿಕ ಆಯಾಮಗಳಿಂದ ಸೃಷ್ಟಿಯು ಸೃಜನಾತ್ಮಕ, ಸೃಜನೇತರ ಪ್ರಕಾರಗಳಲ್ಲಿ ವೈಚಾರಿಕ ನೆಲೆಯಿಂದ ಅಭಿವ್ಯಕ್ತಿಯು ಭಿನ್ನ. ಆದ್ದರಿಂದ ಬಾಷೆ, ಶೈಲಿ, ತಂತ್ರಗಾರಿಕೆಯು ಧೋರಣೆಯ ಮಿತಿಯಿಂದ ಅಭಿವ್ಯಕ್ತಿ ಕ್ರಮವು ವಿಶಿಷ್ಟವಾಗಿರುವುದರಿಂದ ವಿಜಯಾದಬ್ಬೆ ಅವರ ಸಾಹಿತ್ಯ ಅಧ್ಯಯನದಲ್ಲಿ ಅಭಿವ್ಯಕ್ತಿಗೊಂಡಿರುವ ಭಾಷೆಯ ಬಳಕೆ, ಶೈಲಿ ಸ್ವರೂಪ ತಂತ್ರಗಾರಿಕೆಯೊಂದಿಗೆ ವ್ಯಕ್ತವಾಗುವ ವಸ್ತುಧೋರಣೆಯು ಭಿನ್ನವಾಗುವುದನ್ನು ಅಭಿವ್ಯಕ್ತಿಯ ಹಲವು ಸಾಹಿತ್ಯ ರೂಪಗಳಿಂದ ಶೋಧನನೆಲೆಯಿಂದ ಕಾಣಬಹುದು.

ಅ) ಭಾಷೆ:

ಸಾಹಿತ್ಯವು, ಓದುಗನಿಂದ ಕೇವಲ ಸೌಂದರ್ಯಾನುಭವಕ್ಕೆ ಸೀಮಿತವಾಗಿರದ ತೊಡಗಿಕೊಳ್ಳುವಿಕೆಯನ್ನು ಬಯಸುತ್ತದೆ. ಈ ಮಾತು ಉಳಿದ ಕಲೆಗಳ ಸಂದರ್ಭದಲ್ಲಿ ಅಷ್ಟು ನಿಜವಲ್ಲ, ಭಾಷೆಗೆ ಸಂಪೂರ್ಣವಾಗಿ ಬದ್ಧವಾಗಿರುವುದರಿಂದ ಸಾಹಿತ್ಯ ಸಂಗೀತದ ಹಾಗೆ ಅಂತರ್ಲೀನವಾಗಿರಲಾರದು. ಭಾಷೆ ಎನ್ನುವುದು ತನ್ನ ಸ್ವಭಾವದಿಂದಲೇ ತನ್ನ ಪರಿಪೂರ್ಣತೆಯನ್ನು ಕಂಡುಕೊಳ್ಳುತ್ತದೆ. ಆದರೂ ಸಾಹಿತ್ಯ ಕೃತಿಯೊಳಗೆ 'ವಿಶಿಷ್ಟವಾದ' ಅನುಭವವು ಹುದುಗಿರುತ್ತದೆ. ಈ ಲಕ್ಷಣಗಳ ಫಲವಾಗಿ ಸಾಹಿತ್ಯ ಕೃತಿಯೊಳಗೆ ಒಂದು ಕುತೂಹಲಕಾರಿಯಾದ ಒತ್ತಡವು ಏರ್ಪಡುತ್ತದೆ. ಸಾಹಿತಿಯು ದಿನ ಬಳಕೆಯಲ್ಲಿ ಇರುವಂಥ ಪದಗಳಿಂದಲೇ ಅನನ್ಯವಾಗಿ ಅನುಭವಿಸಿದ ಸಂಗತಿಯನ್ನು ಹೇಳಬೇಕಾಗುತ್ತದೆ. ವಾಸ್ತವವಾಗಿ ಆದಿಕಾಲದಿಂದಲೂ, ಅಮೂರ್ತವಾದ ಭಾವನೆಗಳ ಜಗತ್ತನ್ನು ಸಂಯೋಜಿತವೂ ಅಮೂರ್ತವೂ ಆದ ಅಭಿವ್ಯಕ್ತಿಯಾಗಿ ತನ್ನ ಅಂತರಂಗದೊಂದಿಗೆ ಹಾಗೂ ತಾನು ಬಳಸುವ ಭಾಷೆಯೊಂದಿಗೆ ನಡೆಸಲೇಬೇಕಾದ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿ ಮಾತ್ರ ಅದಕ್ಕೆ ಅಸ್ತಿತ್ವ ಇರುತ್ತಿತ್ತು. ಇದರ ಪರಿಣಾಮವಾಗಿ ಕಲಾಕೃತಿಯೆಂದು ನಿರ್ಮಾಣವಾದ ವಸ್ತು ಒಂದು ಅನನ್ಯ ಸಂವೇದನೆ ಮತ್ತು ಪ್ರಜ್ಞೆಗಳ ಸೃಷ್ಟಿಯಾಗಿರುತ್ತದೆ.

ಸಾಹಿತ್ಯ ಭಾಷೆಯ ವಿಶಿಷ್ಟ ರೂಪವೆಂದು ಪರಿಗಣಿಸಿ ಅಭ್ಯಾಸ ಮಾಡುವಾಗ ಸಾಹಿತ್ಯ ಕಲೆಯ ರೂಪವೂ ಹೌದು ಎಂಬ ಮಾತನ್ನು ಮರೆಯಲಾಗದು. ಯಾಕೆಂದರೆ ಕಲೆಯ ವರ್ತುಳದ ಗುಣಗಳು ಭಾಷೆಯನ್ನು ಸೇರಿದಾಗಲೇ ಭಾಷೆ ಸಾಹಿತ್ಯವೆಂದೆನಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ಕಲಾತ್ಮಕವಾದ ಭಾಷೆಯೇ ಸಾಹಿತ್ಯ ಎಂದೂ ವ್ಯಾಖ್ಯಾನಿಸಬಹುದು. ಈ ರೀತಿಯಾದ ಭಾಷೆಯ ಬಳಕೆಯು ಸಾಹಿತ್ಯದಲ್ಲಿ ಸಹಜವಾಗಿ ಆಡುಭಾಷೆಗಿಂತ ಭಿನ್ನ ಅದು, ಸರಳವಾಗಿ ವ್ಯಕ್ತಿ ಜಾಗೂರೂಕವಾಗಿ, ಶಿಷ್ಟಬದ್ಧತೆಯಿಂದ ಹೊರತಾಗಿ ಬರಹದ ರೂಪಕ್ಕಿಂತ ಅಸ್ಪಷ್ಟವಾಗಿ ಬಳಸುವುದರಿಂದ, ಸಾಹಿತ್ಯ ಬರವಣಿಗೆ ಸ್ವರೂಪ ಎಂಬುದು ಗ್ರಹಿಸಬೇಕಾದ ಒಂದು ಅವಶ್ಯ ನೆಲೆ, ಸಾಹಿತ್ಯದಲ್ಲಿ ಭಾಷೆ ಎಂಬುದು ಪ್ರಾದೇಶಿಕ, ಸಾಂಸ್ಕೃತಿಕ, ಜೈವಿಕ ನೆಲೆಯಿಂದ ಬೇರೆ ಬೇರೆಯಾಗಿ ಬರವಣಿಗೆಯಲ್ಲಿ ಸಂವಹನಗೊಳ್ಳುವುದರಿಂದ ಅದನ್ನು ಗ್ರಹಿಸುವಾಗ ಅದರಲ್ಲೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ೭೦-೮೦ರ ದಶಕದಲ್ಲಿ ಸ್ತ್ರೀ ಸಂವೇದನೆಯು ಸಾಹಿತ್ಯವು ತನ್ನ ಒಳಪರಿಸರವನ್ನು ಪುರುಷಸಿದ್ಧನೆಲೆಯಿಂದ ಹೊರತಾಗ ತೆರೆದುಕೊಂಡ ಕಾಲ, ವಿಜಯಾದಬ್ಬೆ ಅವರ ಸಾಹಿತ್ಯ ಕೃಷಿಯು ತೊಡಗಿದ್ದ ಸಂದರ್ಭ ಸಹಜವಾಗಿ

ಸ್ತ್ರೀವಾದಿ ಬಂಡಾಯ ಸಾಹಿತ್ಯವು ಇವರ ಸಾಹಿತ್ಯ ರಚನೆಯ ಹಿನ್ನೆಲೆಯಲ್ಲೂ ಗ್ರಹಿಸಬೇಕಾದ ಅಂಶ.

ವಿಜಯ ಅವರ ಬರವಣಿಗೆಯಲ್ಲಿ ಕಾವ್ಯ, ವಿಮರ್ಶೆ, ಸಂಶೋಧನೆ ಸಂಪಾದನೆಯಲ್ಲಿ ಹೆಚ್ಚಾಗಿ ರಚಿಸಿರುವುದು ತಿಳಿದುಬರುವ ಸಂಗತಿ. ಆದರೆ ಭಾಷೆಯು ವಿಶಿಷ್ಟವಾಗಿ ಬಳಕೆಯಾಗುವುದು ಕಾವ್ಯದಂತಹ ಸೃಜನಾತ್ಮಕ ಸಾಹಿತ್ಯದಲ್ಲಿ, ವಿಚಾರತ್ಮಾಕ ಲೇಖನಗಳಲ್ಲಿ ಹಾಗೂ ಇತರೆ ಸಂಶೋಧನೆ, ಸಂಪಾದನೆ, ಅನುವಾದ ಸಾಹಿತ್ಯದಲ್ಲಿ ಬರವಣಿಗೆಯು ಸಹಜವಾಗಿ ಗದ್ಯರೂಪದಿಂದಲೇ ಭಾಷೆ ಬಳಕೆಯಾಗುತ್ತದೆ. ಆದರೂ ಭಾಷೆಯ ಬಗ್ಗೆ ಸಾಹಿತ್ಯದಲ್ಲಿ ಲಕ್ಷಿಸಬೇಕಾದ ಸಾಮಾನ್ಯಗುಣಗಳೆಂದರೆ ಅದು ಹೇಳುವ ಧಾಟಿ ಒಂದು ವಸ್ತು ಸಂಗತಿಯನ್ನು ಅತ್ಯಂತ ಸರಳ, ಕ್ಲಿಷ್ಟ, ವ್ಯಂಗ್ಯ, ಸೈದ್ಧಾಂತಿಕ ನೆಲೆಗಳ ಅನುಸಂಧಾನದ ಮೇಲೆ ಕಾವ್ಯವು ಹೇಳುವುದನ್ನು ಅತ್ಯಂತ ಸಂಕ್ಷಿಪ್ತವಾಗಿ ಹೇಳಬೇಕು, ಗದ್ಯವು ಮುಟ್ಟಲಾರದ ಅನುಭವದ ಪ್ರದೇಶಗಳನ್ನು ಮುಟ್ಟುವುದರಿಂದ ಗದ್ಯ ಹೇಳಲಾರದ್ದನ್ನು ತನ್ನದೇ ಆದ ರೀತಿಯಲ್ಲಿ ಹಿಡಿದಿಡುವುದರಿಂದ ಪ್ರತಿಮೆಗಳ ಬಳಕೆ, ತಗ್ಗಿದ ಸ್ವರ ಎರಡೂ ಮುಖ್ಯವಾಗಿರುತ್ತದೆ.

ವಿಜಯಾದಬ್ಬೆಯವರು ವಿಮರ್ಶಕಿಯೆಂಬ ಖ್ಯಾತಿಯನ್ನು ಪಡೆದುಕೊಂಡರು. ಮಹಿಳಾ ಅನನ್ಯತೆ, ಸ್ತ್ರೀಪರವಾದ ದೃಷ್ಟಿಕೋನ ಮುಂತಾದವುಗಳನ್ನು ಕಾವ್ಯದ ಮುಖೇನ ಸಾಧಿಸಿಕೊಂಡರು. ನವ್ಯಕಾಲದ ಲೇಖಕರ ಪುರುಷಪರವಾದ ನಿಲುವಿನ ಸಂದರ್ಭದಲ್ಲಿ ಕವಿತೆಗಳಲ್ಲಿ ವಿಜಯಾದಬ್ಬೆ ಅವರು ಸ್ತ್ರೀ ಅನನ್ಯತೆಯನ್ನು ಮೆರೆದರು. ನವ್ಯದ ಸಂದರ್ಭದಲ್ಲಿ ಹೆಚ್ಚಿನ ಲೇಖಕರು ಕವಿತೆಯಲ್ಲಿ ಸಂಕೀರ್ಣವಾದ ಅಭಿವ್ಯಕ್ತಿಯನ್ನು ಸಾಧಿಸಿದ ಹಾಗೆಯೇ ವಿಜಯಾದಬ್ಬೆಯವರು ಕವಿತೆಯ ನಿರೂಪಣೆಯಲ್ಲಿ ಬಿಗಿಯನ್ನು ಸಾಧಿಸಿದರು. ವಿಜಯಾ ಅವರು ಬಳಸುವ ಭಾಷೆಯು ಕಾವ್ಯದಲ್ಲಿ ಸರಳವಾಗಿ ಮೂಡಿದಂತೆ ಅನಿಸಿದರು ನವೋದಯದ ಆರ್ದ್ರತೆ, ನವ್ಯದ ಮೊನಚು ಸ್ತ್ರೀ–ಬಂಡಾಯ ನೆಲೆಯಿಂದ ಅತ್ಯಂತ ವಿಡಂಬನಾತ್ಮಕ ಹರಿತವಾದ ಮಾದರಿಯಲ್ಲಿ ಬಳಕೆಯಾಗಿದೆ.

"ಹೊರಗು ಒಳಗಿನ ದುಡಿತದ ಮಧ್ಯೆ

ಆರು ಮಕ್ಕಳ ತಾಯಿ

ಅವನೇನು ಕೃತಘ್ನನಲ್ಲ

ಸದ್ಯದಲ್ಲೇ ಬಂದೀತು
ಅವಳಿಗರ್ಪಿಸದ ಕವನ ಸಂಕಲನ"[1]

ಇಂತಹ ವಿಡಂಬನೆಗಳು ಸರಳತೆಯಲ್ಲೂ ಭಾಷೆಯು ಸಾಧಿಸಬೇಕಾದ ವಸ್ತುಸ್ಥಿತಿಯನ್ನು ಸಾಧಿಸಿಯೇ ತೀರುತ್ತವೆ. ಬಹುಮುಖ್ಯವಾಗಿ ಸರಳ ಪದನಿರ್ಮಾಣ ವಿಜಯಾ' ಅವರ ಕವಿತೆಯ ವಿಶಿಷ್ಟವಾದರೂ ಅವುಗಳು ಹೊರಡಿಸುವ ಧ್ವನಿಯು ಭಾಷೆಯ ಮೇಲೆ ಅವರ ಹಿಡಿತವನ್ನು ಶೋಧಿಸುತ್ತವೆ.

"ಏಳಲಾರದ ಭೂಮಿಯನ್ನು
ಬೇಕಾದಾಗ ಬೇಕಾದವರು
ತುಳಿದು ನಡೆಯಬಹುದು
ಅದರರ್ಥ
ಪೃಥ್ವಿ ಅವರ ಕಾಲುಗಳನ್ನು
ಚುಂಬಿಸಿದಳೆಂದಲ್ಲ"[2]

ಇಂತಹ ಬರಹ ರೂಪಗಳು ಭಾಷೆಯ ಅರ್ಥಪಾತಳಿಯನ್ನು ವಿಶಿಷ್ಟವಾಗಿ ಬಿಂಬಿಸುತ್ತವೆ ಮತ್ತು ಸ್ತ್ರೀ ಸಂವೇದನೆಯ ಸೂಕ್ಷ್ಮರೂಪಗಳು ಹೆಚ್ಚಾಗಿ ಬಳಕೆಯಾಗಿವೆ. ಅದು ಸಹ ಅತ್ಯಂತ ಸರಳ ಭಾಷೆಯೊಂದಿಗೆ ವ್ಯಂಗ್ಯವು ಅಂತರ್ಮುಖಿಯಾಗಿ ಸ್ಫೋಟವಾಗಿಸುವ ಕಲೆಯು ಅತ್ಯಂತ ಗ್ರಹ್ಯ ಅಂಶ.

"ನನ್ನ ಪ್ರಶ್ನೆಗಳಿಗೆಲ್ಲ
ಅವಳ ಭೂಮಿತೂಕದ ಮೌನ
ಕತ್ತೆತ್ತಿ ನೋಡಿದರೂ
ಅವಳ ಕಣ್ಣಾ ಭಾವಗಳು
ಶಬ್ದವಾಗದೆ ನನ್ನ ಕಣ್ಣಿಗಿಳಿದು
ತಿರುಗಿ ನಿಂತವು ಕೇಳಿದ್ದ ಪ್ರಶ್ನೆಗಳು"[3]

---

೧. ಇತಿಗೀತಿಕೆ, ವಿಜಯಾದಬ್ಬೆ, ಪ್ರ ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೧೫೬.
೨. ಇತಿಗೀತಿಕೆ, ವಿಜಯಾದಬ್ಬೆ, ಪ್ರ ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೬೬.
೩. ಇತಿಗೀತಿಕೆ, ವಿಜಯಾದಬ್ಬೆ, ಪ್ರ ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೫೧.

ವಿಜಯಾ ಅವರ ಕವಿತೆಗಳು ಹೆಚ್ಚು ಕಲಾತ್ಮಕತೆಯ ಸೌಂದರ್ಯ ಅನನ್ಯತೆಯೂ ಕಡಿಮೆ ಅನ್ನಿಸುವ ಹಾಗೇ ರಚನೆಗಳಲ್ಲಿ ಕಂಡುಬಂದರೂ ಇವುಗಳು ಓದುಗರಿಗೆ ಸರಳವಾಗಿರುವುದರಿಂದ ಭಾಷೆಯು ಧ್ವನಿಸುವ ಅರ್ಥಸಂಪತ್ತು ತಿಳಿವಿಗೆ ಬರಬಹುದಾದರೂ ಹೆಚ್ಚಾಗಿ ನವ್ಯದ ಹಾಗೂ ಸ್ತ್ರೀಸಂವೇದನೆಯ ಸೂಕ್ಷ್ಮವಾದ ಆಂತರೀಕ ವಿಡಂಬನಾತ್ಮಕ ಮಾನವಪರ ರೂಪದಿಂದ ಭಾಷೆಯೂ ಬಳಕೆಯಾಗಿದೆ.

ವಿಜಯಾದಬ್ಬೆ ಅವರ ಸೃಜನಾತ್ಮಕ ಪ್ರಕಾರ ಹಾಗೂ ವಿಚಾರತ್ಮಕ, ಸೃಜನೇತರ ಬರವಣಿಗೆಯಲ್ಲಿ ಭಾಷೆಯು ಸಹಜವಾಗಿ ಕಾವ್ಯಕ್ಕಿಂತ ಭಿನ್ನ ಎಂಬುದು ಅರಿತ ಸಂಗತಿ ಇವುಗಳು ಗದ್ಯರೂಪದ ಬರವಣಿಗೆಗಳಾಗಿರುತ್ತವೆ. ಇಲ್ಲಿ ಭಾಷೆ ವ್ಯಾಕರಣ ಬದ್ಧವಾಗಿ ಮತ್ತು ವಿಷಯವನ್ನು ಸ್ಪಷ್ಟ ನೇರ ನಿರೂಪಣೆಯೊಂದಿಗೆ ಸಾಧಿಸುವ ವಿಧಾನ ಗದ್ಯದ್ದು ಆದರೂ ಭಾಷೆ ಎಂಬುದು ವಿಚಾರಾತ್ಮಕ ವಸ್ತುಸಂಗತಿಯನ್ನು ತಲುಪಿಸುವಾಗ ಕೆಲವು ವೇಳೆ ಸೈದ್ಧಾಂತಿಕ ಅಂದರೆ ಸಿದ್ಧಾಂತಗಳ ರೂಪದಲ್ಲ ಇರಬೇಕಾಗುವುದು ಆಗ ಭಾಷೆ ಕೆಲವು ವೇಳೆ ಸೋಲಬಹುದು. ಹೇಳಬೇಕಾದ ಸಂಗತಿಯನ್ನು ನೇರವಾಗಿ ತಲುಪಿಸಲಾಗಬಹುದು. ಇದು ಗದ್ಯದ ಸಂದರ್ಭದಲ್ಲಿ ಆಗುವ ತೊಡಕು ಆದರೆ ಇವರ ಭಾಷೆ ವಿಚಾರದ ಹಿನ್ನೆಲೆಯಿಂದ, ಬರವಣಿಗೆಯ ಗ್ರಹಿಕೆಯಿಂದಲೂ ಉತ್ತಮ "ಮಹಿಳೆಯರಿಗೆ ತಮ್ಮ ಶಕ್ತಿ, ಸಾಧ್ಯತೆಗಳಲ್ಲಿ ನಂಬಿಕೆ ಹುಟ್ಟುವುದು ಬಹಳ ಮುಖ್ಯ ಹಲವು ಸಾರಿ ಹೆಂಗಸಿನ ಸೋಲು ಮತ್ತು ಸಮಸ್ಯೆಗಳ ಹಿಂದೆ ಇರುವುದು ಅವಳ ಬಗೆಗಿನ ಅವಳ ಅವಿಶ್ವಾಸ, ನಮ್ಮ ಸಂಸ್ಕೃತಿ ಕೊಟ್ಟಿರುವ ದುರ್ಬಲ ಸ್ತ್ರೀ ಪ್ರತೀಕಗಳಿಗೆ ಅವಳು ಹೆಚ್ಚಾಗಿ ಅಂಟಿಕೊಂಡಿದ್ದಾಳೆ. ಕೆಲವು ಸಾರಿ ಈ ಸಂಸ್ಕೃತಿಯಲ್ಲೇ ಇರುವ ಸಶಕ್ತ ಮಾದರಿಗಳು, ಸಬಲ ಪ್ರತೀಕಗಳು ಅವಳನ್ನು ಸೆಳೆದಿವೆಯಾದರೂ ಸಾಮಾನ್ಯವಾಗಿ ನುಂಗಿಹಾಕುತ್ತವೆ. ಕೆಲವು ಸಾರಿ ಈ ಅವಿಶ್ವಾಸವನ್ನು ನಮಗೆ ಅರಿವಿದ್ದೋ ಇಲ್ಲದೆಯೋ ಮುಂದಕ್ಕಿಟ್ಟುಕೊಂಡು ಜವಾಬ್ದಾರಿ, ಕ್ಲೇಶಗಳಿಂದ ತಪ್ಪಿಸಕೊಳ್ಳುವುದೂ ಸಾಧ್ಯ ನಮ್ಮ ಸಮಾಜದಲ್ಲಿರುವ ಸ್ತ್ರೀಶಕ್ತಿಯೇನಾದರೂ ಪೂರ್ಣ ಎಚ್ಚರಗೊಂಡರೆ ಅದು ಸಂಪೂರ್ಣ ಆತ್ಮವಿಶ್ವಾಸದಿಂದ ವಿವೇಕದಿಂದ ದಾರಿಯಲ್ಲಿ ಸಮಾಜವನ್ನು ಮುನ್ನಡೆಸಿದರೆ ಎಂಥ ಕ್ರಾಂತಿಯಾದೀತು"[೧]

ಮೇಲೆ ಬಳಸಿದ ಪಾಠಾಂತರವು ಭಾಷೆಯು ಒಂದು ತಾತ್ವೀಕತೆಯಂತಹ ವಿಚಾರವನ್ನು ಅತ್ಯಂತ ನೈಜ ಸರಳಭಾಷೆಯಿಂದ ಬೋಧನೆಯು ಶುಷ್ಕವಾಗದಂತೆ

---

೧. ನಾರಿದಾರಿ ದಿಗಂತ, ವಿಜಯಾದಬ್ಬೆ, ಪ್ರ. ರಚನಾ ಪ್ರಕಾಶನ, ಮೈಸೂರು, ೧೯೯೭, ಪು. ೪೮.

ಮುಟ್ಟಿಸುವ ಸ್ವರೂಪ ಭಾಷೆಯ ಕಾರ್ಯವಾಗಿರುವುದನ್ನು ವಿಜಯಾದಬ್ಬೆ ಅವರು ಸಮರ್ಥವಾಗಿ ಅರಿತಿದ್ದರೆಂಬುದಕ್ಕೆ ಮೆರಗು.

ಒಟ್ಟಾರೆ ವಿಜಯಾ ಅವರು ಬಳಸುವ ಭಾಷೆಯು ಸೃಜನಾತ್ಮಕ ಸೃಜನೇತರ ಪ್ರಕಾರಗಳೆರಡರಲ್ಲೂ ವಸ್ತು ಸಂಗತಿಯನ್ನು ಸಹೃದಯರಿಗೆ ಸೂಕ್ಷ್ಮ ಸಂವೇದನೆ-ಯಿದ್ದರೂ ಸರಳ ನಿರೂಪಣೆಯಿಂದ ಶಬ್ದ – ಅರ್ಥ ಗ್ರಹಿಕೆಯಲ್ಲಿ ವಿಶಿಷ್ಟವಾದರೂ ಸ್ಪಷ್ಟ ಸಾಂಸ್ಕೃತಿಕ ನೆಲೆಯ ಭಾಷೆಯು ಸ್ತ್ರೀಸಂವೇದನೆಯ ಬಂಡಾಯ ನೆಲೆಯೊಂದಿಗೆ ಬಿಂಬಿಸುತ್ತವೆ.

ಆ) ಶೈಲಿ:

ಸಾಹಿತ್ಯಕ್ಕೆ ಕಲೆ ಹಾಗೂ ಭಾಷೆ ಎಂಬ ಎರಡು ಮುಖಗಳಿವೆ. ಸಾಹಿತ್ಯ ಕಲೆಯೆಂದು ಅಥವಾ ಕಲಾವರ್ತುಳದ ಭಾಗವೆಂದು ವಿಚಾರಮಾಡುವ ಶಾಸ್ತ್ರಕ್ಕೆ ಸೌಂದರ್ಯಮೀಮಾಂಸೆ ಅನ್ನುತ್ತಾರೆ. ಅಂದರೆ ಸಾಹಿತ್ಯದ ಒಂದು ಸತ್ಯಾಂಶದ ಒಂದು ಮುಖದ ಮೇಲೆ ಲಕ್ಷ್ಯ ಕೇಂದ್ರೀಕರಿಸಿ ಈ ರೀತಿ ವಿಚಾರ ಮಾಡುವ ಶಾಸ್ತ್ರಕ್ಕೆ ಶೈಲಿಶಾಸ್ತ್ರ ಎಂಬ ಹೆಸರು. ಇಪ್ಪತ್ತನೇ ಶತಮಾನದ ಇತ್ತೀಚಿನ ಕೂಸಾದ ಶೈಲಿಶಾಸ್ತ್ರ ಇನ್ನೂ ಬೆಳೆಯುವ ಹಂತದಲ್ಲಿದೆ. ಸದ್ಯಕ್ಕೆ ಅದು ಪ್ರಾಮುಖ್ಯವಾಗಿ ಭಾಷೆಯ ಬೇರೆಬೇರೆ ಸ್ತರಗಳಲ್ಲಿ ಸಾಹಿತ್ಯ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನೇ ಅಭ್ಯಾಸ ಮಾಡುತ್ತದೆ. ಸಾಹಿತ್ಯ ಕೃತಿ ಒಂದು ವಸ್ತು ಭಾಷೆಯಲ್ಲಿ ಮಾಡಿಟ್ಟ ಒಂದು ಕೃತಿ ಎಂದು ಗ್ರಹಿಸಿ, ಓದುಗ ಆ ಕೃತಿಗೆ ತೋರಿಸುವ 'ವಸ್ತುನಿಷ್ಠ' ಪ್ರತಿಕ್ರಿಯೆಯ ಮೇಲೆ ಸದ್ಯದ ಶೈಲಿಶಾಸ್ತ್ರ ನಿಂತಿದೆ. ಇಲ್ಲಿ ಬಹುಮುಖ್ಯವಾಗಿ ಗ್ರಹಿಸಬೇಕಾದ ಅಂಶವೆಂದರೆ ಭಾಷೆಯೆಂಬ ಮೌಖಿಕ ಸಂಕೇತಗಳ ವ್ಯವಸ್ಥೆಗೆ ಪ್ರಾಮುಖ್ಯವಾಗಿ ಮೂರು ಪಾತಳಿಗಳಿರುತ್ತವೆ. ಒಂದು ಧ್ವನಿಯ ಪಾತಳಿ ಎರಡು ವ್ಯಾಕರಣದ ಪಾತಳಿ, ಮೂರು ಅರ್ಥದ ಪಾತಳಿ ಹಾಗೂ ಬರಹದ ಪಾತಳಿ ಎಂಬ ಭಾಷಾರಚನೆಯ ಸ್ವರೂಪದ ಆಧಾರದಿಂದ ಶೈಲಿಯು ಅಭಿವ್ಯಕ್ತಿಗೊಳ್ಳುವುದು. ಆದರೂ ಶೈಲಿ ಎಂಬುದು ಹೆಚ್ಚಾಗಿ ಕಾವ್ಯದಲ್ಲಿ ಪ್ರಕಟವಾಗುವುದರಿಂದ, ಕಾವ್ಯದ ಭಾಷೆಯಲ್ಲಿ ಶೈಲಿಯ ವಿಶಿಷ್ಟತೆ ಸಹಜವಾಗಿ ಬಿಂಬಿತವಾಗುವುದರಿಂದ ಕಾವ್ಯದ ಶೈಲಿಯ ವಿಧಾನ ಬಳಕೆಯು ವಿಜಯಾ ಅವರ ಸೃಜನಾತ್ಮಕ ಪ್ರಕಾರ ಕವಿತೆಗಳಲ್ಲಿ ಗಮನಿಸುವುದುಚಿತ.

ಇಲ್ಲಿ ಧ್ವನಿಯು ವಿಶಿಷ್ಟವಾಗಿ ಮೂಡುವ ರೀತಿಗೆ ಪ್ರಾಸ, ಸ್ವರ, ಯತಿ, ಲಯಗಳಲ್ಲಿ ಬಳಸುತ್ತಾರೆ.

"ಶಬ್ದಗಳು ಅರ್ಥ ಬಿಚ್ಚದ ಹೊತ್ತು
ಬಿಚ್ಚುವ ಕುತೂಹಲವಿಲ್ಲದ ಹೊತ್ತು
ಚಿತ್ರಗಳ ಬಿಂಬ ಹೆಣೆದುಕೊಳ್ಳದ ಹೊತ್ತು
ಹೆಣಿಕೆಯಿಂದರ್ಥ ಸ್ಫುರಿಸದ ಹೊತ್ತು
ನಾಳೆಯೆಂಬುದು ಇದ್ದರೂ ಸತ್ತರೂ
ಏನೂ ಅನಿಸದ ಹೊತ್ತು
ಕನಸುಗಳೆಲ್ಲ ತರಿದೆಲೆಗಳಾಗಿ ಬಿದ್ದ ಹೊತ್ತು"[೧]

ಇಂತಹ ಪದ್ಯಗಳು ಗುರುತಿಸಬಹುದು. ಆದರೆ ಅರ್ಥ, ವ್ಯಾಕರಣದ ಬಳಕೆಯು ಸಹಜ ಪದಗಳಿಂದಲೇ ಬರುತ್ತವೆ. ಭಾಷೆ ಆಡುಮಾತಿನ ರೂಪದಿಂದಲೇ ಗ್ರಾಂಥಿಕ ರೂಪವನ್ನು ಹೊಂದುತ್ತವೆ.

"ಬೋರ್ಲಾಗಿ ಬಿದ್ಗಂಡು
ಬಾಳ ಪ್ರಣತಿ ತಿಮ್ಮಿ
ಅಳ್ತಾ ಅಳ್ತಾ ನಿದ್ದೆಹೋದ್ಲು
ಕನಸಾಗೆ
ನಾಟಕದ ಮೋಜಿನ್ ಹೇಳ್ಳಿ
ಜನರೆಲ್ಲ ರಾಣೀನೇ ನೋಡ್ತಿದಾರೆ
ಕೈಮುಗಿದು ನಿಂತಿದಾರೆ
ರಾಣಿ ತಿಮ್ಮಿಯ ಸಿಂಹಾಸನ
ಫಳ ಫಳಾ ಅಂತಿತ್ತು"[೨]

ಹೀಗೆ ಭಾಷೆ ಶೈಲಿಯು ನವ್ಯದ ಲಕ್ಷಣಕ್ಕೆ ಹೆಚ್ಚು ವಾಲುತ್ತ ಬಳಕೆಯಾಗಿರುವುದು ವಿಜಯಾದಬ್ಬೆ ಅವರ ಶೈಲಿಯ ಅಕ್ಷರ ಬಳಕೆಯಿಂದಲೇ ಅರ್ಥ ವಿಶಿಷ್ಟತೆಯು ಹೊರಸೂಸುವ ರೀತಿ

೧. 'ಅವನಿಲ್ಲದ ಮೇಲೆ' ಇತಿಗೀತಿಕೆ, ವಿಜಯಾದಬ್ಬೆ, ಪು. ೫೬.
೨. 'ರಾಣಿತಿಮ್ಮಿಯ ಸಿಂಹಾಸನ, ಇತಿಗೀತಿಕೆ, ವಿಜಯಾದಬ್ಬೆ, ಪು. ೭೩.

"ಕಡ್ಡಿಗೆ ಸಿಕ್ಕಿಸಿದ ಅವರೆಯಂತೆ

ಬೆಂಕಿಯಲ್ಲಿ ಅದ್ದಿ

ಎನ್ನುವಾಗಲೇ

ಆ

ಕಣ್ಣಲ್ಲಿ

ಈ

ಬಿಂಬ.......?"[೧]

ಒಟ್ಟಾರೆ ಸಹಜ ಭಾಷೆಯ ಬಳಕೆಯೊಂದಿಗೆ ಶೈಲಿಯು ಸ್ವರೂಪವೂ ಪದ್ಯಗಳ ಅರ್ಥಛಾಯೆ ಬಿಂಬಿಸುವಲ್ಲಿ ವಿಶಿಷ್ಟವಾಗಿ, ಕೆಲವು ವೇಳೆ ತೀರ ಸರಳ ರಸಹೀನ ಅನ್ನಿಸುವಂತಹವು ಸಹ ಬಂದಿರುತ್ತವೆ.

ಶೈಲಿಯ ವಿಸ್ತಾರವನ್ನು ಕವಿತೆಗೆ ಮಾತ್ರ ಹೆಚ್ಚು ಗುರುತಿಸಿದರೂ ಗದ್ಯ ಪ್ರಕಾರವಾದ ಇತರ ಸಂಶೋಧನೆ ವಿಮರ್ಶಾ ಲೇಖನಗಳಲ್ಲಿ ಅತ್ಯಂತ ಸರಳಭಾಷೆ ನಿರೂಪಣೆಯೊಂದಿಗೆ, ವಿಶೇಷವೆಂದರೇ ಸಂಪಾದನೆಯಂತಹ ಗ್ರಂಥಗಳಾದರು. ಅಲ್ಲಿಯು ವಿಶ್ಲೇಷಣೆ, ಅನಿಸಿಕೆಗಳನ್ನು ಸಾವಕಾಶವಾಗಿ ಬಳಸುತ್ತಾ ಬರುವುದು ಇವರ ಗದ್ಯಶೈಲಿಯ ಮೆಚ್ಚುಗೆ ಸಂಗತಿ. "ಈ ಕಾವ್ಯದಲ್ಲೂ ಅದೇ ಚಿತ್ರಣ ನಡೆದಿದೆ. ನರಕಿಗಳ ಉದ್ಧಾರದಲ್ಲಿ ಪಂಚಾಕ್ಷರಿಯ ಮಹಿಮೆಯಷ್ಟೇ ಅಲ್ಲದೆ ಸಾನಂದನ ಸಹಾನುಭೂತಿಯುಳ್ಳ ವ್ಯಕ್ತಿತ್ವಕ್ಕೂ ಕೊಂಚ ಅವಕಾಶ ಸಿಕ್ಕಿದೆ". ಒಟ್ಟಾರೆ ವಿಜಯಾದಬ್ಬೆಯವರ ಶೈಲಿಯು ಓದುಗರ ಬೌದ್ಧಿಕತೆಗೆ ಹೆಚ್ಚು ತ್ರಾಸ ನೀಡಿದ ಸುಲಭ ಬರಹವಾಗಿವೆ.

ಇ) ತಂತ್ರಗಾರಿಕೆ ಧೋರಣೆ

ತಂತ್ರಗಾರಿಕೆ ಎಂಬುದು ವಸ್ತುಬಳಕೆಗೆ, ಅಭಿವ್ಯಕ್ತಿಸಲು ಅನುಸರಿಸುವ ಒಂದು ಭಾಷಾ ಸ್ವರೂಪ. ಅಂದರೆ ಕಾವ್ಯದಲ್ಲಿ ಪ್ರತಿಮೆಯೆಂದರೆ ವಿಶಾಲವಾದ ಅರ್ಥದಲ್ಲಿ ಒಂದು ಬಗೆಯ ಶಬ್ದಚಿತ್ರ, ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಇದು ರೂಪಕದ ಮುಂದುವರಿದ ರೂಪ, ಕವಿತೆಯ ವಸ್ತುವು ಯಾವುದೋ ಇನ್ನೊಂದು ಭಾವಕ್ಕೂ ವಿಷಯಕ್ಕೂ ಪ್ರತಿಯಾಗಿ ಬಂದರೆ ಅದನ್ನು ಕಾವ್ಯಪ್ರತಿಮೆಯೆಂದು

೧. 'ಏನುಮಾಡಿಬಿಡಲಿ', ಇತಿಗೀತಿಕೆ, ವಿಜಯಾದಬ್ಬೆ, ಪು. ೧೪೩.

ಗ್ರಹಿಸಲಾಗುತ್ತದೆ. ಪ್ರತಿಮೆ ಎಂಬುದು ಮೂಲತಃ ಒಂದು ಶಬ್ದಚಿತ್ರ. ಅದು ಉಪಮೆ ರೂಪಕ ಇತ್ಯಾದಿ ಅಲಂಕಾರಗಳನ್ನು ತನ್ನ ಅಭಿವ್ಯಕ್ತಿಯ ಅಂಗವನ್ನಾಗಿ ಮಾಡಿಕೊಳ್ಳಬಹುದು. ಈ ರೀತಿಯ ಸಾಹಿತ್ಯ ರಚನೆಗೆ ವ್ಯಕ್ತಿಯ ಹಿನ್ನೆಲೆ ಧೋರಣೆಗಳ ಮೇಲೆ ಅತ್ಯಂತಿಕವಾಗಿ ಪ್ರಭಾವಿಕರಿಸುತ್ತವೆ. ಎಂತಹ ಪರಿಸರದಲ್ಲಿ ಬದುಕಿ ಬರೆಯುತ್ತಿದ್ದಾರೆ. ಅವರನ್ನು ಓದುವವರು ಯಾರು, ಆ ಬಗ್ಗೆ ಬರೆಯುವವರು ಯಾರು ಎಂಬ ಅಂಶಗಳು ಅವರ ಬರಹದ ಸ್ವರೂಪ ಲಕ್ಷಣಗಳ ಮೇಲೆ ಬಲವಾದ ಪ್ರಭಾವಬೀರುತ್ತವೆ. ಉದಾಹರಣೆಗೆ ಪುರುಷ ಪ್ರಧಾನವಾದ ವ್ಯವಸ್ಥೆಯಿರುವಲ್ಲಿ ಭಾಷೆ ಹಾಗು ಇದರ ಅಂಗವಾದ ಸಾಹಿತ್ಯ ತತ್ವಚಿಂತನೆಗಳೆಲ್ಲ, 'ಪುರುಷ' ಕೇಂದ್ರಿತ ರೀತಿಯಲ್ಲಿಯೇ ಬೆಳೆದಿರುತ್ತವೆ. ಸಾಹಿತ್ಯದ ಸ್ವರೂಪ ಧ್ಯೇಯ ಆದರ್ಶ ಮತ್ತು ಅವುಗಳ ಮಾನದಂಡಗಳು ಪುರುಷರಿಂದ ತಮ್ಮನ್ನೇ ದೃಷ್ಟಿಯಲ್ಲಿಟ್ಟುಕೊಂಡ, ರೂಪುಗೊಂಡಿರುವಂತಹ ಪರಿಸರದಲ್ಲಿ ಆ ಸಾಹಿತ್ಯಕ್ಕೆ ಪ್ರವೇಶ ಪಡೆಯುವುದು ಬಹುಮುಖ್ಯ ಹಾಗೇ ದುಸ್ತರವಾಗಬಹುದು. ಸಾಹಿತ್ಯ ಕ್ಷೇತ್ರಕ್ಕೆ ಮಹಿಳೆಯರು ಪ್ರವೇಶ ಪಡೆದರೂ ಅಲ್ಲಿ ಅವರ ಜಾಗ 'ತಡವಾಗಿ ಬಂದವರು' ನೈಜವಲ್ಲದ ತೋರಿಕೆ ಬರಹಗಾರರು, 'ಅತ್ಯುತ್ಸಾಹದಲ್ಲಿ ಬರೆಯುವವರು ಎಂಬ ಸಾಮಾನ್ಯ ಧೋರಣೆಯ ಕಾಲದಿಂದ ಹೊರತಾಗಿ ಈ ತನಕ ರೂಪಿಸಿರುವ ಕಾವ್ಯ ಸಿದ್ಧಾಂತಗಳೇನಿವೆ, ಮಾದರಿಗಳೇನಿವೆ ಅವುಗಳ ಜೊತೆಯಲ್ಲಿ ಸ್ತ್ರೀವಾದಿ ಬರಹಗಾರರು ನಡೆಸಿರುವ ಅನುಸಂಧಾನ ಅಥವಾ ಮುಖಾಮುಖಿ, ಮೂರನೆಯದ್ದು ಬದಲಾದ ಕಾಲ ಮತ್ತು ಸನ್ನಿವೇಶದ ಹಿನ್ನೆಲೆಯಲ್ಲಿ ಸಾಹಿತ್ಯದ ವ್ಯಾಖ್ಯಾನವೇ ಈ ಹಿಂದೆಂದೂ ಕಾಣದ ವಿಸ್ತಾರವನ್ನು ವೈವಿಧ್ಯತೆಯನ್ನು ಪಡೆದುಕೊಳ್ಳುತ್ತಿರುವ ಈ ದಿನಗಳಲ್ಲಿ ಸಾಹಿತ್ಯೇತರ ಕಾರಣಗಳಿಗಾಗಿ ಸಾಹಿತ್ಯವನ್ನು ಗ್ರಹಿಸುವ ಓದುಗಳು ಮುಖ್ಯವಾಗುತ್ತಿವೆ. ಈ ಬಗೆಯ ಓದುಗಳು ಈ ತನಕ ರೂಪಿತವಾಗಿರುವ ಕಾಲಾತೀತ ಸಾಹಿತ್ಯಕ ಮಾನದಂಡಗಳನ್ನು ಪ್ರಶ್ನಿಸುತ್ತ ಓದುವ ಓದುಗಳೇ ಆಗಿರುತ್ತವೆ. ಅದು ಸ್ತ್ರೀವಾದಿ ನೆಲೆಗಳನ್ನು ಗುರುತಿಸುವುದಾಗಿರಬಹುದು. ಯಜಮಾನ್ಯದ ನೆಲೆಗಳನ್ನು ಗುರುತಿಸುವ ಓದಾಗಿರಬಹುದು. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಓದುವ ಓದಾಗಿರಬಹುದು. ಸಮಾಜಶಾಸ್ತ್ರೀಯ ಅಥವಾ ಮನಃಶಾಸ್ತ್ರೀಯ ಓದಾಗಿರಬಹುದು. ಅಂದರೇ ಇಂದಿನ ಸ್ತ್ರೀವಾದಿ ಲೇಖಕಿಯರು ಮತ್ತು ಚಿಂತಕಿಯರು ಎದುರಿಸುತ್ತಿರುವ ನಿರ್ಣಾಯಕವಾದ ಪ್ರಶ್ನೆ ಇದು. ಯಾಕೆಂದರೆ ಸಾಹಿತ್ಯದ ಇವತ್ತಿನ ಬಹಳ ಮುಖ್ಯ ಬೆಳವಣಿಗೆಯೆಂದರೆ ಪಠ್ಯವೊಂದಕ್ಕೆ ನಾವು ಒದಗಿಕೊಳ್ಳುತ್ತಿರುವ ಬಹುಮುಖಿ ಓದುಗಳು ಅದು ಕೊಡುವ 'ರಸಾನುಭವ'ದ ಜೊತೆಗೆ ಅದು ಕಟ್ಟಿಕೊಡುವ ಸಾಮಾಜಿಕ-ರಾಜಕೀಯ

ಆಯಾಮಗಳು ರಸಾನುಭವದಷ್ಟೇ ಮುಖ್ಯ ಎನ್ನುವುದು ಇವತ್ತು ಪ್ರಶ್ನಾತೀತವಾಗಿ ಒಪ್ಪಿತವಾಗಿದೆ. ಕೃತಿಯೊಂದರ ಶ್ರೇಷ್ಠತೆ ಮಹತ್ವ ಪ್ರಸ್ತುತತೆ ಈ ಎಲ್ಲವನ್ನು ಇವತ್ತು ಕೇವಲ ಸಾಹಿತ್ಯಿಕ ಮಾನದಂಡಗಳು ನಿರ್ಧರಿಸುತ್ತಿಲ್ಲ. ಸಾಹಿತ್ಯೇತರ ಮಾನದಂಡಗಳು ಅಷ್ಟೇ ಶಕ್ತವಾಗಿ ಬಿಂಬಿಸುತ್ತಿವೆ. ಇಂದಿನ ವಸ್ತುಧೋರಣೆ ತಂತ್ರಗಾರಿಕೆಯಲ್ಲೂ ವಿಶೇಷತೆ ಇರುವುದನ್ನು ಕಾಣಬಹುದು.

ಕಾವ್ಯದಲ್ಲಿ ಪ್ರಧಾನವಾಗಿ ಪುರಾಣದ ಪಾತ್ರಗಳನ್ನು ಪುನರ್ಮನನಕ್ಕೆ ಒಡ್ಡುತ್ತ, ಒಡ್ಡುವಾಗ ಪುರಾಣದ ಸ್ತ್ರೀ ಪಾತ್ರಗಳ ಬಗೆಗೆ ಅನುಕಂಪ ಪುರುಷನ ಆಕ್ರಮಣ ಪ್ರವೃತ್ತಿಯ ವಿರೋಧ. ಪುರಾಣದ ಪಾತ್ರಗಳನ್ನು ಕಾವ್ಯ ಪ್ರತಿಮೆಯಾಗಿಸುವ, ತಂತ್ರಗಾರಿಕೆ ಸ್ತ್ರೀವಾದಿ ನೆಲೆಯಿಂದ ವಿಶಿಷ್ಟವಾಗಿ ವಿಜಯಾದಬ್ಬೆ ಅವರಲ್ಲಿ ಬಳಕೆಯಾಗಿದೆ.

"ಹೇಗೆ ಸಹಿಸಿದೆ ತಾಯಿ

ಹೇಗೆ ಸಹಿಸಿದೆ

ಇರುಳು ಹಗಲು ಎವೆಮುಚ್ಚದೆ

ಲಂಕೆಯ ದೆವ್ವ ಬನದಲ್ಲಿ

ಹೆದರಿ ಗೂಡಾಗಿ ಕುಳಿತು

ಕಾದ ಮೌಲ್ಯಗಳು ಅಪ

ಶಂಕೆಯ ಬೆಂಕಿಯಲ್ಲಿ

ಸೀದು ಕರಿಕಾಗುವಾಗ

ಹೇಗೆ ನುಂಗಿದೆ?[೧]

ಇಂತಹ ಪುರಾಣ ಪಾತ್ರಗಳ ಬಳಕೆ ಇಂದಿನ ಸಾಮಾಜಿಕ ದುರಂತ, ವ್ಯಂಗ್ಯವನ್ನು ಸಾಧಿಸಲು ಬಳಸಿರುವ ತಂತ್ರಗಾರಿಕೆ, 'ಶಂಬುಕ', 'ಅಭಿಮನ್ಯು ಒಂದು ಹಿನ್ನೋಟ', 'ಋಷಿಪತ್ನಿಯ ಸ್ವಗತ', 'ದಾಸರಹಾಡು ಭೀಷ್ಮರ ಸಾಕ್ಷಿ', ಇಂತಹ ಹಲವಾರು ಕವಿತೆಗಳ ಮೂಲಕ ವಸ್ತುವನ್ನು ಸಕ್ರಿಯವಾಗಿ ನೆಲೆಗೊಳಿಸುತ್ತಾರೆ. ವಿಚಾರತ್ಮಕವಾಗಿ

---

೧. ಇತಿಗೀತಿಕೆ, ವಿಜಯಾದಬ್ಬೆ, ಪ್ರ, ರಚನಾಪ್ರಕಾಶನ, ಮೈಸೂರು, ೧೯೯೬, ಪು. ೮೫.

"ಅಗಸ್ತ್ಯನ ಮೆದುಳು ಹಿಡಿದು
ರಾಮನ ಕತ್ತಿ ಕಸಿದುಕೊಂಡು
ನಿನ್ನ ತಲೆಕಾಯಲು
ಇದೋ ಬಂದೆ....
ಎನ್ನುವಾಗಲೆಲ್ಲಾ
ನಿನ್ನ ತಲೆಹಾರಿಬಂದು
ನನ್ನನ್ನು ಅಣಕಿಸುತ್ತದೆ"[೧]

ವಿಜಯಾದಬ್ಬೆ ಅವರ ಮತ್ತೊಂದು ಶಕ್ತ ಬಳಕೆ ಕನಸಿನ ರೂಪಕಗಳು ಅಂದರೇ ವಸ್ತು ಸಂಗತಿಯನ್ನು ಈ ತಂತ್ರಗಾರಿಕೆಯಲ್ಲಿ ಸಮರ್ಥವಾಗಿ ಬಂದಿವೆ.

"ಕಿರೀಟ ಬಿದ್ದೋಗಿ
ಬಣ್ಣ ಕರಗ್ಹೋಗಿ
ಕನಸು ಒಡದ್ಹೋಗಿ
ತಿಮ್ಮೀಗೆ ಅಳುಬಂತು"[೨]

"ಸ್ವತಂತ್ರ ನಿರಂಕುಶೆ ಕನಸಿನಲ್ಲಿ
ಮತ್ತಷ್ಟು ನಿನ್ನತ್ತ ನಿನ್ನೊಳಗೆ ಸರಿಯುತ್ತೇನೆ
ಒಳಗೊಳಗೇ ಎಂದಿನಿಂದಲೋ ಬೆಂದ
ನೂರೆಂಟು ಸಂಚಯಿತ ಭಾವಗಳು"[೩]

"ಉರಿಸುವಾಗೆರೆಯ ದಾಟಿದ್ದೆ
ನನ್ನ ಕನಸಿನ ಒಡತಿ ನಾನೆ ತಾನೇ?"[೪]

ವಿಜಯಾದಬ್ಬೆ ಅವರ ಮತ್ತೊಂದು, ವಸ್ತುಸಂಗತಿಯನ್ನು ಶಕ್ತವಾಗಿ ಸಾಧಿಸುವ ಪರಿ ಸ್ತ್ರೀ ಬಂಡಾಯದ ನೆಲೆಯಲ್ಲೇ ವಿಷಯ ಬಂದರೂ ನೇರವಾಗಿ ಅದನ್ನು

೧. ಇತಿಗೀತಿಕೆ, ವಿಜಯಾದಬ್ಬೆ, ಪ್ರ, ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೭೪
೨. ಇತಿಗೀತಿಕೆ, ವಿಜಯಾದಬ್ಬೆ, ಪ್ರ, ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೭೨.
೩. ಇತಿಗೀತಿಕೆ, ವಿಜಯಾದಬ್ಬೆ, ಪ್ರ, ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೫೦.
೪. ಇತಿಗೀತಿಕೆ, ವಿಜಯಾದಬ್ಬೆ, ಪ್ರ, ರಚನಾ ಪ್ರಕಾಶನ, ಮೈಸೂರು, ೧೯೯೬, ಪು. ೪೭.

ಸಾಧಿಸದೆ ಬಂಡಾಯದ ಬಸಿಯನ್ನು ಆಗಲೇ ಇರುವ ಸೌಮ್ಯರೂಪಗಳನ್ನು ಬಳಸುತ್ತ ದೌರ್ಜನ್ಯದ ರೂಪಗಳನ್ನು ನೀಡುವುದು. ಅಂದರೆ ಸ್ತ್ರೀವಾದಿ ಸಂವೇದನೆಯನ್ನು ನೀಡುವ ಮಾದರಿ ಉತ್ತಮ.

"ತೊತ್ತಿಗೆ ಸಹಧರ್ಮಿತ್ವದ ಹಣೆಬರಹ
ಮುದ್ದಾಗಿದೆ.
ಕಂದರದ ಆಳಕ್ಕೆ ದೂಕುವ
ಸೋಗುಗಳೂ ಸೊಗಸಾಗಿವೆ"[೧]

"ಒಂದು ವೇಳೆ
ರಾವಣ ದುಶ್ಯಾಸನರು ಹುಟ್ಟಿ
ನಿಮ್ಮ ಹೊತ್ತು ಸೀರೆ ಎಳೆದರೂ
ರಾಮ ಕೃಷ್ಣರಿದ್ದಾರೆ
ನಿಮ್ಮ ವಸ್ತ್ರ ಅಕ್ಷಯವಾಗಿಸಿ
ಅಗ್ನಿ ಪರೀಕ್ಷೆ ಮಾಡಿ
ಮೀಸೆ ತಿರುವಿಕೊಳ್ಳುವ ಭೂಪರು!"[೨]

"ಹುಟ್ಟು ಹಾಕಿದ್ದು ದೋಣಿ ಸರಿಮಾಡಿದ್ದು
ಎಲ್ಲ ಎಲ್ಲ ಎಡಗೈಯಿಂದಲ್ಲವೆ?
ಯಾವಾಗ ಯಾವಾಗ ಆ ಬಲಗೈ
ಸೌಟುಬಿಟ್ಟಿತ್ತು, ಬಿಡಲಾಯಿತು ಹೇಳಿ"[೩]

ಇಂತಹ ಸಾಕಷ್ಟು ರೂಪಗಳನ್ನು ಕವಿತೆಯ ಆಶಯವನ್ನು ಸಾಧಿಸುವಲ್ಲಿ ಬಳಸಿರುವುದು ಇವರ ಮೊನಚನ್ನು ನವಿರಾಗಿ ಹೇಳುವ ಒಂದು ವಿಶಿಷ್ಟತೆಯ ತಂತ್ರಗಾರಿಕೆಯಲ್ಲಿ ಕಾಣಬಹುದಾಗಿದೆ.

ಹೀಗೆ ಕವಿತೆಗಳಲ್ಲಿ ವ್ಯಕ್ತವಾಗುವಾಗ ತಂತ್ರಗಾರಿಕೆಯೊಂದಿಗೆ ವಸ್ತುಧೋರಣೆಯು ಸಹಜವಾಗಿ ಸ್ತ್ರೀವಾದಿ ಬಂಡಾಯನೆಲೆ ಹಾಗೂ ಮಾನವತೆಯ, ಸ್ತ್ರೀ ಸಹಜ ಪ್ರೇಮದ ಅಸ್ತಿತ್ವದ ತೊಳಲಾಟಗಳು ಹೆಣ್ಣಿನ ಹುಡುಕಾಟದಲ್ಲಿ ಸಮಾನದನಿ ಇದ್ದರೂ

---

೧. ಪಾಪ, ನೀವು ಹೊಣೆಯಲ್ಲ', ಇತಿಗೀತಿಕೆ, ವಿಜಯಾದಬ್ಬೆ, ಪು. ೧೪೧.
೨. ನಾರೀಮಣಿಗಳಿಗೊಂದು ಕಿವಿಮಾತು' ಇತಿಗೀತಿಕೆ, ವಿಜಯಾದಬ್ಬೆ, ೧೬೧.
೩. ಮುಖ್ಯಮಂತ್ರಿಯ ಹುಬ್ಬು, ಇತಿಗೀತಿಕೆ, ವಿಜಯಾದಬ್ಬೆ, ಪ್ರ. ರಚನಾಪ್ರಕಾಶನ, ಮೈಸೂರು, ೧೯೯೬, ಪು. ೨೬.

ಹುಡುಕಾಟದ ಪರಿ ಬೇರೆ ಬೇರೆಯಾಗಿವೆ. ವಿಜಯಾ ಅವರು ಸಮತಲದ ಬಿಂದುವಿನಿಂದಲೇ ಹೊರಟು ಸಿಂಹಾವಲೋಕನದ ಮೂಲಕ ಬಿಂಬಿತವಾಗುತ್ತವೆ.

ಮುಂದುವರೆದು ವಿಮರ್ಶೆ, ಸಂಶೋಧನೆ, ಸಂಪಾದನೆಯಂತ ಸಾಹಿತ್ಯ ಕ್ಷೇತ್ರದಲ್ಲು ಸಹ ತಂತ್ರಗಾರಿಕೆ, ಧೋರಣೆಯು ಸ್ತ್ರೀಪರ ಆದಮ್ಯ ಕಾಳಜಿಯಿಂದಲೇ ಹಾಗೂ ವಿಶ್ಲೇಷಣೆ, ತಾತ್ವೀಕತೆಯ ಒಳನೋಟದಿಂದ ಭಾಷೆಯು ಹೆಚ್ಚು ಗದ್ಯದಲ್ಲಿ ಬಳಕೆಯಾಗಿದೆ. ಇಲ್ಲಿ ಅವರ ಬೌದ್ಧಿಕ ಶಿಷ್ಟ ನೆಲೆಯಿಂದ ಶುದ್ಧ ಗ್ರಾಂಥಿಕ ನೆಲೆಯು ಕಂಡುಬರುತ್ತದೆ. ಸ್ತ್ರೀಸಂವೇದನೆ ಮತ್ತು ಯಜಮಾನ್ಯ ಸಂವೇದನೆಯ ನಡುವಿನ ಘರ್ಷಣೆ ಎಂದು ಗ್ರಹಿಸುವುದಾದರೆ ಸ್ತ್ರೀವಾದಿ ಶಾಸ್ತ್ರೀಯ ಪರಿಭಾಷೆಯಲ್ಲಿ ವಿವರಿಸಿಕೊಳ್ಳುವುದೇ ಈ ಬಗೆಯ ಅಧ್ಯಯನಗಳು ಅನಿವಾರ್ಯವಾಗಿ ಪರಿಶೀಲಿಸಬೇಕಾಗುವುದು ಲಿಂಗರಾಜ ಕಾರಣ ಕಾರ್ಯ ಮಾದರಿಗಳನ್ನು ಆದರೆ ಇದನ್ನು ವ್ಯಕ್ತಿತ್ವದ ಅನನ್ಯತೆಯ ಹುಡುಕಾಟ ಎಂದು ಗುರುತಿಸಬೇಕಾಗುತ್ತದೆ. ಅನೇಕ ಕಾರಣಗಳಿಗಾಗಿ ಇಂದೂ ಕೂಡ ಸ್ತ್ರೀವಾದಿ ಚಿಂತನೆಯ ಬಗ್ಗೆ ಮಾತನಾಡುವುದು ಸಮಸ್ಯಾತ್ಮಕವೇ ಅನ್ನಬಹುದಾದಷ್ಟು ಸಂಕೀರ್ಣವಾಗಿದೆ. ಸ್ತ್ರೀವಾದಿ ಚಿಂತನೆ ಎನ್ನವುದು ಕೇವಲ ಒಂದು ವಿಮರ್ಶಾ ಪಂಥವಲ್ಲ. ಒಂದು ಸೈದ್ಧಾಂತಿಕ ನಿಲುವು ಮಾತ್ರವಲ್ಲ. ಅದೊಂದು ಜೀವನ ಕ್ರಮ ಅನ್ನುವುದನ್ನು ಅದರಲ್ಲಿ ಸಮಗ್ರತೆಯಿಂದ ನಿರೀಕ್ಷಬೇಕಾಗುತ್ತದೆ. ಅಂದರೆ ವಿಮರ್ಶಾತ್ಮಕ ಬರವಣಿಗೆಯಲ್ಲು ಸಹ ಹಿತೈಷಿಣಿ ಒಂದು ನೆನಕೆ, ಪತ್ರಕರ್ತೆಯಾಗಿ ರಾಜವಾಡೆ, ತ್ರಿವೇಣಿ ಒಂದು ಟಿಪ್ಪಣಿ, ವಾಸಂತಿ ಬಾಯಿಪಡಕೋಣೆ, ಅಕ್ಕ ಒಂದು ಪರಿಚಯ. ಈ ರೀತಿಯ ವ್ಯಕ್ತಿ ಪರಿಚಯದಂತ ವಿಶ್ಲೇಷಣೆ ಲೇಖನಗಳು ಸಹ ಸ್ತ್ರೀಸಾಹಿತ್ಯದ ವಸ್ತು ಧೋರಣೆಯನ್ನು ನಿಕಷಕ್ಕೆ ಒಡ್ಡುವುದು ಇವರ ವಿಮರ್ಶಾತ್ಮಕವಾದ ಸ್ತ್ರೀವಾದಿ ಬಹುಮುಖತೆಯ ಅರಿವಿನ ಧೋರಣೆಗೆ ವಿಶೇಷತೆಯನ್ನು ನೀಡುತ್ತದೆ.

ಒಟ್ಟಾರೆ ವಿಜಯಾ ಅವರ ಸ್ತ್ರೀವಾದಿ ಬರಹಗಳು ಈಗಾಗಲೇ ರೂಢಿಗತ ಅಭಿಪ್ರಾಯಗಳನ್ನು ಒಡೆಯುವ ಕೆಲಸವನ್ನಷ್ಟೇ ಮಾಡುವುದಿಲ್ಲ ಅದು ಮೌಲ್ಯಗಳನ್ನು ಮತ್ತು ಅಭಿಪ್ರಾಯಗಳನ್ನು ಕಟ್ಟುವುದರ ಬಗೆಗೂ ಆಸಕ್ತವಾಗಿದೆ. ಪಾರಂಪರಿಕವಾದ, ಪುರುಷ ಕೇಂದ್ರಿತ ದೃಷ್ಟಿಕೋನಗಳು ಸಾಹಿತ್ಯ ವಿಮರ್ಶೆಯಲ್ಲಿ ಹಾಸುಹೊಕ್ಕಾಗಿ ಬಳಕೆಯಾಗುತ್ತಿದ್ದ ಸಂದರ್ಭದಲ್ಲಿ ಅವರ ವಿಮರ್ಶಾತ್ಮಕ ಬರಹಗಳು, ಸಾಹಿತ್ಯವನ್ನು ಬೇರೊಂದು ದೃಷ್ಟಿಕೋನದಲ್ಲಿ ಅಂದರೆ ಮಹಿಳಾ ವಿಮೋಚನೆಗೆ, ಮಹಿಳಾಸಬಲೀಕರಣ ಮತ್ತು ನ್ಯಾಯಾಂಗ, ವೈಯಕ್ತಿಕ ಕಾನೂನಿನ ಸುಳಿಯಲ್ಲಿ ಮಹಿಳೇ ಇಂತಹ ಸ್ತ್ರೀಪರ ಧೋರಣೆಯನ್ನು ಗಮನಾರ್ಹವಾಗಿ ಸಾಮಾಜಿಕವಾಗಿ ಸಮಾನತೆಯ ಪ್ರತೀಕಗಳು

ನೆಲೆಯಾಗಬೇಕೆಂಬ ದೃಷ್ಟಿಯು ಶೋಧಿತವಾಗುತ್ತದೆ. ಸಂಶೋಧನೆ ಸಂಪಾದನೆಯಲ್ಲು ಸಾರಸರಸ್ವತಿ, ಲೇಖ–ಲೋಕ, ಶ್ಯಾಮಲಾ ಸಂಚಯದಂತ ಕೃತಿಗಳು ಅತ್ಯಂತ ವಸ್ತು ನಿಷ್ಠವಾಗಿ ಸ್ತ್ರೀ ಸಾಹಿತ್ಯದ ವಸ್ತು ವಿಶ್ಲೇಷಣೆಗೆ ಒಳಗು ಮಾಡುವುದು ಅಧ್ಯಾಯ ಮೂರರಲ್ಲಿ ಕಾಣಬಹುದು.

ಒಟ್ಟಾರೆ ಧೋರಣೆಯಲ್ಲಿ ಸಾಹಿತ್ಯ ಬೇರೆ– ಮಾನವೀಯ ಅನುಕಂಪ ಬೇರೆ ಅಲ್ಲ. ಬರಹಗಳಲ್ಲಿ ಹಾಗೂ ವಿಚಾರಧಾರೆಯಲ್ಲಿ ಒಂದು ಖಚಿತತೆಯನ್ನು ತೋರಿಸುತ್ತವೆ. ಗತ–ವರ್ತಮಾನಗಳ ಕ್ರೂರ ಅನುಭವವನ್ನು ಚಾರಿತ್ರಿಕ ವಾಸ್ತವತೆಯಿಂದ ಅರ್ಥೈಸಿಕೊಳ್ಳುವ ನೆಲೆಯು ಬಹುಮುಖ್ಯ ಧೋರಣೆಯು ಹೊನ್ನಮ್ಮನ ಬಗೆಗಿನ ಪ್ರತಿಕ್ರಿಯೆಯನ್ನು ರೂಪಿಸುವುದರ ಮೂಲಕ ಸಮಕಾಲೀನ ಸಾಮಾಜಿಕತೆಯನ್ನು ತರ್ಕಕ್ಕೊಳಗಾಗಿಸುತ್ತಾರೆ. "ಹೀಗಿರುವುದರಿಂದಲೇ ಮತ್ತು ಇಷ್ಟೇ. ಆದುದರಿಂದಲೇ ಇಷ್ಟು ದೊಡ್ಡ ಪ್ರಮಾಣದ ವರ್ಗವೊಂದು ನಮ್ಮ ಒಟ್ಟು ಚರಿತ್ರೆಯಲ್ಲಿ ಉಳಿದ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ನಿಷ್ಕ್ರೀಯವಾಗಿ ಉಳಿದಿದ್ದು ಪುರುಷನಿಗೆ ಈ ಜೀವನ ಅವನ ಜೀವನದ ಒಂದು ಭಾಗವಾದರೆ, ಸ್ತ್ರೀಯರಿಗೆ ಈ ಭಾಗವೇ ಸರ್ವಸ್ವವಾಗಬೇಕಂತೆ ಎಂದರೆ ಕೂಪಮಂಡೂಕಗಳಾಗಿಯೇ ಉಳಿಯಲು ಎಂಥ ಸುವರ್ಣಾವಕಾಶ" ಇದೇ ಸಮಸ್ಯೆಯ ಮುಂದುವರಿಕೆಯನ್ನು ಸಮಕಾಲೀನ ವಾಸ್ತವದಲ್ಲಿ ಅವರು ಗುರುತಿಸುತ್ತಾರೆ. "ನಮ್ಮ ಈಚೀನ ವಿದ್ಯಾವಂತ ಯುವತಿಯರು ಹೆಚ್ಚು ಕಡಿಮೆ ಬೇರೆ ರೂಪಗಳಲ್ಲಿ ಇದೇ ಚೌಕಟ್ಟಿನಲ್ಲಿ ವಿಹರಿಸುತ್ತಿದ್ದಾರೆಂದರೆ ಆಶ್ಚರ್ಯವಿಲ್ಲ" ಎಂದು ಖಂಡಿಸುತ್ತಾ ಪರ್ಯಾಯವಾಗಿ ಮಹಿಳಾ ಪರವಾದ ಆಲೋಚನೆಗಳು ಹಾಗೂ ಸ್ತ್ರೀವಾದ ಜಾಗತಿಕ ನೆಲೆಯಲ್ಲಿ ಅಪಾರ ಚರ್ಚೆಗೆ ಒಳಪಡುತ್ತಿರುವಂಥ ದಿನಗಳಲ್ಲಿಯೂ ಸ್ತ್ರೀವಾದಿ ವಿಮರ್ಶೆಯ ಬಗೆಗೆ ಅನುಮಾನ, ಆಕ್ಷೇಪಣೆಗಳಿರುವುದರ ಬಗ್ಗೆ ಬರಹ ಬಿಂಬಿಸುತ್ತದೆ. ಕೃತಿಯನ್ನು ಕೃತಿ–ರಚನೆಯ ಆಯಾಮವಲ್ಲಷ್ಟೇ ಹಿಡಿದಿರುವ ಶುದ್ಧ ಸಾಹಿತ್ಯಕ ವಿಮರ್ಶೆಗಿಂತ ಕೃತಿಯು ಮಹಿಳಾ ಸಂವೇದನೆಯನ್ನು ನಿರ್ಧರಿಸುವ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಪ್ರಧಾನ ನೆಲೆಗೆ ತರುವ ವಿಧಾನವು ವಿಶೇಷವಾದದ್ದು. ಈ ದೃಷ್ಟಿಯಿಂದ ವಿಜಯಾದಬ್ಬೆ ಅವರ ಸ್ತ್ರೀವಾದಿ ಸಂವೇದನೆ ಧೋರಣೆಯನ್ನು ಪ್ರಧಾನವಾಗಿ ಗುರುತಿಸಿದರು. ಮಾನವತೆಯ ವ್ಯಕ್ತಿವಿಶಿಷ್ಟತೆಗೆ ಅವರು ಕೊಡುವ ನೋಡುವ ಪರಿ. ವಿಚಾರವಂತ ಲೇಖಕಿಯ ಗುಣದಿಂದಲೆ ಸ್ತ್ರೀವಾದಿ ವಿಮರ್ಶಾಲೇಖನಗಳು. "ಒಮ್ಮೆ ಮುಂಬೈನಿಂದ ಕರೆತಂದರೆನ್ನಲಾದ ಹದಿನಾರು ಮಂದಿ ವೇಶ್ಯೆಯರನ್ನು ಮೈಸೂರಿನ ಆಸ್ಪತ್ರೆಯೊಂದರ ವೈದ್ಯಕೀಯ ಸಿಬ್ಬಂದಿ ಅವರಿಗೆ ಏಡ್ಸ್ ತಗುಲಿರಬಹುದೆಂದು ಪರೀಕ್ಷಿಸಲು ಹಿಂಜರಿದು

ನಿರಾಕರಿಸಿದ ಸಂದರ್ಭದಲ್ಲಿ ಪ್ರತಿಭಟನೆಯ ಮೂಲಕ ವೇಶ್ಯೆಯರಿಗೆ ಚಿಕಿತ್ಸೆ ಕೊಡಿಸಿದ್ದು" ವಿಜಯಾ ಅವರ ಬದುಕಿನ ಮಹಿಳಾಪರ ಹೊಂದಿರುವಂತ ಧೋರಣೆಯು ವಾಸ್ತವಕ್ಕೂ ಬರೆವಣಿಗೆಗೂ ಇರುವ ಸಾಮಾಜಿಕ ಸಂಬಂಧ ಹಾಗೂ ಅದನ್ನು ಸಾಧಿಸಬೇಕಿರುವ ಅಂಶಗಳನ್ನು ಲೇಖಕಿಯು ಹೊಂದಿದ್ದ. ಸ್ತ್ರೀವಾದಿ ಧೋರಣೆಯ ವೈಚಾರಿಕ ದೃಷ್ಟಿಯನ್ನು ಗುರುತಿಸಿಕೊಡುತ್ತವೆ. ಅಂದರೆ 'ಮಹಿಳೆ ಮತ್ತು ಮಾನವತೆ' ಸಂಕಲನದ, 'ಒಂದು ರೊಟ್ಟಿಗೆ ಒಂದು ರವಿಕೆಗೆ' ಎಂಬ ಲೇಖನ ಮುಂಬೈ, ಕಲ್ಕತ್ತ, ದೆಹಲಿ, ದುಬೈನ ಮಾರುಕಟ್ಟೆಗಳಿಗೆ ಮಾರಾಟವಾಗುವ ಹಿನ್ನೆಲೆ ಈ ಹೆಣ್ಣುಮಕ್ಕಳ ದುಃಸ್ಥಿತಿಯನ್ನು ತಿಳಿಸುತ್ತದೆ. ವಿಜಯಾದಬ್ಬೆ ಅವರ ಬರಹದಲ್ಲಿ ಬದುಕಿಗೆ ಹೊರತಾಗಿ, ಸಾಹತ್ಯ ಮನರಂಜನೆಗಾಗಿ ಮೂಡುವುದು ಎಂಬ ಅಂಶವನ್ನು ಕನಿಷ್ಠವಾಗಿ ಸ್ವೀಕರಿಸುವುದನ್ನು ಒಟ್ಟಾರೆ ಸಾಹಿತ್ಯ ಧೋರಣೆಯಲ್ಲಿ ಕಾಣಬಹುದಾಗಿದೆ. ಬದುಕಿನಿಂದ ವಿಮುಖವಾದ ಜೀವದನಿಯಿಲ್ಲದ, ಆಲೋಚನೆಗೆ ವ್ಯಕ್ತಿಯನ್ನು ಮುಖಮಾಡದ ಸಾಹಿತ್ಯ ಇವರ ಇಡೀ ಬರಹರೂಪದಿಂದ ನಮಗೆ ಸಿಗುವುದು ಕಡಿಮೆ ಅನ್ನಬಹುದು. ವಿಶ್ವಸುಂದರಿ ಸ್ಪರ್ಧೆಯ ಸಂದರ್ಭದಲ್ಲಿ ಹೆಣ್ಣಿನ ಪ್ರದರ್ಶನವನ್ನು ತೀವ್ರವಾಗಿ ಟೀಕಿಸಿ ಅದನ್ನೊಂದು ಸಾರ್ವಜನಿಕ ಚರ್ಚೆಯಾಗಿ ಅವರು ರೂಪಿಸಿದ್ದು ಅವರ ಸ್ತ್ರೀ ವಿಮೋಚನೆ ಚಿಂತನೆಯ ಫಲದಿಂದ ಬರಹರೂಪವಾದ್ದು ಎಂಬುದನ್ನು ಗಮನಿಸಿದಾಗ ಸ್ತ್ರೀವಾದಿ ಅಧ್ಯಯನವು ಈ ಹೊತ್ತು ಸಾಹಿತ್ಯಕ್ಕೆ ಮಾತ್ರ ಮಿತಗೊಳ್ಳದೆ ಅನ್ಯ ಅನುಭವ ಜ್ಞಾನವಲಯಗಳಲ್ಲಿ ವಿಸ್ತರಿಸುವ ಅವರ ಚಳುವಳಿ ಪರ ಧೋರಣೆಯನ್ನು ಗುರುತಿಸುತ್ತವೆ. ವಿಜಯಾದಬ್ಬೆ ಅವರ ಸಾಹಿತ್ಯದಲ್ಲಿ ಕಾಣಬಹುದಾದ ಮತ್ತೊಂದು ಪ್ರಮುಖ ವಸ್ತುಧೋರಣೆ ಎಂದೆ ಗುರುತಿಸಿಕೊಳ್ಳಬಹುದು. ಅದು ಮಹಿಳಾ ಸಾಹಿತ್ಯದ ಕ್ರೋಡಿಕರಣ ಅದರೊಂದಿಗೆ ನಡೆಯುವ ವಿಶ್ಲೇಷಣೆಯನ್ನು ಅವರ ಸಾಹಿತ್ಯ ಧೋರಣೆಯೆಂದೇ ನೆನೆಯಬೇಕು. 'ಅಕ್ಕ : ಒಂದು ಪರಿಚಯ', 'ಹೊನ್ನಮ್ಮನ ಕಿವಿಮಾತಿಗೆ ಒಂದು ಪ್ರತಿಕ್ರಿಯೆ', 'ಹಿತೈಷಿಣಿ : ಒಂದು ನೆನಕೆ' ' ಪತ್ರಕರ್ತೆಯಾಗಿ ರಾಜವಾಡೆ' 'ತ್ರೀವೇಣಿ – ಒಂದು ಟಿಪ್ಪಣಿ', 'ವಾಸಂತಿಬಾಯಿ ಪಡಕೋಣೆ', ಸಾರಸರಸ್ವತಿ, ಶ್ಯಾಮಲ ಸಂಚಯ, ಲೇಖ–ಲೋಕ ಹೀಗೆ ಕೆಲವು ಕೃತಿಗಳು, ಲೇಖನಗಳಲ್ಲಿ ಆಧುನಿಕ ಕನ್ನಡ ಸಾಹತ್ಯದಲ್ಲಿ ಅವರ ಬರವಣಿಗೆಯ ಅನನ್ಯತೆಯನ್ನು ಗುರುತಿಸುವುದು ಇವರ ಪ್ರಮುಖ ಸಾಹಿತ್ಯ ಧೋರಣೆಯಲ್ಲಿ ಕಾಣಬಹುದು. "ಅನುಪಮಾ, ವಾಸಂತಿ ಇವರೆಲ್ಲರ ಆತ್ಮಚರಿತ್ರೆಯಲ್ಲಿ ಅವರ ಬರಹದ ಬದುಕಿಗೆ ತುಂಬ ಕಡಿಮೆ ಗಮನ ಸಿಕ್ಕಿದೆ. ವಾಸಂತಿಯವರಲ್ಲಿ ಒಂದೆರಡು ವಾಕ್ಯಗಳಲ್ಲಿ, ಕೆಲವು ಸಂದರ್ಭಗಳಲ್ಲಿ ಬರಹದ ಪ್ರಸ್ತಾಪ ಮಾಡುವುದನ್ನು ಬಿಟ್ಟರೆ ಅವರು ಯಾವಾಗ ಏನು

ಬರೆದರು, ಅವರ ಬರಹ ಜೀವನದ ಒಳ ವಿವರಗಳೇನು ಎಂಬುದು ತಿಳಿಯುವುದಿಲ್ಲ. ಲೇಖಕಿಯಾಗಿ ಅವರನ್ನು ಸಮಾಜ ಸರಿಯಾಗಿ ಸಕಾಲಕ್ಕೆ ಗುರುತಿಸಿದ್ದರೆ ವಾಸಂತಿಯಂಥವರ ಬರೆಹದ ಬದುಕಿನ ಸ್ವರೂಪವೇ ಬೇರೆಯಾಗಿರುತ್ತಿತ್ತೋ ಏನೋ"[೧] ಹೀಗೆ ಲೇಖಕಿಯರ ಬದುಕು-ಬರೆಹ ಕುರಿತ ಪ್ರಮುಖ ಕಾಳಜಿಯನ್ನು ವಿಜಯಾ ಅವರ ಸಾಹಿತ್ಯ ಕೃಷಿಯ ಹಲವು ಮಗ್ಗಲುಗಳಲ್ಲಿ ಹರಿದಿರುವುದನ್ನು ಅನಾಯಾಸವಾಗಿ ಸ್ತ್ರೀವಾದಿ ಧೋರಣೆಯಾಗಿ ನೆಲೆಗೊಳಿಸಬಹುದು.

ವಿಜಯಾದಬ್ಬೆ ಅವರ ಸಾಹಿತ್ಯದ ಧೋರಣೆ ಅಂದರೆ ವಸ್ತು ನಿರೂಪಣೆಯ ನೆಲೆಯನ್ನು ಹಳಗನ್ನಡ ಸಾಹಿತ್ಯದ ಶೋಧ, ವಿಮರ್ಶೆ ಧಾಟಿಯಿಂದ ಬಂದವು. ಅದು 'ನಾಗಚಂದ್ರ – ಒಂದು ಅಧ್ಯಯನ', 'ನಯಸೇನ', 'ಸಾನಂದ ಗಣೇಶ ಸಾಂಗತ್ಯ' ಗ್ರಂಥಗಳನ್ನು ಗುರುತಿಸಿಕೊಳ್ಳಬಹುದು. ನಾಗಚಂದ್ರ : ಒಂದು ಅಧ್ಯಯನದಲ್ಲಿ ಬರುವ ರಾಮಾಯಣದ ಸುದೀರ್ಘ ಹಿನ್ನೆಲೆ, ವಿವಿಧ ರೂಪಗಳ ವಿಶ್ಲೇಷಣೆ, ನಯಸೇನ ಕೃತಿಯ ಜೈನ ಪರಂಪರೆಯ ವಿವರಣೆ ಇಂತಹ ಹಲವು ಅಂಶಗಳಿಂದ ಹಳಗನ್ನಡ ಸಾಹತ್ಯದ ಬಗ್ಗೆ ಅಂತರ ತಾತ್ವಿಕ ಚಿಂತನೆಯ ಸೂಕ್ಷ್ಮ ವಿವೇಚನೆಯ ನೆಲೆಗಳನ್ನು, ವಿಸ್ತಾರರೂಪವನ್ನು ಗುರುತಿಸಬಹುದು.

ಒಟ್ಟಾರೆ ಸ್ತ್ರೀವಾದಿ ಚಿಂತಕಿ, ವಿಮರ್ಶಕಯಾಗಿ ವಿಜಯಾದಬ್ಬೆ ಬರೆವಣಿಗೆಯ ಧೋರಣೆಯನ್ನು ಗುರುತಿಸುವಲ್ಲಿ "ವಿಜಯಾದಬ್ಬೆ ಇದನ್ನು ವಿಶ್ಲೇಷಿಸುವ ರೀತಿ ಇದಕ್ಕೆ ವಿರುದ್ಧ ದಿಕ್ಕಿನದು. ವಿಜಯಾದಬ್ಬೆಯವರ ನಿಲುವನ್ನು, ಅವರ ಒಟ್ಟು ಪ್ರಯತ್ನವನ್ನು ನಾನು ಸ್ವಾಯತ್ತತೆಗಾಗಿ ಸ್ತ್ರೀವಾದಿ ಮೀಮಾಂಸೆ ನಡೆಸಿದ ಎರಡನೆಯ ಮಾದರಿ ಎಂದು ಕರೆಯುತ್ತೇನೆ. ಪ್ರಧಾನ ಸಾಹಿತ್ಯ ಮೀಮಾಂಸೆಯಿಂದ ಒಡೆದು ನಿಲ್ಲುವ, ವಿಶಿಷ್ಟ ಮೀಮಾಂಸೆಯನ್ನು ರೂಪಿಸುವ ಅಗತ್ಯ, ಅನಿವಾರ್ಯತೆ ಮತ್ತು ಮಹತ್ವವನ್ನು ಕಂಡುಕೊಂಡ ಕನ್ನಡದ ಮೊದಲ ಲೇಖಕಿ, ಚಿಂತಕಿ ಎಂದರೆ ವಿಜಯಾದಬ್ಬೆ"[೨] ಲೇಖಕಿಯ ಕುರಿತ ಈ ಮಾತುಗಳು ಅವರ ವಸ್ತುಧೋರಣೆಯ ಪ್ರಧಾನ ನೆಲೆಯನ್ನು ಸಾಮಾಜಿಕ ಕಳಕಳಿಯಿಂದ ಬಂದವು. ಕೇವಲ ಸ್ತ್ರೀವಾದಿ ಸಿದ್ಧಾಂತಕ್ಕೆ – ಸಿದ್ಧಾಂತವಾಗಿ ಅನುನಯ ಮಾದರಿಗಳಲ್ಲ. ಮಾನವತೆಯ ಪರಮಕಾಳಜಿ ಧೋರಣೆಯನ್ನು ಬಿಂಬಿಸುವಂತವಾಗಿವೆ ಎಂಬುದನ್ನು ಗುರುತಿಸಲು ಸಹಾಯಕ ಇಂತಹ ಹೇಳಿಕೆಗಳು.

---

೧. ನಾರಿ : ದಾರಿ – ದಿಗಂತ, ವಿಜಯಾದಬ್ಬೆ, ಪ್ರ, ರಚನಾ ಪ್ರಕಾಶನ, ಮೈಸೂರು, ಪು. ೧೨೫.

೨. ಕನ್ನಡ ಸಾಹಿತ್ಯ ಮೀಮಾಂಸೆ, ಸಂ: ಡಾ. ಸಬಿಹಾ ಭೂಮಿಗೌಡ, ಪು. ೧೬೨.

ಹೀಗೆ ತಂತ್ರಗಾರಿಕೆ – ಧೋರಣೆಯಲ್ಲಿ ಸ್ತ್ರೀ ಸಂವೇದನೆಯು ಪ್ರಧಾನವಾದರೂ ಸಂಪಾದನೆಯಲ್ಲಿ ಸಂಶೋಧನಾತ್ಮಕ ಧಾಟಿಯಿಂದ ಕಥಾನಿರೂಪಣೆಯಂತಹ ಕಾರ್ಯವನ್ನು ಬರೆವಣಿಗೆಯ ತಂತ್ರಗಾರಿಕೆಯಲ್ಲಿ ಗುರುತಿಸಿಕೊಳ್ಳುತ್ತವೆ. 'ಹಿತೈಷಿಣಿ ಹೆಜ್ಜೆಗಳು', ಸರಾಸರಸ್ವತಿ, ಶ್ಯಾಮಲಾದೇವಿಯರ ಕೃತಿಗಳಲ್ಲಿ ಹಾಗೂ ಧೋರಣೆ ಎಂಬುದು ಸ್ತ್ರೀವಾದಿ ನೆಲೆಯೊಂದಿಗೆ, ಮಾನವತಾವಾದೀ ಆಲೋಚನೆ, ಮಾನವ ಬದುಕಿನ ಅಸ್ಪಷ್ಟತೆ, ವೈರುಧ್ಯತೆಯ ಬಹುಮುಖತ್ವಗಳನ್ನು ಕೃತಿಗಳಲ್ಲಿ ಶೋಧಿಸುವ ವೈಚಾರಿಕ, ಸ್ತ್ರೀಯಾತ್ಮಕ ಹಿನ್ನೆಲೆಯನ್ನು ಹೊಂದಿವೆ ಎಂಬುದಾಗಿ ಪ್ರಧಾನವಾಗಿ ನೋಡಬಹುದು.

ಅಧ್ಯಾಯ ೫

ಉಪಸಂಹಾರ

ಅಧ್ಯಯನ, ಚಿಂತನೆ, ವಿಮರ್ಶನಶಕ್ತಿ, ವಿವೇಕಿ, ಪ್ರಾಮಾಣಿಕತೆ, ಸಾವಧಾನತೆ. ಈ ಎಲ್ಲವೂ ಪಾಂಡಿತ್ಯದೊಂದಿಗೆ ನಿರಂಹಕಾರದಿಂದ ರೂಪು ತಳೆದರೆ ಹೇಗೆ? ಆ ರೀತಿಯಲ್ಲಿ ರೂಪವೆತ್ತ ಅಪರೂಪದ ಸ್ತ್ರೀವಾದಿ ಚಿಂತಕಿ, ವಿಮರ್ಶಕಿ ಬರಹಗಾರ್ತಿ ಆಧುನಿಕ ಕನ್ನಡದ ಸಾಧನ ಲೇಖಕಿ ಡಾ. ವಿಜಯಾದಬ್ಬೆ.

'ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ'ದ ಈ ನಿಬಂಧವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅದರಲ್ಲೆ ಉಪಸಂಹಾರವಾದ ಈ ಭಾಗವು ಸೇರಿ ರಚನೆಯಾಗಿರುತ್ತದೆ.

ಒಂದನೇ ಅಧ್ಯಾಯವು 'ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ' ಆಗಿದ್ದು ಬರಹಗಾರ್ತಿಯಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂದ ಸಂದರ್ಭ, ಮಹಿಳಾ ಸಾಹಿತ್ಯ ರಚನೆಯ ಅಧ್ಯಯನದ ಅವಶ್ಯಕತೆಯಲ್ಲಿ, ವಸ್ತುನಿಷ್ಠವಾಗಿ ಬರೆದ ಕೆಲವೇ ಬರಹಗಾರ್ತಿಯರ ನಡುವೆ ಸಾಹಿತ್ಯ ವಿಮರ್ಶೆ, ಸ್ತ್ರೀವಾದಿ ಸಾಹಿತ್ಯ ರಚನೆಯ ಮೂಲಕ ಸ್ತ್ರೀವಾದಿ ಸಾಹಿತ್ಯದಲ್ಲಿ ಬಹುಮುಖ್ಯವಾಗಿ ಗುರುತಿಸಿಕೊಂಡಿರುವುದರಿಂದ ಅಧ್ಯಯನಕ್ಕೆ ಪ್ರೇರಣೆಯಾಗುತ್ತಾರೆ ಎಂಬ ಅಂಶವನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯವು 'ವ್ಯಕ್ತಿಯಾಗಿ ವಿಜಯಾದಬ್ಬೆ' ಬಹುಮುಖ್ಯವಾದ ಅಧ್ಯಯನದ ಭಾಗ. ಅಂದರೆ ಸಾಹಿತ್ಯ ರಚನೆಯ ಹಿನ್ನೆಲೆಯು ಅದರ ವಸ್ತು, ಧೋರಣೆಯನ್ನು ಸಹಜವಾಗಿ ಪ್ರೇರಣೆಯನ್ನು ನೀಡುತ್ತದೆ. ಆದ್ದರಿಂದ ವ್ಯಕ್ತಿಯಾಗಿ ಅವರು ಬೆಳೆದ ಪರಿಸರ, ಸಾಮಾಜಿಕ ಕಾಳಜಿ, ಜೀವನದಲ್ಲಿ ಮಹಿಳಾಪರ ಹೊಂದಿದ ಆಲೋಚನೆಗಳು, ಮಾನವತೆಯ ಸಹಕಾರ ಗುಣ, ಮಹಿಳಾಚಳವಳಿ, ಪ್ರತಿಭಟನೆಯಿಂದ ಅವರ ಮೇಲೆ ಹೊಂದಿದ್ದ ಸ್ತ್ರೀ ವಿಮೋಚನೆಯ ಚಿಂತನೆಗಳು, ಲೇಖಕಿಯಾಗಿ ಸಹಜವಾಗಿ ಅಂತ ಬರೆವಣಿಗೆಯಲ್ಲಿ ತೊಡಗಲು ಕಾರಣವನ್ನು ಕಾಣಬಹುದಾಗಿದೆ ಮತ್ತು ಸ್ನೇಹಪರ ವ್ಯಕ್ತಿತ್ವದಿಂದ ಅಧ್ಯಾಪಕಿಯಾಗಿ ಗಳಿಸಿದ ಆಪ್ತರು, ಶಿಷ್ಯರ ಪ್ರೀತ್ಯಾಧಾರಗಳನ್ನು ಗುರುತಿಸಬಹುದಾಗಿದೆ.

ಮೂರನೇ ಅಧ್ಯಾಯವು 'ಬರಹಗಾರ್ತಿಯಾಗಿ ವಿಜಯಾದಬ್ಬೆ' ಭಾಗವು ಈ ಅಧ್ಯಯನದ ಮುಖ್ಯ ಒಡಲು ಎನ್ನಬಹುದು. ಇಲ್ಲಿ ಕವಿಯತ್ರಿಯಾಗಿ, ವಿಮರ್ಶಕಿಯಾಗಿ, ಸಂಶೋಧಕಿ, ಸಂಪಾದಕಿಯಾಗಿ, ಇತರೆ ಸಾಹಿತ್ಯದ ಒಟ್ಟು ನೋಟವನ್ನು ಒಳಗೊಂಡಂತೆ ಪೂರ್ಣಸಾಹಿತ್ಯದ ಅಧ್ಯಯನವನ್ನು ಮಾಡಲಾಗಿದೆ.

ವಿಜಯಾದಬ್ಬೆ ಬರೆಯಲು ಮೊದಲು ಆಯ್ದುಕೊಂಡ ಪ್ರಕಾರ ಕಾವ್ಯ. ವ್ಯಕ್ತಿಯ ಅನುಭವದ ವೈಯಕ್ತಿಕ ಭಾವಗಳು ಬಿತ್ತರವಾಗುವುದು, ರಸವತ್ತಾದ ಸೌಂದರ್ಯ ಶೈಲಿಯಾದ ಕವಿತೆಯಲ್ಲಿ. ಇಲ್ಲಿ ವಿಜಯಾದಬ್ಬೆ ಅವರ ರಚನೆಯು ಸ್ತ್ರೀಸಹಜ ಭಾವತೀವ್ರತೆಯ ನಡುಗೆಯನ್ನು ಕಂಡರು. ಹೆಚ್ಚು ಬುದ್ಧಿಗಿತ್ತ ಪ್ರಾಧಾನ್ಯತೆಯಿಂದ ಕವಿತೆಗಳಲ್ಲಿ ವಿಚಾರಶಕ್ತಿಯು ಕೆದಕುವ ಅಂಶವೆ ಕಾವ್ಯದ ವಸ್ತುವಾಗಿರುತ್ತದೆ. ವೈಚಾರಿಕ ಚಿಂತಕಿಯಾಗಿದ್ದರಿಂದ, ಕವಿತೆಗಳಲ್ಲಿ ನವೋದಯ, ನವ್ಯದ ಲಕ್ಷಣಗಳ ಹೊಳವು ಗೋಚರಿಸಿದರು. ಸ್ತ್ರೀವಾದಿ ನೆಲೆಯ ಬಂಡಾಯದ ಭಾವಗಳು ಚಿಂತನೆಯಂತೆ ಮಂಥನವಾಗಿ, ಬುದ್ಧಿಭಾವ ಮಿಳಿತವಾಗಿ ರೂಪುತಳೆಯುತ್ತವೆ.

ವಿಮರ್ಶಕಿಯಾಗಿ ಆ ಒಂದು ಸಾಲಿನಲ್ಲಿ ಇದ್ದ ಕೆಲವೇ ಲೇಖಕಿಯರಾದ ಬಿ.ಎನ್.ಸುಮಿತ್ರಾಬಾಯಿ, ಎನ್.ಗಾಯಿತ್ರಿ, ಗಾಯಿತ್ರಿನಾವಡ, ತೇಜಸ್ವಿನಿ ನಿರಂಜನ ನೇಮಿಚಂದ್ರ ಮುಂತಾದವರ ನಡುವೆ ಕೇಳಿಬರುವ ಬಹುದೊಡ್ಡ ಹೆಸರು 'ವಿಜಯಾದಬ್ಬೆ' ಸೃಜನಾತ್ಮಕ ಬರಹ ಅದರಲ್ಲೂ ವಿವೇಚನೆಯ, ಧೀಶಕ್ತಿಯ ಸೈದ್ಧಾಂತಕತೆಯ ನೆಲೆಯಿಂದ ಸಮಾಜದ ಸ್ತ್ರೀ ಶೋಷಣೆ, ಅಧಃಪತನದ ಅಸ್ತಿತ್ವವನ್ನು ಪ್ರಶ್ನಿಸುವ ಅವರ ಸ್ತ್ರೀಪರ ಕಾಳಜಿಯ ಸಂಘಟನ ಶಕ್ತಿಯಿಂದ. ಹಲವಾರು ಮಾನವೀಯ ಅಂತಃಕರಣ ಜೊತೆಗೆ, ಶೋಷಣೆಯ ಪ್ರತಿಭಟನೆಯ ಮೂಲಕ ಮಾನವಪರ ಚಿಂತಿಸುವ ವೈಚಾರಿಕ ರಚನೆ. ಬದುಕು-ಬರಹದ ವಿಶೇಷತೆಯನ್ನು ಓದುಗನಿಗೆ ಗತಿತಾರ್ಕಿಕವಾಗಿ ಬಿಂಬಿಸುತ್ತವೆ. ಮತ್ತು ಇವರ ಸಾಹಸಿಗುಣವು ಅಂದರೆ ಶೋಧಿಸಿ ಸಾಹಿತ್ಯವನ್ನು ಸಂಪಾದಿಸುವ, ಸಾಂಸ್ಕೃತಿಕವಾಗಿ ಪಾರಂಪರಿಕ ಅರಿವಿರದ ಹೊರತು, ಮಹಿಳಾ ಸಾಹಿತ್ಯದ ದೀರ್ಘ ಇತಿಹಾಸದ ಪರಿಚಯವಾಗದೆಂದು ತಿಳಿದಿದ್ದರು. ವಿಜಯಾ ಅವರ ಬರೆವಣಿಗೆಯ ಹಾದಿ, ಮಹಿಳಾ ಲೇಖಕಿಯರ ಸಾಹಿತ್ಯ ವಸ್ತುರಚನೆಗೆ ಸಾಮಾಜಿಕ ಆಯಾಮಗಳನ್ನು ತಾರ್ಕಿಕವಾಗಿ ಜಿಜ್ಞಾಸೆಗೆ ತೊಡಗಿಸುವುದು. ಇವರು ಸಂಪಾದನೆಯೊಂದಿಗೆ ವಿಶ್ಲೇಷಣೆಗೆ ಗುರಿಮಾಡುವ, ತಾತ್ವಿಕ ರಹದಾರಿಯ ದೃಷ್ಟಿಗೆ ಸಾಕ್ಷ್ಯವಾಗಿರುತ್ತವೆ.

ನಾಲ್ಕನೇ ಅಧ್ಯಾಯವು 'ಕಲಾಭಿವ್ಯಕ್ತಿ' ಭಾಗವು ಸಾಹಿತ್ಯರಚನೆಯು ಮೂಡಲು ಸಾಧಕವಾದ ಭಾಷೆಯ ವೈಶಿಷ್ಟ್ಯವನ್ನು ತೆರೆದಿಡುತ್ತದೆ. ಪ್ರತಿಯೊಬ್ಬ ಬರಹಗಾರರು ತಮ್ಮದೇ ಆದ ಭಾಷೆಯ ಸೊಗಸನ್ನು ಹೊಂದಿರುವುದರಿಂದ ಇಲ್ಲಿ ಸ್ತ್ರೀಸಂವೇದನೆ-ಯಿಂದ ಸಹಜವಾಗಿ ಸೂಕ್ಷ್ಮತಿಸೂಕ್ಷ್ಮ ಭಾಷೆಯ ಹಂದರವನ್ನು ನೋಡಬಹುದು. ಶೈಲಿಯ ಮೂಲಕ ಬರೆವಣಿಗೆಯ ದಾಟಿಯನ್ನು ಕಾಣಬಹುದು. ತಂತ್ರಗಾರಿಕೆ, ಧೋರಣೆಯು ವಸ್ತುಬಿಂಬಿಸುವ ವಿಶಿಷ್ಟ ನೋಟವನ್ನು ಅರಿಯಬಹುದಾಗಿದೆ.

ಸಂಗತಿಯನ್ನು ಶಕ್ತವಾಗಿ ನಿರೂಪಿಸಲು ಬಳಸುವ ಹಲವು ತಂತ್ರಗಾರಿಕೆ ಅದು ಕನಸು, ಪೌರಾಣಿಕ ಪಾತ್ರ ಬಳಕೆ ಹೀಗೆ ಗುರುತಿಸಬಹುದಾಗಿದೆ. ಧೋರಣೆಯು ಸ್ತ್ರೀವಾದಿ ಬಂಡಾಯ ನೆಲೆಯಾದರು, ಮಾನವಪರ ಕಾಳಜಿಯಿಂದ ಸಂವೇದನೆಯು ವೈಚಾರಿಕ ಹಾಗೂ ಪ್ರತಿಭಟನೆಯ ನೆಲೆಯಿಂದ ವಸ್ತುವಿನಲ್ಲಿ ಅಡಕಗೊಳಿಸಿ ಸಾಹಿತ್ಯರಚನೆಯನ್ನು ಮಾಡಿರುವುದನ್ನು ಅಧ್ಯಯನವು ಹೊಂದಿರುತ್ತದೆ.

ಐದನೇ ಅಧ್ಯಾಯವು 'ಉಪಸಂಹಾರ' ಭಾಗವಾಗಿದೆ. ಇದೆ ಈ ಎಲ್ಲಾ ಸಾಹಿತ್ಯ ಅಧ್ಯಯನದ ವಿಶೇಷತೆಯನ್ನು, ಸಂಕ್ಷಿಪ್ತ ಸಮರೋಪವಾಗಿ ವಿಷಯವನ್ನು ಸೂಚ್ಯವಾಗಿ ಒದಗಿಸುತ್ತದೆ.

'ವಿಜಯಾದಬ್ಬೆ ಸಾಹಿತ್ಯ ; ಒಂದು ಅಧ್ಯಯನ'ವು ಬದುಕಿನಲ್ಲಿ ಕಂಡ ಸಾಮಾಜಿಕ ವಿಚಾರ, ವಾಸ್ತವಿಕ ಸ್ಥಿತಿಯಿಂದ ತೆರೆದುಕೊಂಡ ಪ್ರಜ್ಞೆ ವಿವೇಕದಿಂದ, ಮಾನವ ಪರದಟ್ಟ ಜೀವನಪ್ರೀತಿ ಮತ್ತು ವಿಚಾರನೆಲೆಯಿಂದ ಮೂಡಿದ್ದೆ ಇವರ ಬರೆವಣಿಗೆ ಎಂದು ಹೇಳಬಹುದು. ಯಾವುದೇ ಸಾಹಿತ್ಯಕೃತಿಯ ಅಧ್ಯಯನವು ಅಂದರೆ ಸೃಜನಶೀಲ, ಸೃಜನೇತರ ಯಾವ ಪ್ರಕಾರಗಳೇ ಆದರೂ ಅವುಗಳು ಬಿಚ್ಚಿಡುವ ಗತಿಸ್ಥಿತಿಯ ವಸ್ತು ಪರ್ಯಂತದಿಂದ ಮಾತ್ರ ನೆಲೆ-ಬೆಲೆಯನ್ನು ಆ ಒಂದು ಮಾರ್ಗದಲ್ಲಿ ಚಿರಂತನವಾಗಿ ಉಳಿಸಿಕೊಳ್ಳುವುದು. ಇಂತಹ ಸಾಹಿತ್ಯ ಕುರಿತ ಸಾಧಾರಣೀಕರಣ ಹೇಳಿಕೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಒಂದು ಕೃತಿ ಅಥವಾ ಸಾಹಿತ್ಯವು ಹೊಂದಿರುವ ವಸ್ತುವು, ವಿಚಾರಸಂಪತ್ತಿಯಿಂದ ಪ್ರೌಢವಾದ ಜೀವನ ನಿಷ್ಠೆಯಿಂದ, ಸಮಾಜದಲ್ಲಿ ಅದು ಕಂಡುಕೊಳ್ಳುವ ಅಸ್ತಿತ್ವವೆ ಆಗಿರುತ್ತದೆ. ಈ ದೃಷ್ಟಿಯಿಂದ ವಿಜಯಾದಬ್ಬೆ ಅವರ ಸಾಹಿತ್ಯ ರಚನೆ ಅಂದಿಗೆ ಮಾತ್ರವಲ್ಲ ಇಂದಿಗೂ ಸಲ್ಲುತ್ತವೆ ಹಾಗೂ ಮುಂದೆಯೂ ಉಳಿಯುತ್ತ ಸಾಗುವಂಥದ್ದು. ಅಂದರೆ ವಿಜಯಾದಬ್ಬೆ ಅವರು ವಿಮರ್ಶಾ ಲೇಖಕಿಯಾಗಿ ನೀಡಿದ ಬರಹಗಳಿಂದ, ಅವುಗಳ ವಸ್ತು-ವಿಷಯವು ಬಿಂಬಿಸುವ ಸ್ತ್ರೀಸಬಲಿಕರಣ ಮತ್ತು ವಿಮೋಚನೆಗೆ ಸಂಬಂಧಿಸಿದಂತೆ ಶಿಕ್ಷಣ, ನ್ಯಾಯಾಂಗ, ಕಾನೂನು, ಲಿಂಗಾಧಾರಿತ ಅಸಮಾನತೆ, ರಾಜಕೀಯ ಮೀಸಲಾತಿ, ಹಿಂದೂ ವಿಧವೆ ಪರಿಸ್ಥಿತಿ, ವರದಕ್ಷಿಣೆ ಸಮಸ್ಯೆ ಕುರಿತು, ಮಹಿಳಾವಾದ, ಪ್ರತಿಭಟನೆಯಲ್ಲಿ ಮಹಿಳೆ, ಇಂತಹ ಹಲವು ಅಂಶಗಳನ್ನು ಸಾಹಿತ್ಯದಲ್ಲಿ ನೀಡಿರುವುದರಿಂದ ಹಾಗೂ ಸಿದ್ಧಾಂತ ವಿಚಾರಗಳಾದ ಸ್ತ್ರೀವಾದ, ಸ್ತ್ರೀವಾದಿ ವಿಮರ್ಶೆ, ಕಪ್ಪು ಸ್ತ್ರೀವಾದದಂತ ಅಂಶಗಳಿಂದಲೂ ವಿಜಯಾ ಅವರ ಸಾಹಿತ್ಯ ನಿಲುವು ಇಂದಿಗೂ ಅವಶ್ಯವಾಗಿವೆ.

ಬಹುಮುಖ್ಯವಾಗಿ ಮಹಿಳಾ ಸಾಹಿತ್ಯದ ಬಗ್ಗೆ ಹೊಂದಿರುವ ಕಾಳಜಿಯಿಂದಾಗಿ ಸಂಶೋಧನೆ-ಸಂಪಾದನೆಯಿಂದಾಗಿ ಹಲವು ಮಹಿಳಾ ಲೇಖಕಿಯರ ಬದುಕು-ಬರಹ ಕುರಿತು ನಡೆಸಿದ ಶೋಧನೆಯ ಫಲವಾಗಿ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ಕಣ್ಮರೆಯಾಗುತ್ತಿದ್ದ ಬಹಳ ಮುಖ್ಯ ಲೇಖಕಿಯರಾದ, ತಿರುಮಲಾಂಬ, ಸರಸ್ವತಿದೇವಿಗೌಡ, ಶ್ಯಾಮಲಾ, ಸರಸ್ವತಿಬಾಯಿ ರಾಜವಾಡೆ, ವಾಸಂತಿಬಾಯಿ ಪಡುಕೋಣೆ, ಶಾಂತಾಬಾಯಿ ನೀಲಗಾರ ಇಂತಹ ಬರಹಗಾರ್ತಿಯರ ಸಾಹಿತ್ಯವಸ್ತು, ವಿಶ್ಲೇಷಣೆಯೊಂದಿಗೆ ಬದುಕಿನ ಆಯಾಮಗಳ ಹಿನ್ನೆಲೆಯನ್ನು ನೀಡುತ್ತಾರೆ. ಇದರಿಂದ ಮಹಿಳಾ ಸಾಹಿತ್ಯದ ಬಹುದೊಡ್ಡ ಕೊರತೆಯನ್ನು ಇವರ ಈ ಸಾಧನೆಯಿಂದ ತುಂಬುವಂತಾಗಿದೆ ಎಂದು ಹೇಳಬಹುದು.

ಒಟ್ಟಾರೆ ವಿಜಯಾದಬ್ಬೆಯ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸಿದಾಗ ಹಳಗನ್ನಡದ ಸಾಹಿತ್ಯದ ಬಗೆಗಿನ ಆಸಕ್ತಿ, ಹೊಸಗನ್ನಡ ಮಹಿಳಾ ಸಾಹಿತ್ಯ ಕುರಿತು ಕಾಳಜಿ, ಮಹಿಳೆಯರನ್ನು ಕುರಿತು ಚಿಂತನೆ ಮತ್ತು ಸಕ್ರಿಯ ಹೋರಾಟ ದನಿಯ ಮೂಲಕ ಇವರ ದೃಷ್ಟಿ ಧೋರಣೆಯು ಆಧುನಿಕ ಮಹಿಳಾ ಸಾಹಿತ್ಯದಲ್ಲಿ ತೆರೆದುಕೊಂಡ ರೀತಿಯು ಸದಾ ಅನುಸರಣೆಯ ಸೈದ್ಧಾಂತಿಕ ನೆಲೆಯಲ್ಲಿ ಸಾಹಿತ್ಯ ಅಧ್ಯಯನವು ಸ್ತ್ರೀಪರ ಜೀವನ್ಮುಖಿಧಾರೆಯಾಗಿ ನವಿರಾಗಿ ಮೂಡಿ, ಬಂಡಾಯದ ಧೋರಣೆ ಸ್ತ್ರೀಪರ ದನಿಯಾಗಿ ಒಟ್ಟಾರೆಯಾಗಿ ಸಾಹಿತ್ಯಧ ನಿರೂಪಣೆಯಾಗುತ್ತದೆ. ಸ್ತ್ರೀವಾದಿ ಲೇಖಕಿಯಾಗಿ ಅದಕ್ಕೂ ಮಿಗಿಲಾಗಿ ವಿಮರ್ಶಕಿಯಾಗಿ ಛಾಪು ಮೂಡಿಸುವುದು ವಿಜಯಾದಬ್ಬೆ ಅವರ ಸಾಹಿತ್ಯಲೋಕದ ನೆನೆವು. ಈ ಎಲ್ಲಾ ಅಧ್ಯಯನದಿಂದ ನೋಡಿದಾಗ ವಿಜಯಾದಬ್ಬೆ ಕುರಿತು ಹೇಳಲೇಬೇಕಾದ ಒಂದು ವಿಷಯವೆಂದರೆ ಈ ನಿಬಂಧ ರಚನೆಗೆ ಮೂಲಕೃತಿಗಳ ಹುಡುಕುವಾಗ, ಲೇಖಕಿಯನ್ನು ಭೇಟಿಯಾದ ವೇಳೆ ಅವರ ಮುಗ್ಧ, ಸಹಜ ನಗುವಿನೊಂದಿಗೆ ತಮ್ಮ ಆರೋಗ್ಯ ಕುರಿತ ಎರಡು ಮಾತುಗಳು "ನೋವು ಕಡಿಮೆಯಾಗಿದೆ ದಿನ ಬೆಳಿಗ್ಗೆ ಸಂಜೆ ಮಾತ್ರೆ ತಗೋ ಬೇಕು" ಎಂದ ಅವರ ಮಾತು, ವಿಚಾರಚಿಂತನೆಯ ಒಡಲಾಗಿದ್ದ ಅವರ ಹಿಂದಿನ ಸ್ಥಿತಿಯನ್ನು ಸ್ಮೃತಿಪಟಲಕ್ಕೆ ತಂದುಕೊಂಡರೆ 'ಬದುಕು ಜಟಾಕಬಂಡಿ ವಿಧಿ ಅದರ ಸಾಹೇಬಾ' ಎಂಬ ಸಾಲು ಅಷ್ಟೇ ಸತ್ಯವಾಗಿ ಗೋಚರಿಸುತ್ತದೆ.

ಗ್ರಂಥಸೂಚಿ

೧. ಸ್ತ್ರೀವಾದ : ಡಾ. ಬಿ.ಎನ್. ಸುಮಿತ್ರಾಬಾಯಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, ಎರಡನೇ ಮುದ್ರಣ,
೨೦೦೬

೨. ಸ್ತ್ರೀವಾದ ಮತ್ತು ಭಾರತೀಯತೆ : ಧರಣೀದೇವ ಮಾಲಗತ್ತಿ
ಚೇತನ ಬುಕ್‌ಹೌಸ್
ಮೈಸೂರು, ಮುದ್ರಣ, ೧೯೯೮

೩. ವಿಜಯಾದಬ್ಬೆ (ಅನನ್ಯ ಮಹಿಳಾ ಚೇತನಮಾಲಿಕೆ) : ಶಾಂತಕುಮಾರಿ
ಸ್ವಪ್ನ ಬುಕ್ ಹೌಸ್, ಮುದ್ರಣ ೧೯೯೮.

೪. ನೀರುಲೋಹದ ಚಿಂತೆ, ವಿಮರ್ಶೆ : ಪ್ರಭುಗಣೇಶ್, ಅಖಿಲಾ ಏಜನ್ಸೀಸ್,
ಮೈಸೂರು ಮುದ್ರಣ, ೨೦೦೪

೫. ನಾರಿ : ದಾರಿ – ದಿಗಂತ : ವಿಜಯಾದಬ್ಬೆ, ರಚನಾ ಪ್ರಕಾಶನ,
ಮೈಸೂರು ಮುದ್ರಣ, ೧೯೯೭.

೬. ಸಾನಂದ ಗಣೇಶ ಸಾಂಗತ್ಯ : ಸಂ. ಡಿ.ವಿಜಯ, ಆರ್.ಎನ್.ವಿಜಯಲಕ್ಷ್ಮಿ
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.,
ಪ್ರಸಾರಾಂಗ, ಮುದ್ರಣ, ೧೯೭೬.

೭ ನಯಸೇನ : ಡಿ.ವಿಜಯ, ಪ್ರಸಾರಾಂಗ, ಮೈಸೂರು
ವಿ.ವಿ. ಮುದ್ರಣ, ೧೯೭೭.

೮. ಹಿತೈಷಿಣಿಯ ಹೆಜ್ಜೆಗಳು : ಸಂ. ವಿಜಯಾದಬ್ಬೆ
ಕನ್ನಡ ಮತ್ತು ಸಂಸ್ಕೃತ ಇಲಾಖೆ,
ಬೆಂಗಳೂರು ಮುದ್ರಣ, ೧೯೯೨

೯. ಇತಿಗೀತಿಕೆ : ವಿಜಯಾದಬ್ಬೆ
ರಚನಾ ಪ್ರಕಾಶನ, ಮೈಸೂರು
ಮುದ್ರಣ : ೧೯೯೬.

೧೦. ಮಹಿಳೆ ಸಾಹಿತ್ಯ – ಸಮಾಜ : ವಿಜಯಾದಬ್ಬೆ
ರಚನಾ ಪ್ರಕಾಶನ, ಮೈಸೂರು
ಮುದ್ರಣ : ೧೯೮೯

೧೧. ನಾಗಚಂದ್ರ (ಮುತ್ತಿನ ಹಾರಮಾಲಿಕೆ) : ಸಂ. ವಿಜಯಾದಬ್ಬೆ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಮುದ್ರಣ : ೧೯೯೬

೧೨. ವಿಜಯಾನ್ವೇಷಣ : ಸಂ. ಡಾ. ಎಸ್.ಡಿ. ಶಶಿಕಲಾ ಇತ್ಯಾದಿ
ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ
ಸಮಿತಿ, ಮೈಸೂರು
ಮುದ್ರಣ : ೨೦೦೪

೧೩. ಕನ್ನಡ ಸಾಹಿತ್ಯ ಮತ್ತು ಮಹಿಳೆ (ವಿಚಾರ ಸಂಕೀರಣ ಲೇಖನಗಳು) : ಸಂ. ಡಾ. ಸಬಿಹಾ ಭೂಮಿಗೌಡ
ಡಾ. ಮಲ್ಲಿಕಾ ಘಂಟಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, ಮುದ್ರಣ ೨೦೦೬

೧೪. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್.ಶೇಷಗಿರಿರಾವ್
ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
ನಾಲ್ಕನೆಯ ಮುದ್ರಣ : ೨೦೦೮

೧೫. ಕನ್ನಡ ಸಾಹಿತ್ಯ ಮೀಮಾಂಸೆ : ಸಂ: ಡಾ. ಸಬಿಹಾ ಭೂಮಿಗೌಡ

೧೬. ಶತಮಾನದ ಸಾಹಿತ್ಯ ವಿಮರ್ಶೆ : ಕೀರ್ತಿನಾಥ ಕುರ್ತುಕೋಟಿ



ವಿಜಯಾದಬ್ಬೆ

